18 August 2026 Tuesday | SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಸಮಯ ಮತ್ತು ಪ್ರಾಣ ಇವೆರಡು ಒಂದು ಸಲ ಹಾರಿ ಹೋದರೆ, ಮತ್ತೇ ಅದೇ ಗೂಡು ಸೇರುವುದಿಲ್ಲ!

-ಸ್ನೇಹಾ ಆನಂದ್

info.varthaman@gmail.com


ಬಿ.ನಾಗೇಂದ್ರರನ್ನು ಸಚಿವ ಸಂಪುಟದಿಂದ ಕೈಬಿಡುವಂತೆ ಒತ್ತಾಯ — ಪುಟ ಸಂ. 2


ಇಂದಿನಿಂದ ಕಲಿಕಾ ಖಾತ್ರಿ ಪರೀಕ್ಷೆಗಳು: ಕೋಟೆ ಬಿಇಒ ಮಾದರಿ — ಪುಟ ಸಂ. 3


ಶೂಟೌಟ್ ಪ್ರಕರಣ: 15 ಲಕ್ಷ ರೂ. ಪರಿಹಾರ ವಿತರಣೆ — ಪುಟ ಸಂ. 4

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಕೊಡಗು | ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 253 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

# ಸುಪ್ರೀಂಕೋರ್ಟ್‌ನಲ್ಲೂ ಕರ್ನಾಟಕಕ್ಕೆ ಶಾಕ್

## ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಆದೇಶ ಪಾಲಿಸಲು ಸೂಚನೆ

**ನವದೆಹಲಿ:** ತಮಿಳುನಾಡಿಗೆ ಕಾವೇರಿ ನೀರು ಹರಿಸುವ ವಿಚಾರದಲ್ಲಿ ಕರ್ನಾಟಕಕ್ಕೆ ಸುಪ್ರೀಂ ಕೋರ್ಟ್‌ನಲ್ಲೂ ಹಿನ್ನಡೆಯಾಗಿದೆ. ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ (ಸಿಡಿಎಂಎ) ನೀಡಿ ರುವ ಆದೇಶವನ್ನು ಪಾಲಿಸುವಂತೆ ಕರ್ನಾಟಕಕ್ಕೆ ಸುಪ್ರೀಂ ಕೋರ್ಟ್ ಆದೇಶಿಸಿದೆ.

ತಮಿಳುನಾಡಿಗೆ ಪ್ರತಿನಿತ್ಯ 15 ದಿನಗಳ ಕಾಲ 12 ಸಾವಿರ ಕ್ಯೂಸೆಕ್ ನೀರು ಹರಿಸುವ ಅದೇಶವನ್ನು ಸುಪ್ರೀಂ ಕೋರ್ಟ್ ಮುಂದುವ ರಿಸಿದೆ. ಪ್ರಕರಣದ ಮುಂದಿನ ವಿಚಾರಣೆಯನ್ನು ಒಂದು ವಾರ ಮುಂದೂಡಲಾಗಿದೆ.

ತಮಿಳುನಾಡು ಸಲ್ಲಿಸಿದ್ದ ಅರ್ಜಿಯ ವಿಚಾ ರಣೆ ನಡೆಸಿದ ಸುಪ್ರೀಂ ಕೋರ್ಟ್, ಸಿಡಿಎಂಎ ಆದೇಶದಂತೆ ಕರ್ನಾಟಕ ನೀರು ಹರಿಸಬೇಕು ಎಂದು ಸುಪ್ರೀಂ ಕೋರ್ಟ್ ಸೂಚಿಸಿದೆ. ಕಾವೇರಿ ಅಚ್ಚುಕಟ್ಟು ಪ್ರದೇಶದಲ್ಲಿ ಮಳೆಯ ಪ್ರಮಾಣ ಕಡಿಮೆಯಾಗಿರುವ ಹಿನ್ನೆಲೆಯಲ್ಲಿ ನೀರು ಹರಿ ಸುವ ವಿಚಾರದಲ್ಲಿ ಕರ್ನಾಟಕ ಹಾಗೂ ತಮಿಳು ನಾಡಿನ ನಡುವೆ ಮತ್ತೆ ವಿವಾದ ತೀವ್ರಗೊಂಡಿದೆ.

ವಾದ ಹಾಗೂ ಪ್ರತಿವಾದ ಆಲಿಸಿದ ನ್ಯಾಯಾಲಯ ಅಂತಿಮವಾಗಿ ಸಿಡಿಎಂಎ ನೀಡಿರುವ ಆದೇಶವನ್ನು ಪಾಲಿಸುವಂತೆ ಕರ್ನಾಟಕಕ್ಕೆ ಸೂಚಿಸಿದೆ. ನಿತ್ಯ 12 ಸಾವಿರ ಕ್ಯೂಸೆಕ್ ನೀರು ಹರಿಸುವ ಆದೇಶವನ್ನು ಮುಂದುವರೆಸುವಂತೆ ತಿಳಿಸಿದ್ದು, ಪ್ರಕರಣದ ಮುಂದಿನ ವಿಚಾರಣೆ ಸೋಮವಾರಕ್ಕೆ ಮುಂದೂಡಿದೆ.



### ತ.ನಾಡಿನ ವಾದವೇನು?

ಕರ್ನಾಟಕದಿಂದ ನಿತ್ಯ 12 ಸಾವಿರ ಕ್ಯೂಸೆಕ್ ನೀರು ಹರಿಸುವಂತೆ ಸಿಡಿಎಂಎ ಸೂಚನೆ ನೀಡಿದ್ದರೂ ನಿರೀಕ್ಷಿತ ಪ್ರಮಾಣದ ನೀರು ತಮಿಳುನಾಡಿಗೆ ತಲುಪುತ್ತಿಲ್ಲ ಎಂದು ತಮಿಳು ನಾಡು ಸುಪ್ರೀಂ ಕೋರ್ಟ್ ಮುಂದೆ ಆರೋ ಪಿಸಿತು. ಸದ್ಯ ನಿತ್ಯ ಕೇವಲ 5ರಿಂದ 6 ಸಾವಿರ ಕ್ಯೂಸೆಕ್‌ನಷ್ಟು ನೀರು ಹರಿದುಬರುತ್ತಿದೆ. ತಮಿಳುನಾಡಿಗೆ 64 ಟಿಎಂಸಿ ನೀರು ಹರಿ ಸಬೇಕಾಗಿತ್ತು. ಆದರೆ, ಇದುವರೆಗೆ ಸುಮಾರು 13ರಿಂದ 14 ಟಿಎಂಸಿ ನೀರು ಮಾತ್ರ ಲಭಿಸಿದೆ. ಹೀಗಾಗಿ ಸಿಡಿಎಂಎ ಆದೇಶವನ್ನು ಕಟ್ಟುನಿ ಟ್ಟಾಗಿ ಜಾರಿಗೊಳಿಸುವಂತೆ ಕರ್ನಾಟಕಕ್ಕೆ ಸೂಚಿಸಬೇಕು ಎಂದು ಮನವಿ ಮಾಡಿತು.

### ಕರ್ನಾಟಕದ ವಾದವೇನು?

ತಮಿಳುನಾಡಿಗೆ ಈಗಾಗಲೇ ಸಿಡಿಎಂಎ ಆದೇ ಶದಂತೆ ಸುಮಾರು 3,500 ಕ್ಯೂಸೆಕ್ ನೀರು ಹರಿಸಲಾಗಿದೆ ಎಂದು ನ್ಯಾಯಾಲಯಕ್ಕೆ ತಿಳಿಸಿ ದ್ದಾರೆ. ಸಿಡಿಎಂಎ ಆದೇಶ ಪಾಲಿಸಲು ರಾಜ್ಯ ಪ್ರಯತ್ನಿಸುತ್ತಿದೆ ಎಂದು ಕರ್ನಾಟಕದ ಪರ ವಕೀಲರು ವಾದಿಸಿದರು.

ನಿತ್ಯ 12 ಸಾವಿರ ಕ್ಯೂಸೆಕ್ ನೀರು ಹರಿಸಲು ಪ್ರಾಧಿಕಾರ ಕರ್ನಾಟಕಕ್ಕೆ ಸೂಚನೆ ನೀಡಿದೆ. ಆದರೆ ಸದ್ಯ ಕಾವೇರಿ ಕೊಳ್ಳದ ಜಲಾಶಯ ಗಳಲ್ಲಿ ನಿತ್ಯ ಐದಾರು ಸಾವಿರ ಕ್ಯೂಸೆಕ್ ನೀರು ಬರುತ್ತಿದೆ. ಈವರೆಗೂ 13–14 ಟಿಎಂಸಿ ನೀರು ಮಾತ್ರ ಬಂದಿದೆ ಎನ್ನುವುದು ಕರ್ನಾಟಕದ ವಾದ. ಬಿಳಿಗುಂಡ್ಲು ಬಳಿ ನೀರಿನ

ಪುಟ 2ಕ್ಕೆ

# ಮೂವರ ಎನ್‌ಕೌಂಟರ್ ಪ್ರಕರಣ: ಆಡಳಿತ–ವಿಪಕ್ಷಗಳ ವಾಕ್ಸಮರ

**ಬೆಂಗಳೂರು:** ವಿಧಾನಸಭೆ ಕಲಾಪದಲ್ಲಿ ಸೋಮವಾರ ಹನೂರು ಎನ್‌ಕೌಂಟರ್ ಪ್ರಕ ರಣ ಭಾರೀ ಚರ್ಚೆಗೆ ಕಾರಣವಾಯಿತು. ಮೂವರು ಬೇಟೆಗಾರರ ಎನ್‌ಕೌಂಟರ್ ಪ್ರಕರಣ ಕುರಿತು ಸರ್ಕಾರ ಸ್ಪಷ್ಟನೆ ನೀಡ ಬೇಕು ಎಂದು ವಿಪಕ್ಷ ನಾಯಕ ಆರ್.ಅಶೋಕ್ ಆಗ್ರಹಿಸಿದರು.

ತಮಿಳುನಾಡು ಮುಖ್ಯಮಂತ್ರಿ ಕೂಡ ಘಟನೆ ಕುರಿತು ಮಾತನಾಡಿದ್ದಾರೆ. ರಾಜ್ಯ ದಲ್ಲಿ ತಮಿಳಿಗರಿಗೆ ರಕ್ಷಣೆ ಇಲ್ಲ ಎಂದು ಆರೋಪ ಮಾಡಿದ್ದಾರೆ. ಈ ಬಗ್ಗೆ ಸರ್ಕಾರ ಗಂಭೀರವಾಗಿ ಸ್ಪಷ್ಟನೆ ನೀಡಬೇಕು ಎಂದು ಒತ್ತಾಯಿಸಿದರು.

ವಿಪಕ್ಷಗಳ ಆರೋಪಕ್ಕೆ ಡಿಸಿಎಂ ಪರ ಮೇಶ್ವರ್ ಪ್ರತಿಕ್ರಿಯಿಸಿ, ಮೊದಲು ಪ್ರಶ್ನೋತ್ತರ ಕಲಾಪಕ್ಕೆ ಅವಕಾಶ ನೀಡಬೇಕು. ಬಳಿಕ ಪ್ರಕ ರಣದ ಕುರಿತು ಚರ್ಚೆಗೆ ನಿಲುವಳಿ ಸೂಚನೆ ನೀಡುವಂತೆ ಸಲಹೆ ನೀಡಿದರು. ಈ ವೇಳೆ ಮಧ್ಯಪ್ರವೇಶಿಸಿದ ಬಿಜೆಪಿ ಶಾಸಕ ಸುನೀಲ್



ಕುಮಾರ್, ಸರ್ಕಾರ ಘಟನೆ ಬಗ್ಗೆ ಸ್ವಯಂ ಪ್ರೇರಿತ ಹೇಳಿಕೆ ನೀಡುತ್ತದೆ ಎಂದುಕೊಂಡಿದ್ದೆವು. ಸರ್ಕಾರ ಹೇಳಿಕೆ ನೀಡದ ಹಿನ್ನೆಲೆಯಲ್ಲಿ ನಾವೇ ವಿಷಯ ಪ್ರಸ್ತಾಪಿಸಿದ್ದೇವೆ ಎಂದು ಹೇಳಿದರು.

ಪರಮೇಶ್ವರ್ ಅವರ ಮಾತಿಗೆ ತಿರುಗೇಟು ನೀಡಿದ ಸುನೀಲ್ ಕುಮಾರ್, ಚರ್ಚೆಗೆ ನೋಟಿಸ್ ಕೊಡಿ ಅಂತಿದ್ದೀರಲ್ಲ, ಎನ್‌ಕೌಂಟರ್ ಮಾಡುವ ಮುನ್ನ ನೀವು ಸತ್ತವರಿಗೆ ನೋಟಿಸ್ ಕೊಟ್ಟಿದ್ದೀರಾ? ಎಂದು ಪ್ರಶ್ನಿಸಿದರು. ಇದರಿಂದ ಆಡಳಿತ ಮತ್ತು ವಿಪಕ್ಷ ಸದಸ್ಯರ ನಡುವೆ ವಾಕ್ಸಮರ ನಡೆಯಿತು. ಸದನದಲ್ಲಿ ಕೆಲಕಾಲ ಗದ್ದಲದ ವಾತಾವರಣ ನಿರ್ಮಾಣವಾಯಿತು.

ವಿಪಕ್ಷಗಳ ನಿರಂತರ ಆಗ್ರಹದ ಹಿನ್ನೆಲೆಯಲ್ಲಿ ಸರ್ಕಾರ ಪ್ರಕರಣದ ಕುರಿತು ಸದನದಲ್ಲಿ ಸ್ಪಷ್ಟನೆ ನೀಡಿತು. ಅರಣ್ಯ ಸಚಿವ ರಾಮಲಿಂಗಾರೆಡ್ಡಿ ಅವರು ಹನೂರು ಎನ್‌ಕೌಂಟರ್ ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ಕಾರದ ನಿಲುವನ್ನ ಸದನದಲ್ಲಿ ವಿವರಿಸಿದರು.

ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ ಅಶೋಕ್, ಸರ್ಕಾರಕ್ಕೆ ಮಾನ–ಮರ್ಯಾದೆ ಇಲ್ಲ. ಇದು ಎನ್‌ಕೌಂಟರ್ ಅಲ್ಲ ಕೊಲೆ ಎಂದು ಟೀಕಿಸಿದರು.

ಇದರಿಂದ ಸದನದಲ್ಲಿ ಆಡಳಿತ ಮತ್ತು ವಿಪಕ್ಷ ಸದಸ್ಯರ ನಡುವೆ ಮತ್ತೆ ಗದ್ದಲ ಹಾಗೂ ವಾಕ್ಸಮರ ಮುಂದುವರಿದ ಹಿನ್ನೆಲೆ ಮಧ್ಯಾಹ್ನ 2 ಗಂಟೆಗೆ ಸದನ ಮುಂದೂಡಲಾಯಿತು.

## ವಿಧಾನ ಪರಿಷತ್‌ನಲ್ಲೂ ಸಚಿವ ನಾಗೇಂದ್ರ ಪ್ರಕರಣದ ಪ್ರತಿಧ್ವನಿ

**ಬೆಂಗಳೂರು:** ಚಾಮರಾಜನಗರ ಅರಣ್ಯದಲ್ಲಿ ನಡೆದ ಎನ್‌ಕೌಂಟರ್ ಪ್ರಕರಣ ವಿಧಾನ ಪರಿಷತ್‌ನಲ್ಲಿ ಪ್ರತಿಧ್ವನಿಸಿತು. ಕಲಾಪ ಪ್ರಾರಂಭ ಆಗುತ್ತಲೇ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ವಿಷಯ ಪ್ರಸ್ತಾಪಿಸಿದರು.



ಚಾಮರಾಜನಗರದಲ್ಲಿ ಅಮಾನವೀಯ ಘಟನೆ ನಡೆದಿದೆ. ಮೂವರ ಎನ್‌ಕೌಂಟರ್ ಆಗಿದೆ. ನೇರವಾಗಿ ಗುಂಡಿಟ್ಟು ಕೊಲ್ಲಲಾಗಿದೆ. ಇದಕ್ಕೆ ಸರ್ಕಾರ ಹೇಳಿಕೆ ಕೊಡಬೇಕು. ತಹಶೀಲ್ದಾರ್ ತನಿಖೆ ಬೇಡ. ನ್ಯಾಯಾಂಗ ತನಿಖೆ ಆಗಬೇಕು. ಸರ್ಕಾರ ಉತ್ತರ ಕೊಡಬೇಕು ಎಂದು ಆಗ್ರಹಿಸಿದರು. ಇದೇ ವೇಳೆ ವಿಪಕ್ಷ ಸದಸ್ಯರು ಧ್ವನಿಗೂಡಿಸಿದರು.

ಆಡಳಿತ ಪಕ್ಷದ ಸದಸ್ಯರು ಪ್ರಶ್ನೋತ್ತರ

ಪುಟ 2ಕ್ಕೆ

## ಉಪಸಭಾಪತಿ ಸ್ಥಾನಕ್ಕೆ ಉಮಾಶ್ರೀ ನಾಮಪತ್ರ

**ಬೆಂಗಳೂರು:** ವಿಧಾನ ಪರಿಷತ್ ಉಪ ಸಭಾಪತಿ ಸ್ಥಾನಕ್ಕೆ ಕಾಂಗ್ರೆಸ್ ಸದಸ್ಯೆ ಉಮಾಶ್ರೀ ಆಯ್ಕೆ ಬಹುತೇಕ ಖಚಿತವಾಗಿದೆ. ಉಮಾಶ್ರೀ ಸೋಮವಾರ ನಾಮಪತ್ರ ಸಲ್ಲಿಕೆ ಮಾಡಿದರು. ಆ.18ರಂದು ಚುನಾವಣೆ ನಡೆಯಲಿದೆ. ಬಿಜೆಪಿ– ಜೆಡಿಎಸ್ ಅಭ್ಯರ್ಥಿ ಹಾಕದೆ ಇರುವುದರಿಂದ ಉಮಾಶ್ರೀ ಅವರ ಆಯ್ಕೆ ಖಚಿತವಾಗಿದೆ. ಸಿಎಂ ಡಿಕೆಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ ಹರಿಪ್ರಸಾದ್ ಸೇರಿ ಹಲವರ ಸಮ್ಮುಖದಲ್ಲಿ ಉಮಾಶ್ರೀ ನಾಮಪತ್ರ ಸಲ್ಲಿಕೆ ಮಾಡಿದರು.





ಕರ್ನಾಟಕ ಪ್ರದೇಶ ಜನತಾದಳ (ಜಾತ್ಯತೀತ)





ಬಿಡದಿಯಲ್ಲಿ ನಡೆಸಲು ಹೊರಟಿರುವುದು ಅಭಿವೃದ್ಧಿಯೋ ಅಥವಾ ₹15,000 ಕೋಟಿ ನಿವ್ವಳ ಲಾಭದ ರಿಯಲ್ ಎಸ್ಟೇಟ್ ದಂಧೆಯೋ?

ಮುಖ್ಯಮಂತ್ರಿ ಅವರೇ, ಬಿಡದಿ ಸತ್ಯಕ್ಕೆ ಉತ್ತರಿಸಿ

1. ಯುಪಿಎ (UPA) ಸರ್ಕಾರ ಜಾರಿಗೆ ತಂದ 2013ರ ಕೇಂದ್ರ ಭೂಸ್ವಾಧೀನ ಕಾಯ್ದೆಯಡಿ ಸಾಮಾಜಿಕ ಪರಿಣಾಮಗಳ ಅಧ್ಯಯನ (SIA) ಕಡ್ಡಾಯವಾಗಿದ್ದರೂ, ರೈತರ ಒಪ್ಪಿಗೆಯನ್ನು ತಪ್ಪಿಸಲು 1987ರ ಹಳೆಯ KUDA ಕಾಯ್ದೆಯನ್ನು ದುರ್ಬಳಕೆ ಮಾಡಿಕೊಂಡು ಏಕಪಕ್ಷೀಯವಾಗಿ ಭೂಸ್ವಾಧೀನ ಮಾಡುತ್ತಿರುವುದು ಬಡರೈತರ ಮತ್ತು ಕೃಷಿ ಕಾರ್ಮಿಕರ ವಿರುದ್ಧದ ಜನವಿರೋಧಿ ಕೃತ್ಯವಲ್ಲವೇ?

2. ಬಡರೈತರ ಕೃಷಿ ಭೂಮಿಯನ್ನು ಕಸಿದುಕೊಂಡು, ಚದರ ಅಡಿಗೆ ₹2,200 (ಕೈಗಾರಿಕೆ) ಮತ್ತು ₹2,300 (ವಾಣಿಜ್ಯ) ದರದಲ್ಲಿ ಮಾರಿ ₹33,562 ಕೋಟಿ ವಹಿವಾಟು ನಡೆಸಲು ಸರ್ಕಾರ ಮುಂದಾಗಿದೆ. ₹18,133 ಕೋಟಿ ಹೂಡಿಕೆ ಮಾಡಿ ₹15,000 ಕೋಟಿಗೂ ಅಧಿಕ ನಿವ್ವಳ ಲಾಭ ಮಾಡಿಕೊಳ್ಳ ಹೊರಟಿರುವುದು ರಿಯಲ್ ಎಸ್ಟೇಟ್ ದಂಧೆಯಲ್ಲವೇ?

3. HUDCO ಸಾಲದ ಭದ್ರತೆಗಾಗಿ BMRDA ವ್ಯಾಪ್ತಿಯ ₹3,500 ಕೋಟಿ ಮೌಲ್ಯದ ಸಾರ್ವಜನಿಕ ಉದ್ಯಾನವನ ಹಾಗೂ CA ಸೈಟ್‌ಗಳನ್ನು ಅಡಮಾನ (Equitable Mortgage) ಇಡುತ್ತಿರುವುದು ಎಷ್ಟು ಸಮಂಜಸ?

4. ಯಾವುದೇ ಪರಿಸರ ಸಮೀಕ್ಷೆ (EIA) ನಡೆಸದೆ, 10 ಲಕ್ಷ ತೆಂಗು, ಮಾವಿನ ಮರಗಳನ್ನು ಕಡಿಯಲು ಮತ್ತು ಬೆಂಗಳೂರಿಗೆ ಸರಬರಾಜಾಗುವ 6 ಲಕ್ಷ ಲೀಟರ್ ಹಾಲಿನ ಉದ್ಯಮವನ್ನು ನಾಶಮಾಡಲು ಹೊರಟಿರುವುದು ನ್ಯಾಯವೇ?

5. ಬಿಡದಿ ಪ್ರದೇಶವು 'ವಿಶೇಷ ಕೃಷಿ ವಲಯ' (Red Zone) ವ್ಯಾಪ್ತಿಯಲ್ಲಿದ್ದು, ರೈತರಿಗೆ ಇದರಿಂದ ತೊಂದರೆಯಾಗಿದ್ದರೆ KTCP ಕಾಯ್ದೆ 1961ರ ಕಲಂ 14A ಮತ್ತು 14B ಅಡಿಯಲ್ಲಿ ಮಾಸ್ಟರ್ ಪ್ಲಾನ್ ಪರಿಷ್ಕರಿಸಿ ವಲಯ ಬದಲಾಯಿಸುವ (Zoning Change) ಸಂಪೂರ್ಣ ಶಾಸನಬದ್ಧ ಅಧಿಕಾರ ಸರ್ಕಾರಕ್ಕಿದೆ. ರೈತರ ಹಿತರಕ್ಷಣೆಗಾಗಿ ಈ ಅಧಿಕಾರ ಬಳಸಿ ವಲಯ ಬದಲಾಯಿಸುವ ಬದಲು, ರಿಯಲ್ ಎಸ್ಟೇಟ್‌ಗಾಗಿ ಬಲವಂತದ ಭೂಸ್ವಾಧೀನಕ್ಕೆ ಮುಂದಾಗಿರುವುದೇಕೆ?

6. ದೇವನಹಳ್ಳಿಯ ಚನ್ನರಾಯಪಟ್ಟಣದ 1,777 ಎಕರೆ ಭೂಮಿಯನ್ನು ಭೂಸ್ವಾಧೀನ ಪ್ರಕ್ರಿಯೆಯಿಂದಲೇ ಕೈಬಿಟ್ಟು (Denotify) ಆದೇಶಿಸಿದ ಇದೇ ಸರ್ಕಾರ, ಬಿಡದಿ ರೈತರ ವಿಷಯದಲ್ಲಿ ಮಾತ್ರ "ಕಾನೂನಿನಲ್ಲಿ ಡಿನೋಟಿಫೈ ಮಾಡಲು ಬರುವುದಿಲ್ಲ" ಎಂದು ಸಾರ್ವಜನಿಕವಾಗಿ ಸುಳ್ಳು ಹೇಳುತ್ತಿರುವುದೇಕೆ?




18 ಆಗಸ್ಟ್ 2026, ಮಂಗಳವಾರ | ಬೆಳಗ್ಗೆ 10 ಗಂಟೆಗೆ
ಫ್ರೀಡಂ ಪಾರ್ಕ್, ಬೆಂಗಳೂರು



# ಬಿ.ನಾಗೇಂದ್ರರನ್ನು ಸಚಿವ ಸಂಪುಟದಿಂದ ಕೈಬಿಡುವಂತೆ ಒತ್ತಾಯಿಸಿ ಬಿಜೆಪಿ ಪ್ರತಿಭಟನೆ

ರಾಮನಗರ: ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣದ ಆರೋಪ ಹೊತ್ತಿರುವ ಬಿ.ನಾಗೇಂದ್ರ ಅವರನ್ನು ಸಚಿವ ಸಂಪುಟದಿಂದ ವಜಾಗೊಳಿಸುವಂತೆ ಮುಖ್ಯಮಂತ್ರಿಗಳನ್ನು ಒತ್ತಾಯಿಸಿ ಜಿಲ್ಲಾ ಬಿಜೆಪಿ ನೇತೃತ್ವದಲ್ಲಿ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರು ನಗರದಲ್ಲಿ ಪ್ರತಿಭಟನೆ ನಡೆಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಬಳಿಯ ಪ್ರತಿಭಟನಾ ಸ್ಥಳದಲ್ಲಿ ಜಮಾಯಿಸಿದ ಬಿಜೆಪಿ ಕಾರ್ಯಕರ್ತರು, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಸಚಿವ ನಾಗೇಂದ್ರ ವಿರುದ್ಧ ಧಿಕ್ಕಾರ ಘೋಷಿಸಿದರು. ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ 187 ಕೋಟಿ ರೂ ಹಗರಣದ ರುವಾರಿ ಬಿ.ನಾಗೇಂದ್ರ ಎಂದು ಜರಿದರು. ಸಚಿವ ಬಿ.ನಾಗೇಂದ್ರ ಅವರು ವಾಲ್ಮೀಕಿ ನಿಗಮದ ಹಣವನ್ನು ಚುನಾವಣೆಗೆ ಬಳಸಿ ಕೊಂಡಿರುವುದು ಕರ್ನಾಟಕದ ರಾಜಕೀಯ ಇತಿಹಾಸದಲ್ಲೇ ಕಪ್ಪು ಚುಕ್ಕೆ ಎಂದು ಟೀಕಾ ಪ್ರಹಾರ ನಡೆಸಿದರು. ಕಾಂಗ್ರೆಸ್ ಸರ್ಕಾ ರದ ಅವಧಿಯಲ್ಲಿ ನಡೆದಿದೆ ಎನ್ನಲಾದ ಹಗರಣಗಳ ಹಾಡು ಹಾಡಿದರು.

### ಹಗರಣ ನಡೆದಿದೆ ಎಂದು ಸಿದ್ದರಾಮಯ್ಯ ಒಪ್ಪಿದ್ದರು

ವಾಲ್ಮೀಕಿ ಹಗರಣದ ಬಗ್ಗೆ ಬಿಜೆಪಿಯು ಧ್ವನಿ ಎತ್ತಿದಾಗ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 89 ಕೋಟಿ ಹಗರಣವಾಗಿದೆ ಎಂದು ಸದನದಲ್ಲಿ ಒಪ್ಪಿಕೊಂಡಿದ್ದರು. ಈ ಹಗರಣದ ಹಣದಲ್ಲಿ ಹೈಕಮಾಂಡ್ ಪಾಲು ಸಹ ಇರುವುದರಿಂದಲೇ ಬಿ.ನಾಗೇಂದ್ರ ಅವರನ್ನು ಡಿ.ಕೆ.ಶಿವಕುಮಾರ್ ಅವರು ಸಂಪುಟದಲ್ಲಿ ಸಚಿವರಾಗಿ ಮಾಡಿದ್ದಾರೆ ಎಂದು ಆರೋಪಿಸಿದರು.



### ಆರೋಪಿಗೆ ಸಚಿವ ಸ್ಥಾನ: ಪ್ರಸಾದ್ ಗೌಡ

ಬಿಜೆಪಿ ಮಾಗಡಿ ಮಂಡಲ ಅಧ್ಯಕ್ಷ ಪ್ರಸಾದ್ ಗೌಡ ಮಾತನಾಡಿ, ಭ್ರಷ್ಟಾಚಾರದ ಆರೋಪ ಹೊತ್ತಿರುವ ವ್ಯಕ್ತಿಗೆ ಸಚಿವ ಸ್ಥಾನ ನೀಡುವ ಮೂಲಕ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ರವರು ನಾಡಿನ ಜನರಿಗೆ ಯಾವ ಸಂದೇಶ ನೀಡಲು ಹೊರಟಿದ್ದಾರೆ. ಮುಖ್ಯಮಂತ್ರಿಗಳು ಬೇರೆ ಪಕ್ಷಗಳ ಭ್ರಷ್ಟಾಚಾರದ ಬಗ್ಗೆ ಮಾತನಾಡುವುದಕ್ಕೂ ಮೊದಲು ತಮ್ಮ ಸಚಿವ ಸಂಪುಟ ಪಾರದರ್ಶಕವಾಗಿದಿಯೇ ಎಂಬುದರತ್ತ ಗಮನ ಹರಿಸಲಿ ಎಂದು ಒತ್ತಾಯಿಸಿದರು.

### ಕ್ಲೀನ್ ಚಿಟ್ ಇಲ್ಲದ್ದಿದ್ದರೂ ಸಂಪುಟದಲ್ಲಿ ಸ್ಥಾನ

ನಾಗೇಂದ್ರ ಅವರಿಗೆ ಇಲ್ಲಿವರೆಗೂ ಕ್ಲೀನ್ ಚಿಟ್ ಸಿಕ್ಕಿಲ್ಲ. ಅವರ ವಿರುದ್ಧ ಈಗಲೂ ತನಿಖೆ ನಡೆಯುತ್ತಿದೆ. ಆದರೂ ಮತ್ತೆ ಅವರನ್ನು ಸಚಿವರನ್ನಾಗಿ ನೇಮಿಸಲಾಗಿದೆ. ಭ್ರಷ್ಟ ಸಚಿವರನ್ನು ಸಂಪುಟದಿಂದ ಕೈ ಬಿಟ್ಟು, ಅವರದೇ ಸಮುದಾಯದ ಬೇರೊಬ್ಬರಿಗೆ ಸಚಿವರನ್ನಾಗಿ ಮಾಡುವಂತೆ ಸದನ ಆರಂಭವಾಗುವ ಮೊದಲೇ ಬಿಜೆಪಿ ಆಗ್ರಹಿಸಿದೆ. ಹಾಗಾಗಿ ನಾಗೇಂದ್ರರವರ ರಾಜೀನಾಮೆ ಪಡೆದು ಪರಿಶಿಷ್ಟ ಪಂಗಡಕ್ಕೆ ನ್ಯಾಯ ನೀಡಬೇಕು ಎಂದು ಪ್ರಸಾದ್ ಗೌಡ ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಸವನಪುರ ಪ್ರಕಾಶ್, ಎಸ್ಸಿ ಮೋರ್ಚಾ ತಾಲೂಕು ಅಧ್ಯಕ್ಷ ಉಮೇಶ್, ರಾಜ್ಯ ಪರಿಷತ್ತು ಸದಸ್ಯ ಸುರೇಶ್, ಮುಖಂಡರಾದ ರುದ್ರದೇವರು, ಚೇತನ್ , ಕಾಳಪ್ಪ, ವಿಶಾಲ್ ಜೈನ್, ನಾಗೇಶ್, ನಾಗರಾಜು, ಮಂಜು, ಬದರೀನಾಥ್, ಸಿದ್ದರಾಜು ಮತ್ತಿತರರು ಭಾಗವಹಿಸಿದ್ದರು.

### ಮತ್ತಷ್ಟು ಲೂಟಿ ಮಾಡಲು ಸಚಿವ ಸ್ಥಾನ: ಆನಂದ ಸ್ವಾಮಿ

ಬಿಜೆಪಿ ಜಿಲ್ಲಾಧ್ಯಕ್ಷ ಆನಂದ ಸ್ವಾಮಿ ಮಾತನಾಡಿ, ಕಾಂಗ್ರೆಸ್ ಪಕ್ಷದಲ್ಲಿ ಒಂದೊಂದು ಭ್ರಷ್ಟಾಚಾರ ಹೆಗಲಿನ ಮೇಲಿನ ಒಂದೊಂದು ಸ್ಟಾರ್ ಇದ್ದಂತೆ. ವಾಲ್ಮೀಕಿ ನಿಗಮದ ಹಗರಣದಲ್ಲಿ ನಾಗೇಂದ್ರ ಅವರೊಂದಿಗೆ ಡಿ.ಕೆ.ಶಿವಕುಮಾರ್ ಅವರೂ ಪಾಲುದಾರರು. ಮತ್ತಷ್ಟು ಹಗರಣಗಳ ಮೂಲಕ ಲೂಟಿ ಮಾಡಲು ನಾಗೇಂದ್ರ ಅವರಿಗೆ ಸಚಿವ ಸ್ಥಾನವನ್ನು ಉಡುಗೊರೆ ರೂಪದಲ್ಲಿ ನೀಡಿದ್ದಾರೆ ಎಂದು ಟೀಕಿಸಿದರು. ಸರ್ಕಾರಿ ಕಚೇರಿಗಳಲ್ಲಿ ಅಧಿಕಾರಿಗಳು ಲಂಚ ಕೇಳಿದರೆ ತಮಗೆ ಫೋನ್ ಮಾಡುವಂತೆ ಮುಖ್ಯಮಂತ್ರಿಗಳು ಹೇಳುತ್ತಾರೆ. ಆದರೀಗ ಭ್ರಷ್ಟಾಚಾರಿಯನ್ನೇ ಮುಖ್ಯಮಂತ್ರಿಗಳು ಜೊತೆಯಲ್ಲಿ ಇಟ್ಟುಕೊಂಡಿದ್ದಾರೆ. ಹೀಗಿರುವಾಗ ನಾವು ಯಾರಿಗೆ ಫೋನ್ ಮಾಡಿ ದೂರು ಹೇಳಬೇಕು. ಡಿ.ಕೆ.ಶಿವಕುಮಾರ್ ರವರ ಸಚಿವ ಸಂಪುಟದಲ್ಲಿ ಇರುವವರೆಲ್ಲರೂ ಭ್ರಷ್ಟಾಚಾರಿಗಳೇ ಎಂದು ದೂರಿದರು.

## ಖರ್ಗೆ ವಿರುದ್ಧ ಅಸ್ಪೃಶ್ಯತೆ: ಖಂಡನಾ ನಿರ್ಣಯ ಅಂಗೀಕಾರ

**ಬೆಂಗಳೂರು:** ಎಐಸಿಸಿ ಅಧ್ಯಕ್ಷ ಮಲ್ಲಿಕಾ ರ್ಜುನ ಖರ್ಗೆ ಉತ್ತರಾಖಂಡದಲ್ಲಿ ಭಾಷಣ ಮಾಡಿದ ಸ್ಥಳವನ್ನ ಶುದ್ಧೀಕರಣ ಮಾಡಿದ ಪ್ರಕರಣ ಖಂಡಿಸಿ ವಿಧಾನ ಪರಿಷತ್ತಿನಲ್ಲಿ ಸೋಮ ವಾರ ಖಂಡನಾ ನಿರ್ಣಯ ಮಂಡನೆ ಮಾಡಿ ಅಂ ಗೀಕರಿಸಲಾಯಿತು.



ಪರಿಷತ್ ಕಲಾಪ ದಲ್ಲಿ ಕಾಂಗ್ರೆಸ್ ಸದಸ್ಯ ಜಕ್ಕಪ್ಪನವರ್ ಖಂಡನಾ ನಿರ್ಣಯ ಮಂಡನೆ ಮಾಡಿದರು. ನಿರ್ಣಯ ಮಂಡನೆ ವೇಳೆ ಬಿಜೆಪಿ ವಿರುದ್ಧ ಆರೋಪ ಮಾಡಿದರು. ಈ ವೇಳೆ ಸದನದಲ್ಲಿ ಗದ್ದಲ ಗಲಾಟೆಯೂ ನಡೆಯಿತು. ಧ್ವನಿ ಮತದ ಮೂಲಕ ಖಂಡನಾ ನಿರ್ಣಯ ಸದನದಲ್ಲಿ ಅಂಗೀಕಾರ ನಡೆಯಿತು. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ರ್‍ಯಾಲಿ ನಡೆಸಿದ್ದ ಸ್ಥಳದಲ್ಲಿ ಆಗಸ್ಟ್ 10ರಂದು ಶ್ರೀರಾಮ ಸೇನಾ ಧರ್ಮಾರ್ಥ ಸೇವಾ ನ್ಯಾಸ್ ಸಂಘಟನೆಯಿಂದ ಶುದ್ಧೀಕರಣ ಹೋಮ ನಡೆಸಲಾಗಿತ್ತು. ಈ ಘಟನೆಗೆ ಕಾಂಗ್ರೆಸ್ ತೀವ್ರ ಆಕ್ರೋಶ ವ್ಯಕ್ತಪಡಿಸಿದೆ.



**ಶ್ರೀಮತಿ ಚನ್ನಮ್ಮ ಅವರ ತಿಂಗಳ ಪುಣ್ಯಸ್ಮರಣೆ ನಿಮಿತ್ತ ಹೊಳೆನರಸೀಪುರದ ನೀಲಕಂಠೇಶ್ವರ ದೇವಾಲಯದಲ್ಲಿ ಕುಟುಂಬದ ಸದಸ್ಯರು ಪೂಜೆ ಸಲ್ಲಿಸಿದರು. ಮಾಜಿ ಪ್ರಧಾನಿಗಳಾದ ಹೆಚ್ ಡಿ ದೇವೇಗೌಡರು, ಕೇಂದ್ರದ ಸಚಿವರಾದ ಹೆಚ್ ಡಿ ಕುಮಾರಸ್ವಾಮಿ ಅವರು, ಮಾಜಿ ಮಂತ್ರಿಗಳಾದ ಹೆಚ್.ಡಿ.ರೇವಣ್ಣಅವರು ಸೇರಿದಂತೆ ಕುಟುಂಬ ಸದಸ್ಯರು ಪೂಜೆಯಲ್ಲಿ ಪಾಲ್ಗೊಂಡಿದ್ದರು.**

ಮೊದಲ ಪುಟದಿಂದ

## ವಿಧಾನ ಪರಿಷತ್‌ನಲ್ಲೂ ಸಚಿವ ನಾಗೇಂದ್ರ ಪ್ರಕರಣದ ಪ್ರತಿಧ್ವನಿ

ಧ್ವನಿಗೂಡಿಸಿದರು. ಆಡಳಿತ ಪಕ್ಷದ ಸದಸ್ಯರು ಪ್ರಶ್ನೋತ್ತರ ಕಲಾಪ ನಡೆಸುವಂತೆ ಪಟ್ಟು ಹಿಡಿದರು. ಸಭಾಪತಿಗಳು ಕೂಡ ಪ್ರಶ್ನೋತ್ತರ ಕಲಾಪಕ್ಕೆ ಅವಕಾಶ ಮಾಡಿಕೊಡಿ ಎಂದರು. ಆದರೂ ಕೇಳದ ಹಿನ್ನೆಲೆಯಲ್ಲಿ ಆಡಳಿತ ಮತ್ತು ವಿಪಕ್ಷಗಳ ನಡುವೆ ಸದನದಲ್ಲಿ ಗದ್ದಲ ಗಲಾಟೆ ನಡೆಯಿತು. ಪ್ರಕರಣ ನ್ಯಾಯಾಂಗ ತನಿಖೆಗೆ ವಹಿಸಬೇಕು. ಮೃತ ಕುಟುಂಬಕ್ಕೆ ಒಂದು ಕೋಟಿ ರೂ. ಪರಿಹಾರ, ಸರ್ಕಾರಿ ಉದ್ಯೋಗ ಕೊಡಬೇಕು ಎಂದು ಆಗ್ರಹಿಸಿದರು. ಈ ವೇಳೆ ವಿಪಕ್ಷ-ಆಡಳಿತ ಪಕ್ಷಗಳ ನಡುವೆ ಗದ್ದಲ, ಗಲಾಟೆ ಜೋರಾಯಿತು. ಗಲಾಟೆ ಜೋರಾದ ಹಿನ್ನೆಲೆ ಕಲಾಪವನ್ನು ಸಭಾಪತಿಗಳು 10 ನಿಮಿಷ ಮುಂದೂಡಿಕೆ ಮಾಡಿದರು. ಬಳಿಕ ಕಲಾಪ ಪ್ರಾರಂಭವಾಗಿ ಅರಣ್ಯ ಸಚಿವರಿಂದ ಉತ್ತರ ಕೊಡಿಸುವ ಭರವಸೆಯನ್ನು ಸಭಾಪತಿ, ಸಭಾ ನಾಯಕರು ನೀಡಿದರು.

## ಕರ್ನಾಟಕದ ವಾದವೇನು?

ಹರಿವನ್ನು ಅಳೆಯಲಾಗುತ್ತದೆ. 12 ಸಾವಿರ ಕ್ಯೂಸೆಕ್ ಪ್ರಮಾಣದ ನೀರು ಅಲ್ಲಿ ದಾಖಲಾಗಲು ಸ್ವಲ್ಪ ಸಮಯ ಬೇಕಾಗುತ್ತದೆ ಎಂದು ಕರ್ನಾಟಕ ಪರವಾಗಿ ತಿಳಿಸಲಾಗಿದೆ.ಕಾವೇರಿ ಅಚ್ಚುಕಟ್ಟು ಪ್ರದೇಶದಲ್ಲಿ ಮಳೆಯ ಪರಿಸ್ಥಿತಿ ಅನಿಶ್ಚಿತವಾಗಿದೆ. ಈ ಪ್ರಮಾಣದಲ್ಲಿ ನಿರಂತರವಾಗಿ ನೀರು ಹರಿಸುವುದು ರಾಜ್ಯಕ್ಕೆ ಕಷ್ಟಕರ. ಆದರೂ ಸಿಡಬ್ಲ್ಯುಎಂಎ ಆದೇಶ ಪಾಲಿಸಲು ಕರ್ನಾಟಕ ಪ್ರಯತ್ನಿಸುತ್ತಿದೆ ಎಂದು ನ್ಯಾಯಾಲಯಕ್ಕೆ ತಿಳಿಸಲಾಗಿದೆ. ವಿಚಾರಣೆ ವೇಳೆ ಕರ್ನಾಟಕದ ಪರವಾಗಿ ಮೇಕೆದಾಟು ಆಣೆಕಟ್ಟು ಯೋಜನೆಯ ಅಗತ್ಯತೆಯನ್ನೂ ಪ್ರಸ್ತಾಪಿಸಲಾಗಿದೆ. ಕಾವೇರಿ ಜಲಾನಯನ ಪ್ರದೇಶದಲ್ಲಿ ಇಂತಹ ಅನಿಶ್ಚಿತ ಪರಿಸ್ಥಿತಿ ಎದುರಾದಾಗ ಮೇಕೆದಾಟು ಯೋಜನೆಯಿಂದ ನೀರು ನಿರ್ವಹಣೆಗೆ ನೆರವಾಗಲಿದೆ ಎಂದು ವಾದಿಸಲಾಗಿದೆ. ಆದರೆ, ಮೇಕೆದಾಟು ಯೋಜನೆಗೆ ತಮಿಳುನಾಡು ವಿರೋಧ ವ್ಯಕ್ತಪಡಿಸುತ್ತಿರುವ ವಿಚಾರವನ್ನೂ ಕರ್ನಾಟಕದ ಪರ ವಕೀಲರು ನ್ಯಾಯಾಲಯದ ಗಮನಕ್ಕೆ ತಂದಿದ್ದಾರೆ.

# ನಾಗೇಂದ್ರ ರಾಜೀನಾಮೆಗೆ ಆಗ್ರಹ

## ಶೇಮ್ ಶೇಮ್ ಕಾಂಗ್ರೆಸ್ ಶೇಮ್ ಶೇಮ್, ತೂ ಚೀ ಕಾಂಗ್ರೆಸ್ | ಬಿಜೆಪಿ ಅಹೋರಾತ್ರಿ ಹೋರಾಟ

ಮೈಸೂರು: ವಾಲ್ಮೀಕಿ ನಿಗಮದ ಲೂಟಿ ಆರೋಪ ಹೊತ್ತಿರುವ ಸಚಿವ ಬಿ.ನಾಗೇಂದ್ರ ರಾಜೀನಾಮೆಗೆ ಆಗ್ರಹಿಸಿ ಬಿಜೆಪಿ ಮೈಸೂರು ನಗರ ಮತ್ತು ಗ್ರಾಮಾಂತರ ವಿಭಾಗ ಸಿದ್ಧಾರ್ಥನಗರದ ಜಿಲ್ಲಾಧಿಕಾರಿ ಕಚೇರಿ ಸಮೀಪ ಆಹೋರಾತ್ರಿ ಧರಣಿ ನಡೆಸಿ ತಮ್ಮ ಆಕ್ರೋಶ ಹೊರಹಾಕಿದರು.

ಶೇಮ್ ಶೇಮ್ ಕಾಂಗ್ರೆಸ್ ಶೇಮ್ ಶೇಮ್, ತೂ ಚೀ ಕಾಂಗ್ರೆಸ್, ಭ್ರಷ್ಟ ಕಾಂಗ್ರೆಸ್ ಸರ್ಕಾರಕ್ಕೆ ಧಿಕ್ಕಾರ ಎಂಬಿತ್ಯಾದಿ ಘೋಷಣೆಗಳನ್ನು ಕೂಗಿದರು. ಸಚಿವ ಬಿ.ನಾಗೇಂದ್ರ ಕೂಡಲೇ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದರು. ಈ ವೇಳೆ ನಗರ ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ ಮಾತನಾಡಿ, ಸಿದ್ದರಾಮಯ್ಯ ಅವರ ಸಚಿವ ಸಂಪುಟದಲ್ಲಿ ಮಂತ್ರಿಯಾಗಿದ್ದ ಬಿ.ನಾಗೇಂದ್ರ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ 189 ಕೋಟಿ ರೂ. ಲೂಟಿ ಮಾಡಿ ಆಂಧ್ರದ ಬ್ಯಾಂಕಿಗೆ, ಚಿನ್ನದ ಅಂಗಡಿಗಳಿಗೆ ಹಾಗೂ ವೈನ್ ಸ್ಟೋರ್‌ಗಳಿಗೆ ವರ್ಗಾವಣೆ ಮಾಡಿ ಆಂಧ್ರದಲ್ಲಿ ಪಾರ್ಲಿಮೆಂಟಿಗಾಗಿ ದುರ್ಬಳಕೆ ಮಾಡಿದ್ದಾರೆ. ಸ್ವತಃ ಹಿಂದಿನ ಸಿಎಂ ಸಿದ್ದರಾಮಯ್ಯ ಅವರು 180 ಕೋಟಿ ಅಲ್ಲ ಕೇವಲ 89 ಕೋಟಿ ರೂ. ದುರ್ಬಳಕೆ ಆಗಿದೆ ಎಂದು ಒಪ್ಪಿಕೊಂಡಿದ್ದರು. ಅದಾದರ ಬಿಜೆಪಿಯ ಹೋರಾಟದ ಬಲದಿಂದ ಬಿ.ನಾಗೇಂದ್ರ ರಾಜೀನಾಮೆ ನೀಡಿ, ಜೈಲಿಗೆ ಹೋಗಿದ್ದರು ಎಂದು ತಿಳಿಸಿದರು.



ಜೈಲಿನಿಂದ ಬೇಲ್ ಮೂಲಕ ಹೊರ ಬಂದಿರುವ ಬಿ.ನಾಗೇಂದ್ರಗೆ ಡಿ.ಕೆ.ಶಿವಕುಮಾರ್ ಸಚಿವ ಸಂಪುಟದಲ್ಲಿ ಸ್ಥಾನ ನೀಡಲಾಗಿದೆ. ಯಾವುದೇ ಕಾರಣಕ್ಕೂ ಬಿ.ನಾಗೇಂದ್ರರನ್ನು ಸಚಿವ ಸ್ಥಾನದಲ್ಲಿ ಮುಂದುವರೆಸಬಾರದು. ಅವರನ್ನು ಸಂಪುಟದಿಂದ ಹೊರಗಿಡಬೇಕು. ಬಿ.ನಾಗೇಂದ್ರ ರಾಜೀನಾಮೆ ನೀಡುವವರೆಗೂ ಸದನದ ಒಳಗೂ ಹಾಗೂ ಹೊರಗೂ ಹೋರಾಟವನ್ನು ನಿರಂತರವಾಗಿ ಮಾಡಲಾಗುವುದು. ಅನ್ಯಾಯವಾಗಿರುವ ಎಸ್‌ಸಿ, ಎಸ್ಟಿ ಸಮುದಾಯಕ್ಕೆ ಮತ್ತೆ ನ್ಯಾಯವನ್ನು ಒದಗಿಸಬೇಕು ಎಂದು ಹೇಳಿದರು.

ಸಿಎಂ ಯಾವ ಒತ್ತಡಕ್ಕೆ ಮಣಿಯುತ್ತಿದ್ದಾರೆ ಗೊತ್ತಿಲ್ಲ. ಹೈಕಮಾಂಡ್ ಒತ್ತಡವಿದೆಯೋ ಅಥವಾ ಸಿಎಂಗೆ ಯಾರಾದರೂ ಹೆದರಿಸುತ್ತಿದ್ದಾರೋ ಗೊತ್ತಿಲ್ಲ. ಯಾವ ಕಾರಣಕ್ಕೆ ಬಿ.ನಾಗೇಂದ್ರರನ್ನು ಸಚಿವ ಸಂಪುಟಕ್ಕೆ ತೆಗೆದುಕೊಂಡಿದ್ದಾರೆ ಎಂದು ಸ್ಪಷ್ಟತೆ ನೀಡಬೇಕು. ಕಾಂಗ್ರೆಸ್‌ನ ಹಲವು ಹಿರಿಯ ನಾಯಕರು ಕಣ್ಣೀರು ಹಾಕುತ್ತಿದ್ದಾರೆ. ಅವರಿಗೆ ಮಂತ್ರಿಗಿರಿ ಕೊಡಲಿಲ್ಲ. ಮೈಸೂರಿನ ತನ್ವೀರ್ ಸೇಠ್ ಅತ್ಯಂತ ಪ್ರಾಮಾಣಿಕ ನಾಯಕ. ಅಂತಹ ವ್ಯಕ್ತಿಗಳಿಗೆ ಕೊಡದೆ ಕಳ್ಳ ಎಂದು ಸಾಭೀತಾಗಿರುವ ವ್ಯಕ್ತಿಗೆ ಮಂತ್ರಿಗಿರಿ ಕೊಡಲು ಸಿಎಂ ಇಚ್ಛೆಪಟ್ಟಿದ್ದಾರೆ. ಸದನದ ಒಳಗೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ನೇತೃತ್ವದಲ್ಲಿ ಹೋರಾಟ ನಡೆಯುತ್ತಿದೆ. ಸದನದ ಹೊರಗೆ ನಾವೆಲ್ಲ ಹೋರಾಟವನ್ನು ನಿರಂತರವಾಗಿ ಮಾಡುತ್ತಿರುತ್ತೇವೆ ಎಂದು ತಿಳಿಸಿದರು.

> ಕಾಂಗ್ರೆಸ್ ಭ್ರಷ್ಟರ ಪಕ್ಷ ಎಂಬುದಕ್ಕೆ ನಾಗೇಂದ್ರರನ್ನು ಮತ್ತೆ ಸಂಪುಟದಲ್ಲಿ ಸೇರಿಸಿಕೊಂಡಿರುವುದೇ ಸ್ಪಷ್ಟ ಉದಾಹರಣೆಯಾಗಿದೆ. ಅಂದು ಅಮಾನತು ಮಾಡಿದ್ದೇಕೆ? ಈಗ ಮತ್ತೆ ಸೇರಿಸಿಕೊಂಡಿರುವುದೇಕೆ ಎಂಬುದನ್ನು ಕಾಂಗ್ರೆಸ್ ಸರ್ಕಾರ ಸ್ಪಷ್ಟಪಡಿಸಬೇಕು. ಮಾತ್ರವಲ್ಲದೆ, ಅಂದು ಲೂಟಿ ಆದ ಹಣ ಎಲ್ಲೆಲ್ಲಿ ಬಳಕೆಯಾಗಿದೆ ಎಂಬುದನ್ನು ಜನತೆ ಎದುರು ಹೇಳಬೇಕು. ಆರೋಪ ಮುಕ್ತರಾಗುವವರೆಗೂ ಅವರನ್ನು ಸಂಪುಟದಿಂದ ಹೊರಗಿಡಬೇಕು. ಅಲ್ಲಿಯವರೆಗೂ ನಮ್ಮ ಹೋರಾಟ ಮುಂದುವರೆಯಲಿದೆ.
>
> ▸▸ **ಎಂ.ಸುಬ್ಬಣ್ಣ** ಬಿಜೆಪಿ ಜಿಲ್ಲಾಧ್ಯಕ್ಷ

ಮಾಜಿ ಸಂಸದ ಪ್ರತಾಪ್ ಸಿಂಹ ಮಾತನಾಡಿ, ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಹಣವನ್ನು ಲೂಟಿ ಮಾಡಿ, ಬಳ್ಳಾರಿ ಮತ್ತು ರಾಯಚೂರು ಲೋಕಸಭಾ ಚುನಾವಣೆಯಲ್ಲಿ ದುರ್ಬಳಕೆ ಮಾಡಿದ್ದ ಕಾರಣಕ್ಕೆ ರಾಜೀನಾಮೆ ನೀಡಿ ಜೈಲಿಗೆ ಹೋಗಿ ಬಂದಿರುವ ಬಿ.ನಾಗೇಂದ್ರಗೆ ಸಚಿವ ಸಂಪುಟದಲ್ಲಿ ಸ್ಥಾನ ನೀಡಲಾಗಿದೆ. ಆ ಪ್ರಕರಣ ಇನ್ನೂ ನ್ಯಾಯಾಲಯದಲ್ಲಿ ನಡೆಯುತ್ತಿದೆ. ಬಿ.ನಾಗೇಂದ್ರ ರಾಜೀನಾಮೆ ನೀಡುವವರೆಗೂ ಅಹೋರಾತ್ರಿ ಧರಣಿ ಮುಂದುವರೆಯುತ್ತದೆ ಎಂದು ಎಚ್ಚರಿಕೆ ನೀಡಿದರು. ಬಿಜೆಪಿ ಜಿಲ್ಲಾಧ್ಯಕ್ಷ ಎಂ.ಸುಬ್ಬಣ್ಣ, ಮಾಜಿ ಶಾಸಕ ಹರ್ಷವರ್ದನ್, ಮಾಜಿ ಮೇಯರ್ ಶಿವಕುಮಾರ್, ಮುಖಂಡರಾದ ಬಿ.ಹೆಚ್. ಮಂಜುನಾಥ್, ಬಿಜೆಪಿ ಮುಖಂಡರಾದ ಈ.ಸಿ.ನಿಂಗರಾಜೇಗೌಡ, ಚಾಮುಂಡೇಶ್ವರಿ ಕ್ಷೇತ್ರದ ಅರುಣಕುಮಾರ್, ಚಾಮರಾಜ ಕ್ಷೇತ್ರದ ದಿನೇಶ್ ಗೌಡ, ಗಿರಿಧರ್, ಲೋಹಿತ್, ರಾಕೇಶ್, ಗೋಕುಲ್ ಗೋವರ್ದನ್,ರಾಕೇಶ್, ರಘುನಾಥ್ ಸೇರಿ ಮತ್ತಿತರರಿದ್ದರು.

### ಶಾಸಕ ಕೆ.ಹರೀಶ್ ಗೌಡ ಹೇಳಿಕೆ

# ಗ್ಯಾರಂಟಿ ಯೋಜನೆಗಳ ಪ್ರಯೋಜನ ಪಡೆದುಕೊಳ್ಳಿ

ಮೈಸೂರು: ಸರ್ಕಾರದ ಗ್ಯಾರಂಟಿ ಯೋಜನೆಗಳ ಲಾಭ ಮತ್ತು ಪ್ರಯೋಜನಗಳನ್ನು ವಿದ್ಯಾರ್ಥಿನಿಯರು ಸರಿಯಾಗಿ ತಿಳಿದುಕೊಂಡು ತಮ್ಮ ಜೀವನದಲ್ಲಿ ಸದುಪಯೋಗಪಡಿಸಿಕೊಳ್ಳಬೇಕು ಎಂದು ಶಾಸಕ ಕೆ.ಹರೀಶ್ ಗೌಡ ಹೇಳಿದರು.

ನಗರದ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ವತಿಯಿಂದ ಯುವನಿಧಿ ಹಾಗೂ ಶಕ್ತಿ ಯೋಜನೆಗಳ ಕುರಿತು ವಿದ್ಯಾರ್ಥಿನಿಯರಿಗೆ ಅರಿವು ಮೂಡಿಸುವ ವಿಶೇಷ ಸಂವಾದ ಮತ್ತು ಜಾಗೃತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಗ್ರಾಮೀಣ ಪ್ರದೇಶಗಳಿಂದ ಬರುವ ವಿದ್ಯಾರ್ಥಿನಿಯರು ಕಾಲೇಜಿಗೆ ತಲುಪಲು ಎದುರಿಸುತ್ತಿರುವ ಸಾರಿಗೆ ಸಮಸ್ಯೆಯನ್ನು ಗಮನಿಸಿದ ಶಾಸಕರು, ಕಾಲೇಜಿನ ವೇಳಾಪಟ್ಟಿಗೆ ಅನುಗುಣವಾಗಿ ಕೆಎಸ್‌ಆರ್‌ಟಿಸಿ ಬಸ್‌ಗಳ ಸಂಚಾರ ವ್ಯವಸ್ಥೆ ಕಲ್ಪಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.



ಕಾಲೇಜಿನ ಬಿಸಿಎ ಕೋರ್ಸ್ ತರಗತಿಗಳು ಮತ್ತು ಉಪನ್ಯಾಸಕರ ಕೊರತೆ ಕುರಿತು ಪೋಷಕರಿಂದ ದೂರುಗಳು ಬಂದಿರುವ ಹಿನ್ನೆಲೆಯಲ್ಲಿ, ಈ ವಿಷಯವನ್ನು ಪ್ರಸ್ತುತ ನಡೆಯುತ್ತಿರುವ ಅಧಿವೇಶನದಲ್ಲಿ ಪ್ರಸ್ತಾಪಿಸಿ, ಶಿಕ್ಷಣ ಸಚಿವರ ಗಮನಕ್ಕೆ ತಂದು ಶೀಘ್ರವೇ ಉಪನ್ಯಾಸಕರ ನೇಮಕ ಮಾಡಲು ತಿಳಿಸಲಾಗುವುದು ಎಂದರು. ಮಾಜಿ ಶಾಸಕರಾದ ಎಂ.ಕೆ.ಸೋಮಶೇಖರ ಮಾತನಾಡಿದರು. ಡಿಪ್ಲೋಮ ಹಾಗೂ ಪದವಿ ಮುಗಿಸಿದ ವಿದ್ಯಾರ್ಥಿಗಳಿಗೆ ಉದ್ಯೋಗ ಸಿಗದಿದ್ದಲ್ಲಿ 'ಯುವನಿಧಿ' ಯೋಜನೆಯಡಿ ನೊಂದಣಿ ಮಾಡಿಕೊಂಡು ಯೋಜನಾ ಅಡಿಯಲ್ಲಿ ನೀಡಲಾಗುವ ಸಹಾಯಧನವನ್ನು ಸ್ಪರ್ಧಾತ್ಮಕ ಪರೀಕ್ಷೆಗಳ ಸಿದ್ಧತೆಗೆ ಬಳಸಿಕೊಳ್ಳಬಹುದು ಎಂದರು. ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ಮುರಳೀಧರ್ ಮಾತನಾಡಿ ಸರ್ಕಾರದ ಐದು ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಯುವನಿಧಿ ಯೋಜನೆಯ ಮುಂದುವರಿದ ಭಾಗವಾಗಿ 'ಯುವನಿಧಿ ಪ್ಲಸ್' ಅನ್ನು ಜಾರಿಗೆ ತರಲಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮೈಸೂರು ನಗರದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷೆ ಪುಷ್ಪವಲ್ಲಿ, ಉಪಾಧ್ಯಕ್ಷ ಆರ್.ಗಿರೀಶ್, ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ಪ್ರಾಂಶುಪಾಲ ಡಾ. ರೇಣುಕಾಬಾಯಿ, ಎಂ.ಡಿ.ಸಿ.ಸಿ.ಬ್ಯಾಂಕ್ ಅಧ್ಯಕ್ಷ ಆರ್.ಮೂರ್ತಿ, ವಿವಿಧ ಸಮಿತಿಯ ಅಧ್ಯಕ್ಷರಾದ ಎಂ.ಎಂ. ಮಹಾದೇವ, ಸುಶೀಲ ಮರಿಗೌಡ, ವಿನಯ್ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

# ಸೆಸ್ಕಾಂನಿಂದ ಅನ್ಯಾಯ: ಶಿವಕುಮಾರ್

**ಮೈಸೂರು:** ವಾಜಮಂಗಲ ವಿದ್ಯುತ್ ಪ್ರಸರಣ ಕೇಂದ್ರದಿಂದ ಕಡಕೊಳ ವಿದ್ಯುತ್ ಉಪ ಕೇಂದ್ರದವರೆಗೆ ನಿರ್ಮಾಣವಾಗುತ್ತಿರುವ 220 ಕೆವಿ. ವಿದ್ಯುತ್ ಪ್ರಸರಣ ಮಾರ್ಗದ ನಿರ್ಮಾಣ ವೇಳೆ ಬಡಾವಣೆಗಳ ಹಿತರಕ್ಷಿಸುವ ಕೆಲಸ ಮಾಡಿರುವ ಸೆಸ್ಕಾಂ ರೈತರ ಬಗ್ಗೆ ತಾರತಮ್ಯ ಧೋರಣೆ ಅನುಸರಿಸಿ ಅಪಾರ ಅನ್ಯಾಯ ಮಾಡುತ್ತಿದೆ ಎಂದು ಪ್ರಸರಣ ಮಾರ್ಗ ವಿರೋಧ ಸಮಿತಿ ನೇತೃತ್ವ ವಹಿಸಿರುವ ಶಿವಕುಮಾರ್ ಆರೋಪಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಈಗಾಗಲೇ ಕಾಮಗಾರಿ ಆರಂಭಿಸಿದ್ದು, ಈ ಕುರಿತು ರೈತರಿಗೆ ತಿಳಿವಳಿಕೆ ನೀಡಿಲ್ಲ. ಈ ವೇಲೆ ಕೆಲವೊಂದು ಬಡಾವಣೆಗಳಲ್ಲಿ ಪಾರ್ಕ್ ಹಾಗೂ ಇನ್ನಿತರ ವಸತಿ ರಹಿತ ಪ್ರದೇಶದಲ್ಲಿ ಕಂಬಗಳು ಹೋಗುವಂತೆ ನಕ್ಷೆ ಮಾರ್ಗ ಬದಲಿಸಲಾಗಿದೆ. ಆದರೆ ಬಡಾವಣೆ ಮೀರಿದ ನಂತರ ಸಣ್ಣ ರೈತರ ಹಿತ ನಿರ್ಲಕ್ಷಿಸಿ ಮಾರ್ಗ ರೂಪಿಸಲಾಗಿದೆ. ಈ ವೇಳೆ ಪ್ರಭಾವಿಗಳ ಒತ್ತಡಕ್ಕೆ ಮಣಿದಿರುವುದೇ ಇದಕ್ಕೆ ಕಾರಣ. ಲೇಔಟ್‌ಗಳಲ್ಲಿ ಒಂದೇ ಮಾರ್ಗದಲ್ಲಿ 3 ಲೈನ್‌ಗಳಿದ್ದರೆ, ರೈತರಿಗೆ ಸಂಬಂಧಿಸಿದ



ಜಮೀನಿನಲ್ಲಿ ಪ್ರತ್ಯೇಕ ಲೈನ್‌ಗಳನ್ನು ಎಳೆಯತ್ತಿದ್ದು, ಇದರಿಂದಾಗಿ ರೈತರ ಅಮೂಲ್ಯ ಜಮೀನು ಅನಗತ್ಯವಾಗಿ ವ್ಯರ್ಥವಾಗುತ್ತಿದೆ. ಈ ರೀತಿ ತಾರತಮ್ಯ ತೋರುತ್ತಿರುವುದಾದರೂ ಏಕೆ ಎಂದು ಪ್ರಶ್ನಿಸಿದರು.

ಹೀಗಾಗಿ ಜಮೀನು ಕಳೆದುಕೊಳ್ಳುತ್ತಿರುವ ರೈತರು ಅಧಿಕಾರಿಗಳ ಬೆದರಿಕೆ ನಡುವೆಯೂ ಪ್ರತಿರೋಧ ವ್ಯಕ್ತ ಪಡಿಸುತ್ತಿದ್ದು, ಕೂಡಲೇ ಸಂಬಂಧಪಟ್ಟವರು ಇತ್ತ ಗಮನ ಹರಿಸಿ ತಾರತಮ್ಯ ಹೋಗಲಾಡಿಸಬೇಕೆಂದು ಕೋರಿದರು. ಜಮೀನು ಕಳೆದುಕೊಳ್ಳುವ ಭೀತಿಯಲ್ಲಿರುವ ಲೀಲಾ ಶಿವಕುಮಾರ್, ಕೂಡನಹಳ್ಳಿ ಗಣೇಶ್, ವರುಣ ವಸಂತಕುಮಾರ್, ವಕೀಲರಾದ ಎಂ.ಸಿ. ರಮೇಶ್, ಮನುಪ್ರಸಾದ್ ಹಾಗೂ ಕಾನೂನು ವಿದ್ಯಾರ್ಥಿ ಮನೋಜ್ ಇದ್ದರು.

### ಮೃತ ಕುಟುಂಬಗಳಿಗೆ ತಲಾ 50 ಲಕ್ಷ ಪರಿಹಾರ ನೀಡಲು ಆಗ್ರಹ

# ಎನ್ಕೌಂಟರ್ ಮಾಡಿದ ಅಧಿಕಾರಿಗಳನ್ನು ಬಂಧಿಸಿ

ಚಾಮರಾಜನಗರ. ಎನ್ಕೌಂಟರ್ ಮಾಡಿದ ಅರಣ್ಯ ಅಧಿಕಾರಿಗಳನ್ನು ಬಂಧಿಸುವಂತೆ ಒತ್ತಾಯಿಸಿ ಕರ್ನಾಟಕ ಸೇನಾಪಡೆ ವತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು. ನಗರದ ಭುವನೇಶ್ವರಿ ವೃತ್ತದಲ್ಲಿ ಚಾ.ರಂ.ಶ್ರೀನಿವಾಸಗೌಡ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ, ಅರಣ್ಯ ಅಧಿಕಾರಿಗಳು, ಅರಣ್ಯ ಇಲಾಖೆ ಸಚಿವರ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಲಾಯಿತು.

ಪ್ರತಿಭಟನೆ ನೇತೃತ್ವ ವಹಿಸಿದ್ದ ಕರ್ನಾಟಕ ಸೇನಾಪಡೆ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ ಮಾತನಾಡಿ, ಜಿಲ್ಲೆಯ ಹನೂರು ತಾಲೂಕಿನ ಶಾಗ್ಯ ಅರಣ್ಯ ಪ್ರದೇಶದಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳು ಏಕಾಏಕಿ ಮೂವರ ನಾಗರಿಕರನ್ನು ಎನ್ಕೌಟರ್ ಮಾಡಿ ಹತ್ಯೆ ಮಾಡಿರುವುದು ಇಡೀ ಮನುಷ್ಯಕುಲಕ್ಕೆ ಮಾಡಿದ ಅಪಚಾರ. ಶನಿವಾರ 80ನೇ ವರ್ಷದ ಸ್ವಾತಂತ್ರ್ಯ ದಿನಾಚರಣೆ ಕಾಶ್ಮೀರದಿಂದ ಹಿಡಿದು ಕನ್ಯಾಕುಮಾರಿವರೆಗೂ ಸಡಗರ, ಸಂಭ್ರಮದಿಂದ ಆಚರಣೆ ಮಾಡುತ್ತಿದ್ದರೆ ಇತ್ತ ಕಡೆ ಚಾಮರಾಜನಗರ ಜಿಲ್ಲೆಯ

ಹನೂರು ಭಾಗದಲ್ಲಿ ಸೂತಕದ ಛಾಯೆ ಆವರಿಸಿಬಿಟ್ಟಿದೆ. ಇದಕ್ಕೆ ಕಾರಣ ಅರಣ್ಯ ಇಲಾಖೆ ಅಧಿಕಾರಿಗಳು. ಮೃತರು ದರೋಡೆಕೋರರೇ ಆಗಿರಲಿ, ಭೇಟೆಗಾರರರೇ ಆಗಿರಲಿ ಗಾಳಿಯಲ್ಲಿ ಗುಂಡು ಹಾರಿಸಬಹುದಿತ್ತು ಅಥವಾ ಕಾಲಿಗೆ ಹೊಡೆಯಬಹುದಿತ್ತು. ಕಾನೂನಿದಡಿಯಲ್ಲಿ ಕಠಿಣ ಶಿಕ್ಷೆ ವಿಧಿಸಬಹುದಿತ್ತು. ಅದನ್ನು ಬಿಟ್ಟು ಏಕಾಏಕಿ ಎನ್ಕೌಂಟರ್ ಮಾಡಿರುವುದು ಯಾವ ನ್ಯಾಯಸ್ವಾಮಿ. ನಮ್ಮ ದೇಶದಲ್ಲಿರುವುದು ಪ್ರಜಾಪ್ರಭುತ್ವವು, ಸರ್ವಾಧಿಕಾರನೋ ಇದು ಅರಣ್ಯ ಇಲಾಖೆ ನಾಚಿಗೆ ಆಗಬೇಕು ಎಂದರು.



ಮೂವರು ಎನ್ಕೌಂಟರ್ ಆಗಿರುವ ಸ್ಥಳಕ್ಕೆ ಅರಣ್ಯ ಸಚಿವರು ಭೇಟಿ ನೀಡಿ ಅಲ್ಲಿನ ಪರಿಸ್ಥಿತಿ ಪರಿಶೀಲಿಸಿ ಸಮಸ್ಯೆ ಬಗೆಹರಿಸುವ ಕೆಲಸ ಮಾಡಿಲ್ಲ ಬೆಂಗಳೂರಿನಲ್ಲಿ ಕಾಲಾಹರಣ ಮಾಡುತಿದ್ದಾರೆ. ಇದು ಅತ್ಯಂತ ನಾಚಿಗೇಡಿನ ಸಂಗತಿ. ರಾಜ್ಯ ಸರ್ಕಾರ ಎನ್ಕೌಂಟರ್ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಿ ಸತ್ಯಾಸತ್ಯತೆ ಪರಿಶೀಲಿಸಿ, ಎನ್ಕೌಂಟರ್ ಉದ್ದೇಶಪೂರ್ವಕವಾಗಿದ್ದರೆ ಅಧಿಕಾರಿಗೆ ಕಠಿಣ ಶಿಕ್ಷೆ ವಿಧಿಸಬೇಕು. ಮೃತಕುಟುಂಬಕ್ಕೆ ತಲಾ 50 ಲಕ್ಷ ಪರಿಹಾರ ನೀಡಬೇಕು ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಅರಣ್ಯ ಇಲಾಖೆ ವಿರುದ್ಧ ಉಗ್ರ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು. ಪ್ರತಿಭಟನೆಯಲ್ಲಿ ಶಾ.ಮುರುಳಿ, ಕಂಡಕ್ಟರ್ ಚಾ.ಸಿ.ಹೋಮನಾಯಕ, ಪಣ್ಯದಹುಂಡಿರಾಜು, ಅಜಯ್ ಅರಕಲವಾಡಿ, ಚಾ.ಸಿ.ಸಿದ್ದರಾಜು, ಚಾ.ವೆಂ.ರಾಜ್ ಗೋಪಾಲ್, ಅರುಣ್ ಕುಮಾರ್‌ಗೌಡ, ತಾಂಡವಮೂರ್ತಿ, ಅಮಚವಾಡಿ ರಾಜು, ಸುರೇಶ್‌ಗೌಡ ಜಗದೀಶ್, ಮಹೇಶ್ , ಪರಿಸರ ನಾಗರಾಜು, ಸುಬ್ಬಯ್ಯ, ಇತರರು ಭಾಗವಹಿಸಿದ್ದರು.

# ರಾಹುಲ್ ಗಾಂಧಿಗೆ ಸುಪ್ರೀಂ ಕೋರ್ಟ್ 'ಬಿಗ್ ರಿಲೀಫ್'

**ನವದೆಹಲಿ:** ಅಕ್ರಮ ಆಸ್ತಿ ಸಂಪಾದನೆ ಪ್ರಕರಣದಲ್ಲಿ ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ ಅವರಿಗೆ ಸುಪ್ರೀಂ ಕೋರ್ಟ್ ಸೋಮವಾರ ಬಿಗ್ ರಿಲೀಫ್ ಕೊಟ್ಟಿದೆ. ಈ ಪ್ರಕರಣದ ಸಂಬಂಧ ಮುಂದಿನ ವಿಚಾರಣೆ ನಡೆಸದಂತೆ ಅಲಹಾಬಾದ್ ಹೈಕೋರ್ಟ್‌ಗೆ ಸೂಚಿಸಿದೆ.

ಅಲ್ಲದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಅಲಹಾಬಾದ್ ಹೈಕೋರ್ಟ್‌ಗೆ ಯಾವುದೇ ವರದಿ ಸಲ್ಲಿಸದಂತೆ ಸಿಬಿಐ ಮತ್ತು ಜಾರಿ



ನಿರ್ದೇಶನಾಲಯಕ್ಕೆ (ಇಡಿ) ಸುಪ್ರೀಂ ಕೋರ್ಟ್ ಸೂಚಿಸಿದೆ. ಕಾಂಗ್ರೆಸ್ ನಾಯಕನ ವಿರುದ್ಧದ ಅಕ್ರಮ ಆಸ್ತಿ ಆರೋಪಗಳ ಕುರಿತು ಸಿಬಿಐ ಮತ್ತು ಇಡಿಯಿಂದ ತನಿಖೆ ನಡೆಸುವಂತೆ ಕೋರಿ ಸಲ್ಲಿಸಲಾಗಿದ್ದ ಅರ್ಜಿ ವಿಚಾರಣೆಯನ್ನು ಹೈಕೋರ್ಟ್ ನಡೆಸುತ್ತಿತ್ತು. ಅಕ್ರಮ ಆಸ್ತಿ ಸಂಪಾದನೆ ಆರೋಪಗಳ ಪರಿಶೀಲನೆ ನಡೆಸುವಂತೆ ಸಿಬಿಐ ಮತ್ತು ಇಡಿಗೆ ನಿರ್ದೇಶಿಸಿದ್ದ ಅಲಹಾಬಾದ್ ಹೈಕೋರ್ಟ್ ಆದೇಶವನ್ನ ಪ್ರಶ್ನಿಸಿ ರಾಹುಲ್ ಗಾಂಧಿ ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರು.

ಕರ್ನಾಟಕದ ಎಸ್.ವಿಗ್ನೇಶ್ ಶಿಶಿರ್ ಸಲ್ಲಿಸಿದ್ದ ಕ್ರಿಮಿನಲ್ ರಿಟ್ ಅರ್ಜಿಯ ವಿಚಾರಣೆ ಬಳಿಕ ಈ ಆದೇಶ ಹೊರಬಿದ್ದಿತ್ತು. ಬಿಜೆಪಿ ಕಾರ್ಯಕರ್ತರಾಗಿರುವ ವಿಗ್ನೇಶ್ ಈ ಹಿಂದೆ ರಾಹುಲ್ ಗಾಂಧಿ ದ್ವಿಪೌರತ್ವ ಹೊಂದಿದ್ದಾರೆ ಎಂದು ಆರೋಪಿಸಿ ಅರ್ಜಿ ಸಲ್ಲಿಸಿದ್ದರು.

# ಬಿಎಸ್‌ಎನ್‌ಎಲ್‌ನಿಂದ ಆಫರ್

ಮೈಸೂರು: ಕೇಂದ್ರ ಸರ್ಕಾರದ ಸ್ವಾಮ್ಯದ ಬಿಎಸ್‌ಎನ್‌ಎಲ್ ವತಿಯಿಂದ 80ನೇ ಸ್ವಾತಂತ್ರ್ಯ ಸಂಭ್ರಮ ಹಿನ್ನೆಲೆ ಖಾಸಗಿ ದೂರ ಸಂಪರ್ಕ ಕಂಪನಿಗಳಿಗೆ ಹೋಲಿಸಿದರೆ ಅತ್ಯಂತ ಅಗ್ಗದ ದರದ ಅನೇಕ ಹೊಸ ದೂರವಾಣಿ ಸಂಪರ್ಕ ಸೌಲಭ್ಯಗಳನ್ನು ಹೊಸ ಗ್ರಾಹಕರಿಗೆ ಬಿಎಸ್‌ಎನ್‌ಎಲ್ ಪ್ರಕಟಿಸಿದೆ ಎಂದು ಮೈಸೂರು ವ್ಯಾಪಾರ ಪ್ರದೇಶದ ಮಹಾ ಪ್ರಬಂಧಕ ರಾಜೇಂದ್ರಕುಮಾರ್ ತಿಳಿಸಿದರು.




ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಹೊಸ ಗ್ರಾಹಕರಿಗೆ ಫ್ರೀಡಂ 2.0 ಯೋಜನೆ ಅಡಿಯಲ್ಲಿ ಕೇವಲ ರೂ. ರೀಚಾರ್ಜ್‌ನೊಂದಿಗೆ ಉಚಿತ ಸಿಮ್, ಪ್ರತಿದಿನ 1ಜಿಬಿ ಡಾಟಾ, 100 ಎಸ್‌ಎಂಎಸ್ ಮತ್ತು ಅನಿಯಮಿತ ಕರೆಗಳ 24 ದಿನಗಳ ವ್ಯಾಲಿಡಿಟಿ, ಹೈಸ್ಪೀಡ್ ಫೈಬರ್ ಬ್ರಾಂಡ್ ಬ್ಯಾಂಡ್ ಲಾಂಚ್ ಆಫರ್, 2399 ರೂ.ಗಳ 412 ದಿನಗಳ ವಾರ್ಷಿಕ ಪ್ಲಾನ್, ಗ್ರಾಮೀಣ ಎಫ್‌ಟಿಟಿಎಚ್ ಮತ್ತು ಭಾರತ್ ನೆಟ್ ಉದ್ಯಮ ಅವಕಾಶ, 4 ಜಿಯ ಯೋಜನೆಗಳಲ್ಲಿ 153 ರೂ. ಗಳಿಗೆ ಅನಿಯಮಿತ ಕರೆ, ನಿತ್ಯ 1 ಜಿಬಿ ಡಾಟಾ, 24 ದಿನ ವ್ಯಾಲಿಡಿಟಿ, 147 ರೂ.ಗಳಿಗೆ ಅನಿಯಮಿತ ಕರೆ, 5 ಜಿಬಿ ಡಾಟಾ, 100 ಎಸ್‌ಎಂಎಸ್, 24 ದಿನಗಳ ಅವಧಿ, 199 ರೂ.ಗಳಿಗೆ ಅನಿಯಮಿತ ಕರೆ, ನಿತ್ಯ 2 ಜಿಬಿ ಡಾಟಾ, ನಿತ್ಯ ನೂರು ಎಸ್‌ಎಂಎಸ್, 28 ದಿನ ವ್ಯಾಲಿಡಿಟಿ ಮೊದಲಾದ ಆಕರ್ಷಕ ಮಾಸಿಕ ವೋಚರ್‌ಗಳಿವೆ. ಹೀಗಾಗಿ ಗ್ರಾಹಕರು ಸದುಪಯೋಗ ಪಡಿಸಿಕೊಳ್ಳಬಹುದಾಗಿದೆ. ಮೈಸೂರು, ಮಂಡ್ಯ, ಚಾಮರಾಜನಗರ ಮತ್ತು ಕೊಡಗು ಜಿಲ್ಲೆಗಳಲ್ಲಿ 690 ಟವರ್‌ಗಳನ್ನು 4ಜಿಗೆ ಮೇಲ್ದರ್ಜೆಗೇರಿಸಲಾಗಿದೆ ಎಂದು ಸಹಾ ವಿವರಿಸಿದರು. ಕಾರ್ಯಾಗಾರದಲ್ಲಿ ಡಿಜಿಎಂ ರವೀಂದ್ರಕುಮಾರ್ ಹಾಜರಿದ್ದರು.

# ಬೈಕ್‌ಗಳ ಡಿಕ್ಕಿ: ಇಬ್ಬರಿಗೆ ಗಾಯ



ಗುಂಡ್ಲುಪೇಟೆ: ಹೆಲ್ಮೆಟ್ ಇಲ್ಲದೆ ವಾಹನ ಚಲಾಯಿಸುತ್ತಿದ್ದ ಸವಾರರನ್ನು ಪೊಲೀಸರು ತಪಾಸಣೆ ಮಾಡುತ್ತಿದ್ದ ವೇಳೆ, ಪೊಲೀಸರನ್ನು ಕಂಡು ಬೈಕ್ ಏಕಾಏಕಿ ಬಲಕ್ಕೆ ತಿರುಗಿಸಿದ ಪರಿಣಾಮ ಮತ್ತೊಂದು ಬೈಕ್‌ಗೆ ಡಿಕ್ಕಿ ಹೊಡೆದು ಇಬ್ಬರು ಗಾಯಗೊಂಡ ಘಟನೆ ತಾಲೂಕಿನ ತ್ರಿಯಂಬಕಪುರ ಗೇಟ್ ಸಮೀಪ ಭಾನುವಾರ ನಡೆದಿದೆ.

ತಾಲೂಕಿನ ತೆರಕಣಾಂಬಿ ಪೊಲೀಸರು ತ್ರಿಯಂಬಕಪುರ ಗೇಟ್ ಬಳಿ ಸಂಚಾರ ನಿಯಮ ಉಲ್ಲಂಘಿಸುವ ವಾಹನಗಳ ತಪಾಸಣೆ ನಡೆಸುತ್ತಿದ್ದರು. ಈ ವೇಳೆ ಪೊಲೀಸರನ್ನು ಕಂಡ ಬೈಕ್ ಸವಾರನೊಬ್ಬ ಏಕಾಏಕಿ ಬಲಕ್ಕೆ ತಿರುಗಿಸಿದ್ದಾನೆ. ಪರಿಣಾಮ ಹಿಂದಿನಿಂದ ಬರುತ್ತಿದ್ದ ಮತ್ತೊಂದು ಬೈಕ್ ಡಿಕ್ಕಿ ಹೊಡೆದು ಇಬ್ಬರು ಸವಾರರು ಗಾಯಗೊಂಡಿದ್ದಾರೆ.

ಘಟನೆಯಲ್ಲಿ ಲಕ್ಕೂರು ಗ್ರಾಮದ ಚಿಕ್ಕಸ್ವಾಮಿ ಹಾಗೂ ಕಂಗೆರೆ ಗ್ರಾಮದ ಸದಾನಂದ ಗಾಯಗೊಂಡಿದ್ದಾರೆ. ಚಿಕ್ಕಸ್ವಾಮಿ ಅವರ ಕಾಲಿಗೆ ಗಾಯವಾಗಿದ್ದು, ಅವರನ್ನು ಚಾಮರಾಜನಗರ ಆಸ್ಪತ್ರೆಗೆ ದಾಖಲಿಸಲಾಗಿದೆ. ತಲೆಗೆ ಗಾಯಗೊಂಡ ಸದಾನಂದ ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಅಪಘಾತದ ಬಳಿಕ ಸ್ಥಳದಲ್ಲಿದ್ದ ಪೊಲೀಸರು ಗಾಯಾಳುಗಳನ್ನು ತಮ್ಮ ಜೀಪಿನಲ್ಲೇ ಆಸ್ಪತ್ರೆಗೆ ಕರೆದೊಯ್ದಿದ್ದಾರೆ. ಈ ಘಟನೆ ತೆರಕಣಾಂಬಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

# ಶಾಲೆ ಮಕ್ಕಳಿಗೆ ಮೊಟ್ಟೆ: ಅನುದಾನ ಹೆಚ್ಚಳಕ್ಕೆ ಕ್ರಮ

**ಬೆಂಗಳೂರು:** ಶಾಲಾ ಮಕ್ಕಳಿಗೆ ಕೊಡುತ್ತಿರುವ ಮೊಟ್ಟೆ ದರದ ಅನುದಾನ ಏರಿಕೆ ಬಗ್ಗೆ ಶೀಘ್ರವೇ ಹಣಕಾಸು ಇಲಾಖೆ ಜೊತೆ ಚರ್ಚೆ ಮಾಡಿ ತೀರ್ಮಾನ ಮಾಡುವುದಾಗಿ ಶಿಕ್ಷಣ ಸಚಿವ ಮಧು ಬಂಗಾರಪ್ಪ ತಿಳಿಸಿದರು.



ವಿಧಾನ ಪರಿಷತ್ ನಲ್ಲಿ ಸೋಮವಾರ ನಡೆದ ಪ್ರಶ್ನೋತ್ತರ ಕಲಾಪದಲ್ಲಿ ಕಾಂಗ್ರೆಸ್ ಸದಸ್ಯ ರಾಮೋಜಿಗೌಡ ಪ್ರಶ್ನೆ ಕೇಳಿದರು. ಸರ್ಕಾರ ಶಾಲಾ ಮಕ್ಕಳಿಗೆ ಮೊಟ್ಟೆಗೆ ಈಗ 6 ರೂಪಾಯಿ ಕೊಡುತ್ತಿದೆ. ಮಾರುಕಟ್ಟೆಯಲ್ಲಿ ಮೊಟ್ಟೆ ಬೆಲೆ ಜಾಸ್ತಿ ಆಗಿದೆ. ಒಂದು ವರ್ಷದಿಂದ 8 ರೂ. ಮೇಲೆ ದರ ಇದೆ. ಮೊಟ್ಟೆ ದರ ಜಾಸ್ತಿ ಮಾಡಬೇಕು ಎಂದು ಆಗ್ರಹಿಸಿದರು. ಇದಕ್ಕೆ ಸಚಿವ ಮಧು ಬಂಗಾರಪ್ಪ ಉತ್ತರ ನೀಡಿ, ರಾಷ್ಟ್ರಮಟ್ಟದ ದರವನ್ನು ರಾಜ್ಯದಲ್ಲಿ ನಾವು ಫಿಕ್ಸ್ ಮಾಡುತ್ತೇವೆ. ವಿದ್ಯಾರ್ಥಿಗಳ ಹಾಜರಾತಿ ಕಡಿಮೆ ಇರೋ ಕಡೆ ಮೊಟ್ಟೆ ಮ್ಯಾನೇಜ್ ಮಾಡುತ್ತಿದ್ದಾರೆ. ಹಾಜರಾತಿ ಇರುವ ಕಡೆ ಮೊಟ್ಟೆ ದರ ಸಮಸ್ಯೆ ಆಗುತ್ತಿದೆ. ಹೆಚ್ಚಳಕ್ಕೆ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ ಎಂದರು.

# ದರ್ಶನ್‌ಗೆ ಮತ್ತೆ ಹಿನ್ನಡೆ

**ಬೆಂಗಳೂರು:** ರೇಣುಕಾಸ್ವಾಮಿ ಕೊಲೆ ಪ್ರಕರಣ ದಲ್ಲಿ ನಟ ದರ್ಶನ್‌ಗೆ ನ್ಯಾಯಾಲಯದಲ್ಲಿ ಮತ್ತೆ ಹಿನ್ನಡೆಯಾಗಿದೆ. ವಿಚಾರಣೆ ವೇಳೆ ನ್ಯಾಯಾಲಯಕ್ಕೆ ಖುದ್ದು ಹಾಜರಾಗಲು ಅನುಮತಿ ಕೋರಿ ದರ್ಶನ್ ಸಲ್ಲಿಸಿದ್ದ ಅರ್ಜಿಯನ್ನು 57ನೇ ಸಿಸಿಎಚ್ ನ್ಯಾಯಾಲಯದ ನ್ಯಾಯಾಧೀಶರಾದ ಸುಜಾತ ಎಂ. ಸಾಂಬ್ರಾಣಿ ವಜಾಗೊಳಿಸಿದ್ದಾರೆ.



ಪ್ರಾಸಿಕ್ಯೂಷನ್ ವಾದವನ್ನು ಪುರಸ್ಕರಿಸಿರುವ ನ್ಯಾಯಾಲಯ ವಿಡಿಯೋ ಕಾನ್ಫರೆನ್ಸ್ ಮೂಲಕವೇ ವಿಚಾರಣೆಗೆ ಹಾಜರಾಗುವಂತೆ ಆದೇಶಿಸಿದೆ. ವಿಡಿಯೋ ಕಾನ್ಫರೆನ್ಸ್ ಮೂಲಕ ವಿಚಾರಣೆ ನಡೆದರೆ ಆಡಿಯೋ ಹಾಗೂ ವಿಡಿಯೋ ಗುಣಮಟ್ಟದ ಸಮಸ್ಯೆ ಎದುರಾಗಬಹುದು. ಇದರಿಂದ ಸಾಕ್ಷಿಗಳ ಪಾಟಿಸವಾಲು ನಡೆಸಲು ಅಡ್ಡಿಯಾಗಲಿದೆ. ಆರೋಪಿ ಪರ ವಾದ ಮಂಡನೆಗೆ ತೊಂದರೆಯಾಗುತ್ತದೆ. ಹೀಗಾಗಿ ಖುದ್ದು ಹಾಜರಾತಿಗೆ ಅವಕಾಶ ನೀಡಬೇಕು ಎಂದು ದರ್ಶನ್ ಪರ ವಕೀಲ ಹಷ್ಮತ್ ಪಾಷಾ ವಾದ ಮಂಡಿಸಿದ್ದರು. ದರ್ಶನ್ ಕೋರ್ಟ್‌ಗೆ ಖುದ್ದು ಹಾಜರಾದರೆ ಅಪಾರ ಸಂಖ್ಯೆಯಲ್ಲಿ ಜನ ಮತ್ತು ಅಭಿಮಾನಿಗಳು ಜಮಾಯಿಸುವ ಸಾಧ್ಯತೆ ಇದೆ. ಇದರಿಂದ ನ್ಯಾಯಾಲಯದ ಆವರಣದಲ್ಲಿ ಜನದಟ್ಟಣೆ ಹೆಚ್ಚಾಗಲಿದೆ ಎಂದು ಪ್ರಾಸಿಕ್ಯೂಷನ್ ಪರ ವಿಶೇಷ ಸರ್ಕಾರಿ ಅಭಿಯೋಜಕ ಪ್ರಸನ್ನಕುಮಾರ್ ವಾದಿಸಿದ್ದರು.

## ಇಂದಿನಿಂದ ಕಲಿಕಾ ಖಾತ್ರಿ ಪರೀಕ್ಷೆಗಳು

# ಕೋಟೆ ಬಿಇಒ ಮಾದರಿ

**ಶಿವಕುಮಾರ ತುಂಬಸೋಗೆ**

ಎಚ್.ಡಿ.ಕೋಟೆ: ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆಯಲ್ಲಿ ಕಳೆದ ಬಾರಿ ಜಿಲ್ಲೆಗೆ ಮೊದಲ ಸ್ಥಾನ ಪಡೆದು, ತಾಲೂಕು ಗಮನಸೆಳೆಯುವಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಎನ್.ರಾಜು ಅವರು ಅನುಸರಿಸಿರುವ ಕ್ರಮವನ್ನು ಜಿಲ್ಲಾದ್ಯಂತ ವಿಸ್ತರಿಸಿ, ಪಾಲಿಸುವಂತೆ ಜಿಲ್ಲಾಧಿಕಾರಿ ಹಾಗೂ ಜಿ.ಪಂ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಆದೇಶಿಸಿದ್ದಾರೆ.




2025–26ನೇ ಸಾಲಿನ ವಾರ್ಷಿಕ ಪರೀಕ್ಷೆಯಲ್ಲಿ ತಾಲೂಕು ಪ್ರಥಮ ಸ್ಥಾನ ಪಡೆದಿದ್ದರಿಂದ ಜಿಲ್ಲಾವಾರು ಫಲಿತಾಂಶದಲ್ಲೂ ಏರಿಕೆ ಕಂಡು ಶೇ.98.34 ಜಿಲ್ಲೆ ಗಮನಸೆಳೆದಿತ್ತು. ತಾಲೂಕಿನಲ್ಲಿ ಅಧಿಕಾರ ವಹಿಸಿಕೊಂಡ ರಾಜು ಅವರು ವಿದ್ಯಾರ್ಥಿಗಳಲ್ಲಿ ಕಲಿಕಾ ಆಸಕ್ತಿಯನ್ನು ನಿರಂತರವಾಗಿ ಹೆಚ್ಚಿಸಿ ಪರೀಕ್ಷಾ ಭಯವನ್ನು ನಿವಾರಿಸಲು "ಕಲಿಕಾ ಖಾತ್ರಿ"ಎಂಬ ಹೆಸರಿನಲ್ಲಿ ಪರೀಕ್ಷೆ ಆರಂಭಿಸಿದ್ದರು.

ವಿಷಯವಾರು ಒಂದು ಪಠ್ಯ ಮುಗಿದ ನಂತರ 20 ಅಂಕಗಳಿಗೆ, 40ಅಂಕಗಳಿಗೆ ಎರಡನೇ ಹಂತದ, 80 ಅಂಕಗಳಿಗೆ ಮೂರನೇ ಹಂತದ ಕಲಿಕಾ ಖಾತ್ರಿ ಪರೀಕ್ಷೆ ನಡೆಸಿರುವುದು ಫಲಿತಾಂಶ ಸುಧಾರಣೆಗೆ ಕಾರಣವಾಗಿತ್ತು.

2027ನೇ ಸಾಲಿನಲ್ಲೂ ಜಿಲ್ಲೆಯ ಫಲಿತಾಂಶದಲ್ಲಿ ಸಾಧನೆ ಮಾಡಲು ಮುಂದಾಗಿರುವ ಅಧಿಕಾರಿಗಳು ಇಂದಿನಿಂದಲೇ ಕಾರ್ಯಪ್ರವೃತ್ತರಾಗಿದ್ದಾರೆ. ಜಿಲ್ಲೆಯ 703 ಪ್ರೌಢಶಾಲೆಗಳಲ್ಲೂ ಆ.18ರಿಂದ ಕಲಿಕಾಖಾತ್ರಿ ಪರೀಕ್ಷೆ ನಡೆಸಲು ಶಿಕ್ಷಣ ಇಲಾಖೆ ಮುಂದಾಗಿದೆ. ಪಠ್ಯಾಂಶಗಳಿಗೆ ಸಂಬಂಧಿಸಿದಂತೆ ಪ್ರಶ್ನೆಪತ್ರಿಕೆಗಳು, ವೇಳಾಪಟ್ಟಿಯನ್ನು ಜಿಲ್ಲಾ ಮಟ್ಟದಲ್ಲಿ ತಯಾರಿಸಿದ್ದು, ಅದಲು, ಬದಲು ವ್ಯವಸ್ಥೆಯಡಿ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯನಡೆಯಲಿದೆ. ಫಲಿತಾಂಶದಲ್ಲಿ ಶೇ.70 ಪಡೆದ ವಿದ್ಯಾರ್ಥಿಗಳನ್ನು ಎ, ಶೇ.50–69 ಬಿ ಎಂದು, ಶೇ.50ಕ್ಕಿಂತ ಕಡಿಮೆ ತೆಗೆದ ವಿದ್ಯಾರ್ಥಿಗಳನ್ನು ಸಿ ಗುಂಪಾಗಿ ವಿಂಗಡಿಸಲಾಗುತ್ತದೆ. ಕನಿಷ್ಠ ಸಾಧಕ ವಿದ್ಯಾರ್ಥಿಗಳಿಗೂ ಪರಿಹಾರ ಬೋಧನೆ ನಡೆಸಲಾಗುತ್ತದೆ.

### ಕಲಿಕಾಖಾತ್ರಿ–1ರ ವೇಳಾಪಟ್ಟಿ

- **ಆ.18 ಮಂಗಳವಾರ ಬೆ.10–11ಗಂಟೆ ಪ್ರಥಮ ಭಾಷೆ.**
- **ಮಧ್ಯಾಹ್ನ 2:30–3:30 ವಿಜ್ಞಾನ.**
- **ಆ.19 ಬುಧವಾರ ಬೆ.10–11ಗಂಟೆ ದ್ವಿತೀಯ ಭಾಷೆ.**
- **ಮಧ್ಯಾಹ್ನ 2:30–3:30 ಗಣಿತ.**
- **ಆ.20 ಗುರುವಾರ ಬೆ.10–11ಗಂಟೆ ತೃತೀಯ ಭಾಷೆ.**
- **ಮಧ್ಯಾಹ್ನ 2:30–3:30 ಸಮಾಜ ವಿಜ್ಞಾನ**

**ದೇಶದ ಪ್ರಗತಿಗೆ ಶಿಕ್ಷಣ ಮಹತ್ವದ ಪಾತ್ರ ವಹಿಸುತ್ತದೆ.** ವಿದ್ಯಾರ್ಥಿ ಗಳ ಭವಿಷ್ಯಕ್ಕೆ ಎಸ್.ಎಸ್.ಎಲ್.ಸಿ ತಿರುವಿನ ಹಂತ. ಪರೀಕ್ಷಾ ಭಯದಿಂದಲೂ ಕೆಲ ವಿದ್ಯಾರ್ಥಿಗಳು



ವಾರ್ಷಿಕ ಪರೀಕ್ಷೆಯಲ್ಲಿ ಕಡಿಮೆ ಅಂಕಗಳಿಸುವುದನ್ನು ಗಮನಿಸಿದ್ದೆ.ಅದರ ನಿವಾರಣೆಗೆ ಕಲಿಕಾಖಾತ್ರಿ ಎಂಬ ಪರೀಕ್ಷಾ ವಿಧಾನ ಪ್ರಯೋಗ ಮಾಡಿದ್ದೆವು. ಇದೀಗ ಈ ಪರೀಕ್ಷಾ ಮಾದರಿ ಜಿಲ್ಲಾದ್ಯಂತ ವಿಸ್ತರಣೆಯಾಗಿರುವುದು ಖುಷಿ ತಂದಿದೆ.

**–ಸಿ.ಎನ್.ರಾಜು** ಕ್ಷೇತ್ರ ಶಿಕ್ಷಣಾಧಿಕಾರಿ ಹೆಚ್.ಡಿ.ಕೋಟೆ/ಸರಗೂರು ತಾ.

# ನಾನಾ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಗುತ್ತಿಗೆ ನೌಕರರ ಪ್ರತಿಭಟನೆ



ಮೈಸೂರು: ಮೂರು ತಿಂಗಳ ಬಾಕಿ ವೇತನ ಸೇರಿ ತಮ್ಮ ಹಲವು ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಕೇಂದ್ರ ಕಾರ್ಮಿಕ ಸಂಘಟನೆ ಎಐಯುಟಿಯುಸಿಗೆ ಸಂಯೋಜಿತವಾಗಿರುವ ಎಂಎಂಸಿ ಮತ್ತು ಆರ್ ಐ ಯುನೈಟೆಡ್ ಕಾಂಟ್ರಾಕ್ಟ್ ವರ್ಕರ್ಸ್ ಯೂನಿಯನ್ ನಗರದಲ್ಲಿ ಪ್ರತಿಭಟಿಸಿತು.

ನಗರದ ಎಂಎಂಸಿಆರ್ ಐ ಆಡಳಿತ ಮಂಡಳಿಯ ಎದುರು ಗುತ್ತಿಗೆ ನೌಕರರು ನಾನಾ ಬೇಡಿಕೆ ಈಡೇರಿಕೆಗೆ ಆಗ್ರಹಿಸಿದರು. ಸ್ವಯಂಘೋಷಿತ ಮೇಲ್ವಿಚಾರಕರ ಹೆಸರಿನಲ್ಲಿ ಕಾರ್ಮಿಕರಿಗೆ ಕಿರುಕುಳಕೊಡುವುದನ್ನು ನಿಲ್ಲಿಸಬೇಕು, ಗುತ್ತಿಗೆ ನೌಕರರಿಗೆ ಈ ಪಿಎಫ್ ಇಎಸ್‌ಐ ಗಳ ಸರಿಯಾದ ಪಾವತಿ ಪಾವತಿ ಮಾಡದೆ, ವೇತನ ಚೀಟಿಯನ್ನು ನೀಡದೆ ಇಲ್ಲಿಯವರೆಗೂ ಸಮವಸ್ತ್ರಗಳನ್ನು ನೀಡದೆ ಕಾರ್ಮಿಕರಿಗೆ ಶೋಷಿಸುತ್ತಿದ್ದು ಈ ಕುರಿತು ಸಮಸ್ಯೆ ಪರಿಹರಿಸಲು ಒಂದು ಕ್ರಮವನ್ನು ಕೈಗೊಳ್ಳದಿರುವುದು ವಿಷಾದನೀಯ. ಈ ಕುರಿತು ಕಾನೂನು ಪ್ರಕಾರ 20 ದಿನಗಳ ಹಿಂದೆಯೇ ಮುಷ್ಕರದ ನೋಟಿಸು ನೀಡಿದರು ಸಹ ಆಡಳಿತ ಮಂಡಳಿಯು ಸಮಸ್ಯೆ ಪರಿಹರಿಸುವಲ್ಲಿ ಅಥವಾ ಕಾರ್ಮಿಕರ ಜೊತೆ ಚರ್ಚೆ ಮಾಡುವುದರಲ್ಲಿ ವಿಫಲವಾಗಿದೆ ಎಂದರು.

ಸಂಘದ ಅಧ್ಯಕ್ಷರಾದ ಚಂದ್ರಶೇಖರ್ ಮೇಟಿ ಮಾತನಾಡಿ, ಏಜೆನ್ಸಿಗಳ ವತಿಯಿಂದ ಡಿ ಗ್ರೂಪ್ ಹೆಸರಿನಲ್ಲೇ ಕೆಲಸ ಮಾಡುವ ಕೆಲವು ಸ್ವಯಂ ಘೋಷಿತ ಮೇಲ್ವಿಚಾರಕರ ಕಿರುಕುಳದಿಂದಾಗಿ ಕಾರ್ಮಿಕರು ಬೇಸತ್ತಿದ್ದಾರೆ. ಕನಿಷ್ಠ ಸಂಬಳವನ್ನು ಪ್ರತಿ ತಿಂಗಳಿಗೆ ಹಲವಾರು ವರ್ಷಗಳಿಂದ ಸಂಘವು ಬೇಡಿಕೆ ಇಟ್ಟಿದ್ದರು. ಸಮಯಕ್ಕೆ ಸರಿಯಾಗಿ ಪಾವತಿಸದಿರುವುದು, ಆಡಳಿತ ಮಂಡಳಿಯ ತೀವ್ರ ನಿರ್ಲಕ್ಷ ಮತ್ತು ಕಾರ್ಮಿಕರಿಗೆ ಮಾಡುತ್ತಿರುವ ಅಪರಾಧವಾಗಿದೆ ಎಂದರು. ಕರ್ನಾಟಕ ರಾಜ್ಯ ಸಂಯುಕ್ತ ವೈದ್ಯಕೀಯ ಶಿಕ್ಷಣ ಸಂಸ್ಥೆಗಳ ಗುತ್ತಿಗೆ ನೌಕರರ ಸಂಘದ ರಾಜ್ಯ ಅಧ್ಯಕ್ಷೆ ಎಂ.ಉಮಾದೇವಿ, ಸಂಘದ ಕಾರ್ಯದರ್ಶಿ ಎಸ್.ಎಚ್.ಹರೀಶ್, ಎಐಯುಟಿಯುಸಿ ಜಿಲ್ಲಾ ಸಮಿತಿ ಸದಸ್ಯೆ ಪಿ.ಎಸ್.ಸಂಧ್ಯಾ, ಎಐಕೆಕೆಎಂಎಸ್ ರೈತ ಸಂಘಟನೆಯ ರಾಜ್ಯ ಉಪಾಧ್ಯಕ್ಷ ಎಚ್.ಶಿವಪ್ರಕಾಶ್, ಎಐಯುಟಿಯುಸಿ ಜಿಲ್ಲಾ ಅಧ್ಯಕ್ಷೆ ಯಶೋಧರ ಇತರರು ಭಾಗವಹಿಸಿದ್ದರು.

# ಆರ್‌ಎಸ್‌ಎಸ್ ಸಾವಿರ ತಲೆಯ ವಿಷಪೂರಿತ ಹಾವು: ಯತೀಂದ್ರ

**ಬೆಂಗಳೂರು:** ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ಕೋಮುವಾದ ಮತ್ತು ಜಾತಿವಾದ ದಿಂದ ಪ್ರೇರಿತವಾದ 'ಸಾವಿರ ತಲೆಯ ವಿಷಪೂರಿತ ಹಾವು' ಎಂದು ಸಚಿವ ಯತೀಂದ್ರ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದ್ದಾರೆ.

ಆರ್‌ಎಸ್‌ಎಸ್ ಸಾವಿರ ತಲೆಯ ವಿಷಕಾರಿ ಹಾವಿನಂತಿದೆ. ಇದು ಜಾತಿವಾದ, ಕೋಮುವಾದ ಮತ್ತು ಮನುವಾದದ ವಿಷದಿಂದ ತುಂಬಿದೆ. ಇದು ವಿಷವನ್ನು ಕಾರುತ್ತಾ ಇಡೀ ಸಮಾಜವನ್ನೇ ವಿಷಪೂರಿತಗೊಳಿಸಲು ಯತ್ನಿಸುವ ಹಾವಾಗಿದೆ. ಇದನ್ನು ನಿಯಂತ್ರಿಸದೆ ಬಿಟ್ಟರೆ, ನಮ್ಮ ಸಮಾಜ ಹಾಳಾಗುತ್ತದೆ ಮತ್ತು ದೇಶಕ್ಕೂ ಹಾನಿಯಾಗುತ್ತದೆ ಎಂದು ಹೇಳಿರುವ ವಿಡಿಯೋ ವೈರಲ್ ಆಗಿದೆ.



ಉತ್ತರಾಖಂಡದಲ್ಲಿ ಮಲ್ಲಿಕಾರ್ಜುನ ಖರ್ಗೆ ಅವರು ಮಾತನಾಡಿದ ನಂತರ ನಡೆದಿರುವ 'ಶುದ್ಧೀಕರಣ' ಪ್ರಕ್ರಿಯೆಯ ಸಂಬಂಧ, ಆರ್‌ಎಸ್‌ಎಸ್, ಬಿಜೆಪಿ ಮತ್ತು ಶ್ರೀರಾಮ ಸೇನೆಗಳು ಮಲ್ಲಿಕಾರ್ಜುನ ಖರ್ಗೆ ಅವರಲ್ಲಿ ಸಾರ್ವಜನಿಕವಾಗಿ ಕ್ಷಮೆ ಯಾಚಿಸಬೇಕು ಎಂದು ಅವರು ಆಗ್ರಹಿಸಿದರು.

ಆರ್‌ಎಸ್‌ಎಸ್, ಬಿಜೆಪಿ ಮತ್ತು ಶ್ರೀರಾಮ ಸೇನೆ ಕ್ಷಮೆ ಕೇಳುವವರೆಗೂ ಹ ನಾವು ಪ್ರತಿಭಟನೆಯನ್ನು ಮುಂದುವರಿಸಬೇಕು ಮತ್ತು ಎದೆ ಗುಂದಬಾರದು ಎಂದು ಯತೀಂದ್ರ ತಿಳಿಸಿದ್ದಾರೆ.

# ನೂತನ ದೇವಸ್ಥಾನ ಉದ್ಘಾಟನೆ



ಚಾಮರಾಜನಗರ. ತಾಲೂಕಿನ ಕೋಡಿಮೋಳೆ ಗ್ರಾಮದಲ್ಲಿ ಭಾನುವಾರ ಶ್ರೀರಾಕಸಮ್ಮ ಮತ್ತು ಕಾಮದೇವರ ನೂತನ ದೇವಸ್ಥಾನದ ಉದ್ಘಾಟನೆಯನ್ನು ರೇಷ್ಮೆ ಹಾಗೂ ಪಶುಸಂಗೋಪನಾ ಸಚಿವ ಸಿ. ಪುಟ್ಟರಂಗಶೆಟ್ಟಿ ಅವರು ನೆರವೇರಿಸಿದರು.

ದೇವಸ್ಥಾನದಲ್ಲಿ ಶನಿವಾರ ಮಕ್ಕಳಿಂದ ಹಾಲರವೆ, ಹೋಮ, ಮತ್ತು ಕಳಸ ಪೂಜೆ, ನಡೆದು ಮಹಾಮಂಗಳಾರತಿ ಮಾಡಲಾಯಿತು.

ದೇವರಿಗೆ ವಿಶೇಷ ಅಲಂಕಾರ ಮಾಡುವ ಮೂಲಕ ಪೂಜೆ ಸಲ್ಲಿಸಿ, ಗ್ರಾಮದ ಜನರಿಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು.

ಈ ಸಂದರ್ಭದಲ್ಲಿ ದೇವಸ್ಥಾನದ ಟ್ರಸ್ಟಿಗಳಾದ ಪ್ರಕಾಶ, ಶಿವರಾಜು, ರಂಗಸ್ವಾಮಿ, ರಾಚ, ಮಹದೇವಸ್ವಾಮಿ, ಕೃಷ್ಣ, ರಮೇಶ, ಮಾಜಿ ಗ್ರಾಮ ಪಂಚಾಯಿತಿ ಅಧ್ಯಕ್ಷ ನಟರಾಜು, ಬಂಗಾರು, ಸಿದ್ಧ, ಶ್ರೀಕಂಠ ಮೂರ್ತಿ ಗ್ರಾಮದ ಯಜಮಾನರಾದ ಮಹದೇವ, ಗೋವಿಂದ ಶೆಟ್ಟಿ, ವಿಷಕಂಠ, ನಟರಾಜು, ಮಹೇಶ, ಮಹದೇವ ಶೆಟ್ಟಿ, ರಂಗಸ್ವಾಮಿ, ಜಯಶಂಕರ, ನಂಜುಂಡಸ್ವಾಮಿ ಸೇರಿದಂತೆ ಗ್ರಾಮಸ್ಥರು ಇದ್ದರು.

# ದೇವಾಲಯದಲ್ಲಿ ಶ್ರಾವಣ ಪೂಜೆ



ಚಾಮರಾಜನಗರ. ಕೊಳದ ಬೀದಿಯಲ್ಲಿರುವ ಶ್ರೀ ಕಾಡುನಾರಾಯಣ ಸ್ವಾಮಿ, ದೇವಾಲಯದಲ್ಲಿ ಮೊದಲ ಶ್ರಾವಣ ಶನಿವಾರ ಪ್ರಯುಕ್ತ ವಿಶೇಷ ಪೂಜಾ ಕಾರ್ಯಕ್ರಮಗಳು ಜರುಗಿದವು.

ಬೆಳಿಗ್ಗೆ ದೇವರಿಗೆ ಪಂಚಾಮೃತ ಅಭಿಷೇಕ, ಅರಿಶಿನ ಕುಂಕುಮ ಮತ್ತು ಗಂದಾಭಿಷೇಕ, ನಂತರ ನವನೀತ ಅಲಂಕಾರ ಮಾಡಿ, ದೇವರಿಗೆ ಮಹಾಮಂಗಳಾರತಿ ಮಾಡಲಾಯಿತು. ಸಂಜೆ ಬ್ರಾಹ್ಮಿ ಮಹಿಳಾ ಸಂಘದಿಂದ ವಿಷ್ಣು ಸಹಸ್ರನಾಮ, ಲಲಿತಾ ಸೋಬಾನ, ಪ್ರಕೃತಿ ಲಯ ಸಂಗೀತ ಶಾಲೆ ಮಕ್ಕಳಿಂದ ಭಕ್ತಿಗೀತೆ ಮತ್ತು ಭಾವಗೀತೆಯನ್ನು ಪ್ರಸ್ತುತಪಡಿಸಲಾಯಿತು. ರಾತ್ರಿ ಉತ್ಸವ ಮೂರ್ತಿಯನ್ನು ದೇವಸ್ಥಾನದಿಂದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಿ ಬಳಿಕ ದೇವಸ್ಥಾನ ಮಹಾಮಂಗಳಾರತಿ ಮಾಡಲಾಯಿತು. ಬಳಿಕ ಪ್ರಸಾದ ವಿನಿಯೋಗ ನಡೆಯಿತು. ಕಾರ್ಯಕ್ರಮದಲ್ಲಿ ಅರ್ಚಕರಾದ ರಾಮಚಂದ್ರ, ಶ್ರೀದೇವಿ, ಪ್ರಜ್ವಲ್, ಅನಿಲ್, ಉಮಾ, ಸತೀಶ್ ರುದ್ರಭೂಮಿ, ರಾಘವ, ಸುಬ್ರಹ್ಮಣ್ಯ ಇಂಜಿನಿಯರ್, ಮಹದೇವ್ ಸೇರಿದಂತೆ ಇನ್ನು ಅನೇಕರು ಭಾಗವಹಿಸಿದ್ದರು.

## ನ್ಯಾಯಾಧೀಶರಾದ ಸಂಧ್ಯಾ ರಾವ್ ಕರೆ

# ಅರೆಕಾಲಿಕ ಕಾನೂನು ಸ್ವಯಂಸೇವಕರ ತರಬೇತಿಗೆ ಚಾಲನೆ

ಮೈಸೂರು: ಸಾಮಾನ್ಯ ಜನರಿಗೆ ಕಾನೂನಿನ ಅರಿವು ಮೂಡಿಸಲು ಹಾಗೂ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಉಚಿತ ನ್ಯಾಯಾಂಗ ನೆರವು ಒದಗಿಸಲು ಜಾರಿಗೆ ತರಲಾಗಿರುವ ಅರೆಕಾಲಿಕ ಕಾನೂನು ಸ್ವಯಂಸೇವಕರ ಯೋಜನೆಯನ್ನು ಜಿಲ್ಲೆಯಲ್ಲಿ ಅತ್ಯಂತ ಸಕ್ರಿಯವಾಗಿ ಅನುಷ್ಠಾನಗೊಳಿಸಬೇಕಾಗಿದೆ ಎಂದು ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಸಂಧ್ಯಾ ರಾವ್ ಪಿ. ಅವರು ತಿಳಿಸಿದರು.

ಜಿಲ್ಲಾ ಪಂಚಾಯಿತಿಯ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ವಿವಿಧ ಇಲಾಖೆಗಳು ಹಾಗೂ ಕಾನೂನು ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಆಯ್ಕೆಯಾಗಿರುವ ಅರೆಕಾಲಿಕ ಕಾನೂನು ಸ್ವಯಂಸೇವಕರಿಗಾಗಿ ಆಯೋಜಿಸಲಾಗಿದ್ದ ಎರಡು ದಿನಗಳ ಪುನಶ್ಚೇತನ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರವು 2009ರಲ್ಲಿ ಆರಂಭಿಸಿದ ಈ ಯೋಜನೆಯು ಸಾಮಾನ್ಯ ಜನರು ಮತ್ತು ಕಾನೂನು ಸಂಸ್ಥೆಗಳ ನಡುವಿನ ಅಂತರವನ್ನು ಕಡಿಮೆ ಮಾಡುವ ಉದ್ದೇಶ ಹೊಂದಿದೆ ಎಂದು ವಿವರಿಸಿದರು.



### ನ್ಯಾಯವನ್ನು ಜನರ ಮನೆಬಾಗಿಲಿಗೆ ತಲುಪಿಸುವ ಕೊಂಡಿ

ಸ್ವಯಂಸೇವಕರು ವಕೀಲರಲ್ಲದಿದ್ದರೂ ಕಾನೂನಿನ ಪ್ರಾಥಮಿಕ ಜ್ಞಾನವನ್ನು ಪಡೆದು ಸಮಾಜ ಸೇವೆ ಮಾಡುವ ಪ್ರಮುಖ ಮಧ್ಯವರ್ತಿಗಳಾಗಿದ್ದಾರೆ ಎಂದು ನ್ಯಾಯಾಧೀಶರು ಹೇಳಿದರು. ನ್ಯಾಯಾಲಯದ ಮೆಟ್ಟಿಲೇರಲು ಸಾಧ್ಯವಾಗದ ಅಸಹಾಯಕರನ್ನು ಜನತಾ ನ್ಯಾಯಾಲಯ (ಲೋಕ ಅದಾಲತ್), ಸಂಧಾನ ಕೇಂದ್ರ ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರಕ್ಕೆ ಸಂಪರ್ಕ ಕಲ್ಪಿಸುವುದು ಸ್ವಯಂಸೇವಕರ ಮುಖ್ಯ ಕರ್ತವ್ಯವಾಗಿದೆ. ಅರ್ಹ ಫಲಾನುಭವಿಗಳಿಗೆ ಉಚಿತ ಕಾನೂನು ನೆರವು ಪಡೆಯಲು ಅರ್ಜಿ ಸಲ್ಲಿಸಲು ಸಹಾಯ ಮಾಡುವುದು ಹಾಗೂ ಜನತಾ ನ್ಯಾಯಾಲಯಗಳ ಪ್ರಯೋಜನಗಳ ಕುರಿತು ಜನಸಾಮಾನ್ಯರಲ್ಲಿ ಜಾಗೃತಿ ಮೂಡಿಸಬೇಕು ಎಂದರು.

### ಸಾಮಾಜಿಕ ಪಿಡುಗುಗಳ ವಿರುದ್ಧ ನಿಗಾ ಮತ್ತು ಪುನರ್ವಸತಿ ನೆರವು

ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಕಂಡುಬರುವ ಕೌಟುಂಬಿಕ ದೌರ್ಜನ್ಯ, ಬಾಲ್ಯವಿವಾಹ, ಬಾಲಕಾರ್ಮಿಕ ಪದ್ಧತಿ ಹಾಗೂ ವರದಕ್ಷಿಣೆ ಕಿರುಕುಳದಂತಹ ಪ್ರಕರಣಗಳನ್ನು ಶೀಘ್ರವಾಗಿ ಗುರುತಿಸಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ಮಾಹಿತಿ ನೀಡಬೇಕು ಎಂದು ಸ್ವಯಂಸೇವಕರಿಗೆ ಸೂಚಿಸಲಾಯಿತು. ಇದರ ಜೊತೆಗೆ ಸಂತ್ರಸ್ತರಿಗೆ ಸರ್ಕಾರದ ವಸತಿ ಯೋಜನೆಗಳು, ಮಾಸಾಶನ, ಗುರುತಿನ ಚೀಟಿ ಹಾಗೂ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗಳ ಸೌಲಭ್ಯಗಳು ಸುಲಭವಾಗಿ ಸಿಗುವಂತೆ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ನೆರವಾಗಬೇಕು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಶೀಘ್ರ ವಿಚಾರಣಾ ವಿಶೇಷ ನ್ಯಾಯಾಲಯದ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಆನಂದ್ ಪಿ. ಹೊಗಾಡೆ, ಹಿರಿಯ ಸಿವಿಲ್ ನ್ಯಾಯಾಧೀಶ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ನಾಗರಾಜ ಸಿದ್ದಪ್ಪ ಅಂಕಸದೊಡ್ಡಿ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎಸ್. ಯುಕೇಶ್ ಕುಮಾರ್, ಅಪರ ಪೊಲೀಸ್ ವರಿಷ್ಠಾಧಿಕಾರಿ ಸಿ. ಮಲ್ಲಿಕ್, ವಕೀಲರ ಸಂಘದ ಅಧ್ಯಕ್ಷ ಎಸ್. ಲೋಕೇಶ್, ಅಭಿಯೋಜನಾ ಇಲಾಖೆಯ ಕಾನೂನು ಅಧಿಕಾರಿ ಬಿ.ಇ. ಯೋಗೇಶ್ವರ್, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಆಶಾ ಹಾಗೂ ತರಬೇತುದಾರರಾದ ಡಿ. ಶಮಾ ಸೇರಿದಂತೆ ಹಲವು ಪ್ರಮುಖರು ಉಪಸ್ಥಿತರಿದ್ದರು.

# ಸ್ವಾತಂತ್ರ್ಯ ದಿನಾಚರಣೆ

ಚಾಮರಾಜನಗರ. ತಾಲೂಕಿನ ಮೇಲೂರು ಗ್ರಾಮದ ಅಂಗನವಾಡಿ ಕೇಂದ್ರದಲ್ಲಿ 80 ನೇ ಸ್ವಾತಂತ್ರ್ಯ ದಿನಾಚರಣೆ ಆಚರಿಸಲಾಯಿತು.

ಕರ್ನಾಟಕ ರಾಜ್ಯ ರೈತ ಕಲ್ಯಾಣ ಸಂಘದ ಜಿಲ್ಲಾಧ್ಯಕ್ಷ ಅಜಯ್ ಅರಕಲವಾಡಿ ಧ್ವಜಾರೋಹಣ ನೆರವೇರಿಸಿ ಮಾತನಾಡಿ, ಅಸಂಖ್ಯಾತ ಜನರ ಹೋರಾಟ ತ್ಯಾಗ, ಬಲಿದಾನದ ಫಲವಾಗಿ ದೇಶಕ್ಕೆ ಸ್ವಾತಂತ್ರ್ಯ ದೊರೆತಿದೆ. ಕರ್ನಾಟಕವು ಸ್ವಾತಂತ್ರ್ಯ ಹೋರಾಟದಲ್ಲಿ ಮಹತ್ವದ ಪಾತ್ರ ವಹಿಸಿದೆ ಎಂದರು. ಸರ್ಕಾರಿ ಶಾಲೆಯಲ್ಲೂ ಗುಣಮಟ್ಟದ ಶಿಕ್ಷಣ, ಇಂಗ್ಲಿಷ್ ಶಿಕ್ಷಣ ದೊರೆಯುತಿದೆ. ಆಗಾಗಿ ಸರ್ಕಾರಿ ಶಾಲೆಗೆ ಪ್ರತಿಯೊಬ್ಬರೂ ತಮ್ಮ ಮಕ್ಕಳನ್ನು ಸೇರಿಸಬೇಕು ಎಂದು ಸಲಹೆ ನೀಡಿದರು. ಇದೇ ಸಂದರ್ಭದಲ್ಲಿ ಮಕ್ಕಳಿಗೆ ನೋಟ್‌ಪುಸ್ತಕ, ಲೇಖನ ಸಾಮಾಗ್ರಿಗಳನ್ನು ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಡಾ. ಸಂತೋಷ್, ನಾಗಮಲ್ಲಪ್ಪ, ಪ್ರಸಾದ್, ವಿನೋದ್, ಅಂಗನವಾಡಿ ಕಾರ್ಯಕರ್ತೆ ಪಾರ್ವತಿ, ಜಗದೀಶ್, ಮಧು ಇತರರು ಹಾಜರಿದ್ದರು.



# ಕ್ಯೂಆರ್ ಕೋಡ್ ಮೂಲಕ ಪುಸ್ತಕ ಓದುವ ಅವಕಾಶ

### ರಾಜ್ಯಮಟ್ಟದಲ್ಲಿ ಗಮನ ಸೆಳೆದ ಮಂಗಲ ಗ್ರಂಥಾಲಯ



ಗುಂಡ್ಲುಪೇಟೆ, :-ತಾಲೂಕಿನ ಕಾಡಂಚಿನ ಗ್ರಾಮವಾದ ಮಂಗಲ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಂಥಾಲಯವು ಕ್ಯೂಆರ್ ಕೋಡ್ ಮೂಲಕ ಪುಸ್ತಕಗಳನ್ನು ಮೊಬೈಲ್‌ನಲ್ಲೇ ಓದಲು ಹಾಗೂ ಡೌನ್ ಲೋಡ್ ಮಾಡಿಕೊಳ್ಳಲು ಅವಕಾಶ ಕಲ್ಪಿಸುವ ವಿಶಿಷ್ಟ ಯೋಜನೆಗೆ ಆಯ್ಕೆಯಾಗಿದ್ದು, ರಾಜ್ಯಮಟ್ಟದಲ್ಲಿ ಗಮನ ಸೆಳೆದಿದೆ.

ಮಂಗಲ ಗ್ರಾಮ ಪಂಚಾಯಿತಿ ಗ್ರಂಥಾಲಯ ಹಾಗೂ ಅರಿವು ಕೇಂದ್ರದಲ್ಲಿ ಮಕ್ಕಳ ವ್ಯಕ್ತಿತ್ವ ವಿಕಸನ ಹಾಗೂ ಸೃಜನಾತ್ಮಕ ಚಟುವಟಿಕೆಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ. ಮಕ್ಕಳಿಗೆ ಕಂಪ್ಯೂಟರ್ ತರಬೇತಿ, ಬೇಸಿಗೆ ಶಿಬಿರ, ಶೈಕ್ಷಣಿಕ ಪ್ರವಾಸ, 'ಗಟ್ಟಿ ಓದು', ಯೂಟ್ಯೂಬ್ ತರಬೇತಿ ಹಾಗೂ ಮಾಸಿಕ ಚಟುವಟಿಕೆ ಸೇರಿದಂತೆ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಈ ವೈವಿಧ್ಯಮಯ ಚಟುವಟಿಕೆಗಳು ಹಾಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಎಚ್.ಆರ್. ಮೋಹನ್ ಕುಮಾರ್ ಅವರ ಸಹಕಾರದಿಂದ ಮಂಗಲ ಗ್ರಂಥಾಲಯ ರಾಜ್ಯಮಟ್ಟದಲ್ಲಿ ಗುರುತಿಸಿಕೊಂಡಿದೆ ಎಂದು ಗ್ರಂಥಾಲಯ ಮೇಲ್ವಿಚಾರಕ ಕುಮಾರ ಎಂ.ಬಿ. ತಿಳಿಸಿದ್ದಾರೆ.

ಕ್ಯೂಆರ್ ಕೋಡ್ ಆಧಾರಿತ ಯೋಜನೆ ಜಾರಿಯಾದ ಬಳಿಕ ಮಂಗಲ ಗ್ರಾಮ ಪಂಚಾಯಿತಿ ವ್ಯಾಪ್ತಿಯಷ್ಟೇ ಅಲ್ಲದೆ ತಾಲೂಕಿನ ಓದುಗರಿಗೂ ಅನುಕೂಲವಾಗಲಿದೆ. ಓದುಗರು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕ ತಮಗೆ ಅಗತ್ಯವಿರುವ ಪುಸ್ತಕಗಳನ್ನು ಮೊಬೈಲ್‌ನಲ್ಲಿ ಓದಲು ಹಾಗೂ ಡೌನ್‌ಲೋಡ್ ಮಾಡಿಕೊಳ್ಳಲು ಸಾಧ್ಯವಾಗಲಿದೆ. ಇದರೊಂದಿಗೆ ಸ್ಥಳೀಯ ಪತ್ರಿಕೆಗಳನ್ನೂ ಯೋಜನೆಯಡಿ ಅಳವಡಿಸಲು ಅವಕಾಶವಿದ್ದು, ಓದುಗರ ಬೇಡಿಕೆಗೆ ಅನುಗುಣವಾಗಿ ಹೊಸ ಪತ್ರಿಕೆಗಳು ಹಾಗೂ ಪುಸ್ತಕಗಳನ್ನು ಸೇರ್ಪಡೆಗೊಳಿಸುವ ವ್ಯವಸ್ಥೆಯೂ ಇರಲಿದೆ ಎಂದು ಅವರು ತಿಳಿಸಿದ್ದಾರೆ.

**'ಸ್ಮಾರ್ಟ್ ರೀಡಿಂಗ್ ರಾಜ್ಯ' ಗುರಿ**

**ರಾಜ್ಯದ ಎಲ್ಲಾ 6,230 ಪಂಚಾಯತ್ ರಾಜ್ ಸಂಸ್ಥೆಗಳ ಸ್ಥಳಗಳನ್ನು ಸ್ಮಾರ್ಟ್ ರೀಡಿಂಗ್ ಝೋನ್‌ಗಳಾಗಿ ಪರಿವರ್ತಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು. ಈ ಮಹತ್ವಾಕಾಂಕ್ಷಿ ಹಾಗೂ ಪ್ರವರ್ತಕ ಉಪಕ್ರಮದ ಮೂಲಕ ಕರ್ನಾಟಕವನ್ನು ದೇಶದ ಮೊದಲ ಸ್ಮಾರ್ಟ್ ರೀಡಿಂಗ್ ರಾಜ್ಯವನ್ನಾಗಿ ರೂಪಿಸುವ ಗುರಿ ಹೊಂದಲಾಗಿದೆ.**

**ಉಮಾ ಮಹಾದೇವನ್** ಪಂಚಾಯತ್ ರಾಜ್ ಇಲಾಖೆಯ ಅಭಿವೃದ್ಧಿ ಆಯುಕ್ತ

**ಮಂಗಲ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸ್ವಂತ ಕಟ್ಟಡದ ಕೊರತೆಯಿಂದ ಗ್ರಂಥಾಲಯವು ಸದ್ಯ ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ. ಗ್ರಂಥಪಾಲಕರ ಶ್ರಮದಿಂದ ಉತ್ತಮವಾಗಿ ನಡೆಯುತ್ತಿರುವ ಗ್ರಂಥಾಲಯದಲ್ಲಿ ಏಳು ಕಂಪ್ಯೂಟರ್‌ಗಳು ಸೇರಿದಂತೆ ಅಗತ್ಯ ಪುಸ್ತಕಗಳು ಹಾಗೂ ಇತರೆ ಸೌಲಭ್ಯಗಳು ಲಭ್ಯವಿವೆ. ಸರ್ಕಾರದಿಂದ ಸ್ವಂತ ಕಟ್ಟಡ ನಿರ್ಮಾಣಕ್ಕೆ ಅನುದಾನ ದೊರೆತರೆ ಗ್ರಂಥಾಲಯಕ್ಕೆ ಇನ್ನಷ್ಟು ಉತ್ತಮ ಸೌಲಭ್ಯಗಳನ್ನು ಕಲ್ಪಿಸಲು ಅನುಕೂಲವಾಗಲಿದೆ.**

**ಎಚ್.ಆರ್. ಮೋಹನ್ ಕುಮಾರ್** ಪಂಚಾಯಿತಿ ಅಭಿವೃದ್ಧಿ ಅಧಿಕಾರಿ

# ಪತ್ರಕರ್ತ ಶಿವಕುಮಾರಗೆ ಸನ್ಮಾನ

ಎಚ್.ಡಿ.ಕೋಟೆ: ತಾಲೂಕಿನ ವಿವಿಧ ಸಮಸ್ಯೆಗಳನ್ನು ಪತ್ರಿಕೆಗಳಲ್ಲಿ ವರದಿ ಮಾಡುವ ಮೂಲಕ ಅವುಗಳ ಪರಿಹಾರಕ್ಕೆ ಮಹತ್ವದ ಪಾತ್ರ ವಹಿಸುತ್ತಿರುವ ಪತ್ರಕರ್ತ ಶಿವಕುಮಾರ ತುಂಬಸೋಗೆ ಅವರನ್ನು ತಾಲೂಕು ಆಡಳಿತ, 80ನೇ ಸ್ವಾತಂತ್ರ್ಯ ದಿನಾಚರಣೆಯ ಸಂಭ್ರಮದಲ್ಲಿ ಸನ್ಮಾನಿಸಿ ಗೌರವಿಸಿದೆ.

ಸಾರ್ವಜನಿಕರ ಸಮಸ್ಯೆಗಳಿಗೆ ಧ್ವನಿಯಾಗಿ, ಜನರ ಅಹವಾಲುಗಳನ್ನು ಪತ್ರಿಕಾ ವರದಿಗಳ ಮೂಲಕ ಸಂಬಂಧಪಟ್ಟವರ ಗಮನಕ್ಕೆ ತರುವಲ್ಲಿ ವರ್ತಮಾನ ದಿನಪತ್ರಿಕೆ ವರದಿಗಾರ ಶಿವಕುಮಾರ ತುಂಬಸೋಗೆ ಅವರು ನಿರಂತರವಾಗಿ ಕಾರ್ಯನಿರ್ವಹಿಸುತ್ತಿದ್ದರು.

ತಾಲೂಕಿನ ಜನರ ಸಮಸ್ಯೆಗಳನ್ನು ಬೆಳಕಿಗೆ ತಂದು, ಅವುಗಳ ಪರಿಹಾರಕ್ಕೆ ಕಾರಣವಾಗಿರುವ ಅವರ ಸೇವೆಯನ್ನು ಗುರುತಿಸಿ ತಾಲೂಕು ಆಡಳಿತ ಹಾಗೂ ಶಾಸಕ ಅನಿಲ್ ಚಿಕ್ಕಮಾದು ಸನ್ಮಾನಿಸಿ ಗೌರವಿಸಿದ್ದಾರೆ.




# ಸ್ವಾತಂತ್ರ್ಯೋತ್ಸವ ಮಹತ್ವದ ಜಾಗೃತಿ




ಚಾಮರಾಜನಗರ. ಸ್ವಾತಂತ್ರ್ಯ ದಿನಾಚರಣೆಯ ಪ್ರಯುಕ್ತ ನಗರದ ಬಂಜಾರ ಇಂಡಿಯನ್ ಶಾಲೆಯ ವತಿಯಿಂದ ಸಾರ್ವಜನಿಕರು ಹಾಗೂ ಮಕ್ಕಳಲ್ಲಿ ದೇಶಪ್ರೇಮ, ದೇಶಭಕ್ತಿ, ಸ್ವಚ್ಛ ಭಾರತ ಮತ್ತು ಸ್ವಾತಂತ್ರ್ಯೋತ್ಸವದ ಮಹತ್ವದ ಕುರಿತು ಜಾಗೃತಿ ಮೂಡಿಸಲಾಯಿತು.

ನಗರದ ಶ್ರೀ ಚಾಮರಾಜೇಶ್ವರ ದೇವಸ್ಥಾನದ ಮುಂಭಾಗದಲ್ಲಿ ಜಾಗೃತಿ ಜಾಥಾಕ್ಕೆ ಬಂಜಾರ ಎಜುಕೇಶನ್ ಅಂಡ್ ಸೋಷಿಯಲ್ ಟ್ರಸ್ಟ್ ಅಧ್ಯಕ್ಷ ಶಿವಾಜಿ ಆರ್. ಮೆಘಾವತ್ ಚಾಲನೆ ನೀಡಿದರು. ಶಾಲಾ ಮಕ್ಕಳು ಬೀದಿ ನಾಟಕಗಳ ಮೂಲಕ ಸಾರ್ವಜನಿಕರಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಮಹನೀಯರ ತ್ಯಾಗ, ದೇಶಪ್ರೇಮ, ದೇಶಭಕ್ತಿ ಹಾಗೂ ಮಹಾತ್ಮ ಗಾಂಧೀಜಿಯವರ ಸ್ವಚ್ಛ ಭಾರತದ ಕನಸು ಕುರಿತು ಜಾಗೃತಿ ಮೂಡಿಸಿದರು.

ಜಾಗೃತಿ ಜಾಥಾವು ಭುವನೇಶ್ವರಿ ರಸ್ತೆ ಹಾಗೂ ಬಿ. ರಾಚಯ್ಯ ಜೋಡಿ ರಸ್ತೆಯ ಮೂಲಕ ಸಾಗಿ ಜಿಲ್ಲಾಡಳಿತ ಭವನದ ಮುಂಭಾಗ ತಲುಪಿತು. ಬಳಿಕ ಡಾ. ಬಿ.ಆರ್. ಅಂಬೇಡ್ಕರ್ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡುವ ಮೂಲಕ ಕಾರ್ಯಕ್ರಮ ಮುಕ್ತಾಯಗೊಂಡಿತು.

ಈ ಸಂದರ್ಭದಲ್ಲಿ ಮಾತನಾಡಿದ ಶಾಲೆಯ ಮುಖ್ಯಶಿಕ್ಷಕ ಸಂತೋಷ್, "ಸ್ವಾತಂತ್ರ್ಯೋತ್ಸವದ ಅಂಗವಾಗಿ ಸಾರ್ವಜನಿಕರು ಹಾಗೂ ಮಕ್ಕಳಲ್ಲಿ ದೇಶಪ್ರೇಮ, ದೇಶಭಕ್ತಿ ಮತ್ತು ಸ್ವಾತಂತ್ರ್ಯೋತ್ಸವದ ಮಹತ್ವದ ಕುರಿತು ಜಾಗೃತಿ ಮೂಡಿಸುವ ಉದ್ದೇಶದಿಂದ ಬಂಜಾರ ಇಂಡಿಯನ್ ಶಾಲೆಯ ವತಿಯಿಂದ ಈ ಜಾಗೃತಿ ಹಮ್ಮಿಕೊಳ್ಳಲಾಗಿದೆ" ಎಂದು ತಿಳಿಸಿದರು. ಟ್ರಸ್ಟಿಗಳಾದ ಜಗದೀಶ್ ನಾಯಕ್, ಮುಖ್ಯಶಿಕ್ಷಕ ಸಂತೋಷ್, ಶಿಕ್ಷಕರಾದ ರಾಜೇಂದ್ರ, ಸಾಧನ ಹಾಗೂ ನಯನಾ ಸೇರಿದಂತೆ ಶಾಲಾ ಮಕ್ಕಳು ಭಾಗವಹಿಸಿದ್ದರು.

# 15 ಲಕ್ಷ ರೂ. ಪರಿಹಾರ ವಿತರಣೆ

- **ಮೂವರ ಶೂಟೌಟ್ ಪ್ರಕರಣ**
- **ಸರ್ಕಾರದಿಂದ ತಲಾ 5 ಲಕ್ಷ ರೂ**
- **ಶಾಸಕರಿಂದ ತಲಾ 15 ಲಕ್ಷ ರೂ. ಪರಿಹಾರ**

ಚಾಮರಾಜನಗರ: ಕಾವೇರಿ ವನ್ಯಜೀವಿಧಾಮದ ಶಾಗ್ಯ ಬೀಟ್?ನಲ್ಲಿ ನಡೆದ ಶೂಟೌಟ್ ಪ್ರಕರಣದಲ್ಲಿ ಮೃತಪಟ್ಟ ಮೂವರ ಕುಟುಂಬಗಳಿಗೂ ಹನೂರು ಶಾಸಕ ಎಂ.ಆರ್.ಮಂಜುನಾಥ್ ಅವರು ಪರಿಹಾರ ವಿತರಿಸಿದ್ದಾರೆ.

ಹನೂರು ತಾಲೂಕಿನ ತೋಮಿಯಾರ್ ಪಾಳ್ಯ ಗ್ರಾಮದ ಕುಮಾರ್, ಗ್ರಾಮದ ಸಮೀಪವಿರುವ ಮರಿಯಮಂಗಲ ಗ್ರಾಮದ ಅಂತೋಣಿ ಸಾಮಿ ಹಾಗೂ ಪೀಟರ್ ಅವರ ಮನೆಗಳಿಗೆ ತೆರಳಿ ಸರ್ಕಾರದಿಂದ 5 ಲಕ್ಷ ರೂ. ಮತ್ತು ವೈಯಕ್ತಿಕವಾಗಿ 10 ಲಕ್ಷ ರೂ. ಸೇರಿಸಿ ತಲಾ 15 ಲಕ್ಷ ರೂ. ಪರಿಹಾರ ವಿತರಿಸಿದರು. ಭಾನುವಾರ ಪ್ರತಿಭಟನಾನಿರತರಿಗೆ ನೀಡಿದ್ದ ಭರವಸೆಯಂತೆ ಶಾಸಕರು ಪರಿಹಾರ ನೀಡಿದ್ದಾರೆ.

ಈ ಪ್ರಕರಣದ ತನಿಖೆ ನಡೆಯುತ್ತಿದೆ. ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವುದಾಗಿಯೂ ಶಾಸಕರು ಭರವಸೆ ನೀಡಿದರು.



## ಸಾಮೂಹಿಕ ಪ್ರಾರ್ಥನೆಯ ಬಳಿಕ ಅಂತ್ಯಕ್ರಿಯೆ

**ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ಕಳೆದ ತಡರಾತ್ರಿ ಶವಗಳನ್ನು ಗ್ರಾಮಕ್ಕೆ ತರಲಾಗಿದೆ. ತೋಮಿಯಾರ್ ಪಾಳ್ಯದ ಚರ್ಚ್?ನಲ್ಲಿ ಮೂವರ ಮೃತದೇಹಗಳನ್ನು ಇಡಲಾಗಿದೆ. ಚರ್ಚ್‌ನ ಪಾದ್ರಿ ಕೆ.ಚಾರ್ಲ್ಸ್ ಅವರ ನೇತೃತ್ವದಲ್ಲಿ ಸಾಮೂಹಿಕ ಪ್ರಾರ್ಥನೆ ನಡೆಯಲಿದ್ದು, ಬಳಿಕ ಕ್ರೈಸ್ತ ಸಂಪ್ರದಾಯದಂತೆ ಸ್ವಗ್ರಾಮಗಳಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬ ಮೂಲಗಳಿಂದ ತಿಳಿದು ಬಂದಿದೆ.**

## ಸ್ಥಳ ಮಹಜರು, ವಶಕ್ಕೆ ಪಡೆದ ವಸ್ತುಗಳು ರಿವೀಲ್

**ಚಾಮರಾಜನಗರ.** ಕೊಳ್ಳೇಗಾಲ ಉಪ ವಿಭಾಗಧಿಕಾರಿ ದಿನೇಶ್ ಕುಮಾರ್ ಮೀನಾ ಅವರು ಶೂಟೌಟ್ ನಡೆದ ಸ್ಥಳಕ್ಕೆ ಎರಡು ದಿನ ಭೇಟಿ ಕೊಟ್ಟು, ಮಹಜರು ನಡೆಸಿದ್ದಾರೆ. ಅರಣ್ಯ ಇಲಾಖೆ ಹಲವು ಸಾಕ್ಷಿಗಳನ್ನು ತನಿಖಾಧಿಕಾರಿಗೆ ಸಲ್ಲಿಸಿದೆ.

ಘಟನೆ ನಡೆದ ಬಳಿಕ ವಶಕ್ಕೆ ಪಡೆಯಲಾಗಿದ್ದ 30 ಕೆ.ಜಿ.ಯಷ್ಟು ಜಿಂಕೆ ಮಾಂಸ, ಒಂಟಿ ನಳಿಕೆಯ ಎರಡು ನಾಡ ಬಂದೂಕು, ಹೆಡ್ ಟಾರ್ಚ್‌ಗಳು, ಧರಿಸಿದ ಚಪ್ಪಲಿಗಳು, ಅಡುಗೆ ಮಾಡಲು ತರಲಾಗಿದ್ದ ಪಾತ್ರೆ, ಸಾಂಬಾರ ಪದಾರ್ಥಗಳು, ಚಾಕು ಹಾಗು ಬ್ಯಾಗ್‌ಗಳನ್ನು ಸಾಕ್ಷಿಯಾಗಿ ತನಿಖಾಧಿಕಾರಿಗೆ ಸಲ್ಲಿಸಲಾಗಿದೆ.



ಹಲವು ಆಯಾಮಗಳಲ್ಲಿ ತನಿಖೆ ನಡೆಸಲಾಗುತ್ತಿದ್ದು, ಮರಣೋತ್ತರ ವರದಿ ಬಂದ ನಂತರ ಸಂಪೂರ್ಣ ತನಿಖಾ ವರದಿ ಸಲ್ಲಿಸಲಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ.

**ಪಂಚನಾಮೆ ಹೆಸರಲ್ಲಿ ಸಹಿ ಪಡೆದ ಆರೋಪ**

ಮೃತಪಟ್ಟ ಪೀಟರ್ ಅವರ ಸಹೋದರಿ (ವೃತ್ತಿಯಲ್ಲಿ ನರ್ಸ್) ಮಾರ್ಗರೇಟ್ ಮಾತನಾಡಿ, ಪೊಲೀಸರು ಪಂಚನಾಮೆ ಹೆಸರಿನಲ್ಲಿ ನಮ್ಮಿಂದ ಸಹಿ ಪಡೆದು, ನಮಗೆ ತಿಳಿಯದಂತೆ ಎರಡು ಮೃತದೇಹಗಳ ಮರಣೋತ್ತರ ಪರೀಕ್ಷೆ ಮುಗಿಸಿದ್ದಾರೆ. ಶವಗಳನ್ನು ಐಸ್ ಬಾಕ್ಸ್‌ನಲ್ಲೂ ಇಟ್ಟಿರಲಿಲ್ಲ ಎಂದು ಆರೋಪಿಸಿದರು.

ಮಾರ್ಟಹಳ್ಳಿ ಗ್ರಾ.ಪಂ ಮಾಜಿ ಅಧ್ಯಕ್ಷ ಸೆಲ್ವಂ ಮಾತನಾಡಿ, ರಾಜ್ಯದಲ್ಲಿ 13 ಲಕ್ಷ ಮಂದಿ ಕ್ರಿಶ್ಚಿಯನ್ ಸಮುದಾಯದವರಿದ್ದೇವೆ. ಸಮುದಾಯದ ಪ್ರಮುಖ ನಾಯಕರು ನಮ್ಮ ನೋವಿಗೆ ಸ್ಪಂದಿಸಿಲ್ಲ. ಇದೇ ಘಟನೆ ಬೇರೆ ಪ್ರಭಾವಿ ಸಮುದಾಯಗಳಿಗೆ ಆಗಿದ್ದರೆ ರಾಜ್ಯಾದ್ಯಂತ ದೊಡ್ಡ ಹೋರಾಟವೇ ನಡೆಯುತ್ತಿತ್ತು ಎಂದು ಬೇಸರ ವ್ಯಕ್ತಪಡಿಸಿದರು.

## ವಿಧಾನ ಪರಿಷತ್‌ನಲ್ಲೂ ಗಲಾಟೆ



**ಬೆಂಗಳೂರು:** ವಿಧಾನ ಪರಿಷತ್‌ನಲ್ಲೂ ಸಚಿವ ನಾಗೇಂದ್ರ ಅವರ ರಾಜೀನಾಮೆಗೆ ಆಗ್ರಹಿಸಿ ವಿಪಕ್ಷಗಳು ಗದ್ದಲ ನಡೆಸಿದ ಹಿನ್ನೆಲೆಯಲ್ಲಿ ಸಭಾಪತಿ ಸಲೀಂ ಅಹಮದ್ ಅವರು ಕಲಾಪವನ್ನು ಮಧ್ಯಾಹ್ನದವರೆಗೆ ಮುಂದೂಡಿದರು.

ಕಲಾಪ ಆರಂಭವಾಗುತ್ತಿದ್ದಂತೆ ಚಾಮರಾಜ ನಗರ ಎನ್‌ಕೌಂಟರ್ ಪ್ರಕರಣದ ವಿಚಾರ ಚರ್ಚೆ ಯಾಯಿತು. ಬಳಿಕ ವಾಲ್ಮೀಕಿ ನಿಗಮದ ಹಗರಣದ ವಿಚಾರವನ್ನು ವಿಪಕ್ಷಗಳು ಪ್ರಸ್ತಾಪಿಸಿದವು. ಹಗರಣದ ಆರೋಪ ಎದುರಿಸಿರುವ ನಾಗೇಂದ್ರ ಅವರನ್ನು ಮತ್ತೆ ಸಚಿವರನ್ನಾಗಿ ಮಾಡಿರುವುದಕ್ಕೆ ವಿಪಕ್ಷಗಳು ಆಕ್ಷೇಪ ವ್ಯಕ್ತಪಡಿಸಿದವು.

ನಾಗೇಂದ್ರ ಅವರನ್ನು ಸಚಿವ ಸ್ಥಾನದಿಂದ ವಜಾ ಮಾಡಬೇಕು. ಸಿಎಂ ಸದನಕ್ಕೆ ಬಂದು ನಾಗೇಂದ್ರ ರಾಜೀನಾಮೆ ನೀಡಿದ್ದಾರೆ ಎಂದು ಹೇಳಬೇಕು. ಅಲ್ಲಿಯವರೆಗೆ ಸದನ ನಡೆಯಲು ಬಿಡುವುದಿಲ್ಲ ಎಂದು ವಿಪಕ್ಷಗಳು ಪಟ್ಟು ಹಿಡಿದವು. ಈ ವೇಳೆ ಬಿಜೆಪಿ ಹಾಗೂ ಜೆಡಿಎಸ್ ಸದಸ್ಯರು ನಾಗೇಂದ್ರ ರಾಜೀನಾಮೆ ನೀಡಬೇಕು ಎಂದು ಘೋಷಣೆ ಕೂಗಿದರು. ನಾಗೇಂದ್ರ ಅವರನ್ನು ಮತ್ತೆ ಸಚಿವರನ್ನಾಗಿ ಮಾಡಿರುವುದು ಸರ್ಕಾರಕ್ಕೆ ಕಪ್ಪುಚುಕ್ಕೆ ಎಂದು ವಿಪಕ್ಷ ಸದಸ್ಯರು ಕಿಡಿಕಾರಿದರು. ವಿಪಕ್ಷಗಳ ಪ್ರತಿಭಟನೆ ಮತ್ತು ಘೋಷಣೆಗಳ ನಡುವೆ ಸಭಾಪತಿ ಸಲೀಂ ಅಹಮದ್ ಅವರು ಪ್ರಶ್ನೋತ್ತರ ಕಲಾಪ ನಡೆಸಲು ಮುಂದಾದರು. ಆದರೆ ಬಿಜೆಪಿ-ಜೆಡಿಎಸ್ ಸದಸ್ಯರು ಪ್ರಶ್ನೋತ್ತರ ಕಲಾಪದಲ್ಲಿ ಪ್ರಶ್ನೆ ಕೇಳದೆ ನಾಗೇಂದ್ರ ರಾಜೀನಾಮೆಗೆ ಆಗ್ರಹಿಸಿದರು. ಪ್ರಶ್ನೋತ್ತರ ಕಲಾಪ ಹಾಗೂ ಶೂನ್ಯ ವೇಳೆ ಮುಗಿದ ಬಳಿಕವೂ ಗದ್ದಲ ಮುಂದುವರಿಯಿತು.

## ಹೋರಾಟದ ಮನೋಭಾವನೆ ಇರಲಿ

ಚಾಮರಾಜನಗರ: ತಾಲೂಕಿನ ಹೆಗ್ಗವಾಡಿಪುರ ಗ್ರಾಮದ ಅಂಗನವಾಡಿ ಕೇಂದ್ರದಲ್ಲಿ 80ನೇ ಸ್ವಾತಂತ್ರ್ಯ ದಿನಾಚರಣೆ ಆಚರಿಸಲಾಯಿತು.

ಕರ್ನಾಟಕ ರಾಜ್ಯ ರೈತ ಸಂಘದ ಸದಸ್ಯರು, ವಿಶ್ವ ರೈತ ಸಂಘದ ಸದಸ್ಯ ಮಹೇಶ್ ಕುಮಾರ್ ಧ್ವಜಾರೋಹಣ ನೆರವೇರಿಸಿ ಮಾತನಾಡಿ, ವಿದ್ಯಾರ್ಥಿಗಳು ಸ್ವಾತಂತ್ರ್ಯ ಹೋರಾಟಗಾರ ಆದರ್ಶಗಳನ್ನು ಅಳವಡಿಸಿಕೊಂಡು ಚೆನ್ನಾಗಿ ಓದಿ ದೇಶಪ್ರೇಮ ಬೆಳೆಸಿಕೊಂಡ ಉತ್ತಮಪ್ರಜೆಯಾಗಬೇಕು ದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮ ಪ್ರಾಣವನ್ನೇ ಅರ್ಪಿಸಿದ ಮಹನೀಯರನ್ನು ಸ್ಮರಿಸುವುದು ನೆಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ವಿದ್ಯಾರ್ಥಿಗಳು ಹೋರಾಟದ ಮನೋಭಾವನೆ ಬೆಳೆಸಿಕೊಳ್ಳಬೇಕು ಎಂದರು. ಈ ಸಂದರ್ಭದಲ್ಲಿ ಶಾಲಾಭಿವೃದ್ಧಿ ಸಮಿತಿ ಸದಸ್ಯ ಗೀತಾ, ಮುಖ್ಯಶಿಕ್ಷಕಿ ಪೂರ್ಣಿಮಾ, ಶಿಕ್ಷಕರಾದ ಸವಿತಾ, ಶ್ವೇತಾ, ಶ್ರೀಕಾಂತ್ ಶರ್ಮಾ, ಎಸ್. ಉಮಾ, ಶೈಲಜಾ ಇತರರು ಹಾಜರಿದ್ದ



## ಸ್ವಾತಂತ್ರ್ಯ ನಮಗೆ ಸಿಕ್ಕ ಅಮೂಲ್ಯ ಉಡುಗೊರೆ




ಮೈಸೂರು: ನ್ಯೂ ಸಯ್ಯಾಜಿರಾವ್ ರಸ್ತೆಯಲ್ಲಿರುವ ಜೀವದಾರ ರಕ್ತ ನಿಧಿ ಕೇಂದ್ರದ ಮುಂಭಾಗ 80ನೇ ವರ್ಷದ ಸ್ವಾತಂತ್ರ್ಯೋತ್ಸವವನ್ನು ಜೀವದಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್ ತ್ರಿವರ್ಣ ಧ್ವಜವನ್ನು ಹಾರಿಸಿ ಗೌರವ ಸಲ್ಲಿಸುವ ಮೂಲಕ ಸಡಗರದಿಂದ ಸಂಭ್ರಮಿಸಿದರು.

ನಂತರ ಸಿಹಿ ವಿತರಿಸಿ ಮಾತನಾಡಿ, ಸ್ವತಂತ್ರ ಎನ್ನುವುದು ನಮಗೆ ಸಿಕ್ಕಂತಹ ಅಮೂಲ್ಯವಾದಂತಹ ಉಡುಗೊರೆ ಅದನ್ನು ಜೋಪಾನವಾಗಿ ಕಾಪಾಡಿಕೊಳ್ಳುವುದು ನಮ್ಮ ನಿಮ್ಮೆಲ್ಲರ ಆದ್ಯ ಕರ್ತವ್ಯ ಎಂದು ಹೇಳಿದರು. ಈ ಸಂದರ್ಭದಲ್ಲಿ ಮಮತಾ, ಸುರೇಶ್, ಚಿರು ,ಪ್ರಭು, ದ್ರಾಕ್ಷಾಯಿಣಿ, ಗಿರೀಶ್, ಸೂರಜ್, ಹೇಮಂತ್ ಇತರರು ಉಪಸ್ಥಿತರಿದ್ದರು.

# ಸಚಿವ ನಾಗೇಂದ್ರ ರಾಜೀನಾಮೆಗೆ ಆಗ್ರಹ

## ಅಧಿವೇಶನದಲ್ಲಿ ಪ್ರತಿಪಕ್ಷಗಳ ಗದ್ದಲ, ಪ್ರತಿಭಟನೆ: ವಾಕ್ಸಮರ ತೀವ್ರ

**ಬೆಂಗಳೂರು:** ವಾಲ್ಮೀಕಿ ಅಭಿವೃದ್ಧಿ ನಿಗಮದ ಕೋಟ್ಯಂತರ ರೂಪಾಯಿ ದುರುಪಯೋಗ ಆರೋಪ ಎದುರಿಸುತ್ತಿರುವ ಸಚಿವ ಬಿ.ನಾಗೇಂದ್ರ ಅವರನ್ನು ತಕ್ಷಣವೇ ಸಂಪುಟದಿಂದ ವಜಾಗೊಳಿಸಬೇಕೆಂದು ಒತ್ತಾಯಿಸಿ ಪ್ರತಿಪಕ್ಷಗಳು ಸೋಮವಾರ ವಿಧಾನಸಭೆಯಲ್ಲಿ ಪ್ರತಿಭಟನೆ ನಡೆಸಿದವು. ಈ ಹಿನ್ನೆಲೆಯಲ್ಲಿ ಸದನದಲ್ಲಿ ಗದ್ದಲ, ಗೊಂದಲದ ಸ್ಥಿತಿ ನಿರ್ಮಾಣವಾಗಿತ್ತು.

ವಿಧಾನಸಭೆಯಲ್ಲಿ ಸೋಮವಾರ ಪ್ರಶ್ನೋತ್ತರ ಅವಧಿ ಆರಂಭವಾಗುತ್ತಿದ್ದಂತೆ ಪ್ರತಿಪಕ್ಷ ಬಿಜೆಪಿ ಮತ್ತು ಜೆಡಿಎಸ್ ಈ ವಿಷಯವನ್ನು ಪ್ರಸ್ತಾಪಿಸಿದವು.

ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಮತ್ತು ಬಿಜೆಪಿ ಶಾಸಕ ಸುನಿಲ್ ಕುಮಾರ್ ಈ ವಿಷಯವನ್ನು ಪ್ರಸ್ತಾಪಿಸಿ, ಭ್ರಷ್ಟ ಸಚಿವರೊಂದಿಗೆ ಪ್ರಶ್ನೋತ್ತರ ಅವಧಿಯಲ್ಲಿ ಹೇಗೆ ಭಾಗವಹಿಸಬೇಕು ಎಂದು ಪ್ರಶ್ನಿಸಿದರು.

ನಾಗೇಂದ್ರ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕು. ಇಲ್ಲವೇ, ಅವರನ್ನು ಸಂಪುಟದಿಂದ ವಜಾಗೊಳಿಸಬೇಕೆಂದು ಒತ್ತಾಯಿಸಿದ ಅಶೋಕ್, ಅವರನ್ನು ವಜಾಗೊಳಿಸದ ಹೊರತು ನಾವು ಸದನ ನಡೆಸಲು ಬಿಡುವುದಿಲ್ಲ. ಅವರನ್ನು ತಕ್ಷಣವೇ ಸಂಪುಟದಿಂದ ಮುಖ್ಯಮಂತ್ರಿಗಳು ವಜಾಗೊಳಿಸಬೇಕು ಎಂದು ಆಗ್ರಹಿಸಿದರು.

ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದಾಗ, ನಾಗೇಂದ್ರ ಅವರಿಂದ ರಾಜೀನಾಮೆ ಪಡೆಯಲಾಗಿತ್ತು. ಈಗ ಅವರನ್ನು ಮತ್ತೆ ಏಕೆ ಸಂಪುಟಕ್ಕೆ ಸೇರಿಸಿಕೊಳ್ಳಲಾಗಿದೆ ಎಂದು ಪ್ರಶ್ನಿಸಿದರು.



ಪ್ರಶ್ನೋತ್ತರ ಅವಧಿಗೆ ಅವಕಾಶ ನೀಡುವಂತೆ ಸ್ಪೀಕರ್ ಜಿ.ಎಸ್.ಪಾಟೀಲ್ ಅವರು ಪದೇ ಪದೇ ವಿನಂತಿಸಿದರೂ ಬಿಜೆಪಿ ಪ್ರತಿಭಟನೆ ನಡೆಸಿ, ಘೋಷಣೆ ಕೂಗುತ್ತಿದ್ದರಿಂದ ಸದನವನ್ನು ಸ್ವಲ್ಪ ಸಮಯದವರೆಗೆ ಮುಂದೂಡಿದರು.

ಸದ್ಯ ಯೋಜನೆ ಮತ್ತು ಅಂಕಿಅಂಶ ಸಚಿವರಾದ ನಾಗೇಂದ್ರ ಅವರನ್ನು ವಾಲ್ಮೀಕಿ ಅಭಿವೃದ್ಧಿ ನಿಗಮ ಹಗರಣದಲ್ಲಿ ಜುಲೈ 2024ರಲ್ಲಿ ಇಡಿ ಬಂಧಿಸಿತ್ತು ಮತ್ತು ಅದೇ ವರ್ಷ ಅಕ್ಟೋಬರ್‌ನಲ್ಲಿ ಬೆಂಗಳೂರಿನ ವಿಶೇಷ ನ್ಯಾಯಾಲಯ ಶಾಸಕರಿಗೆ ಜಾಮೀನು ನೀಡಿತ್ತು.

ಪ್ರಕರಣಕ್ಕೆ ಸಂಬಂಧಿಸಿದಂತೆ ಇಡಿ ಮತ್ತು ಸಿಬಿಐ ಆರೋಪಪಟ್ಟಿಯಲ್ಲಿ ನಾಗೇಂದ್ರ ಅವರನ್ನು ಹೆಸರಿಸಿದೆ. ನಾಗೇಂದ್ರ ರಾಜೀನಾಮೆ ವಿಚಾರವನ್ನು ಮುಂದಿಟ್ಟುಕೊಂಡು ಬಿಜೆಪಿ-ಜೆಡಿಎಸ್ ಮತ್ತು ಕಾಂಗ್ರೆಸ್ ನಡುವೆ ವಾಕ್ಸಮರ ತೀವ್ರಗೊಂಡಿದೆ.

## ಆತ್ಮರಕ್ಷಣೆಗಾಗಿ ಅರಣ್ಯಾಧಿಕಾರಿಗಳ ಪ್ರತಿದಾಳಿ: ಸಚಿವ ರಾಮಲಿಂಗಾರೆಡ್ಡಿ

**ಬೆಂಗಳೂರು:** ಹನೂರು ಮೀಸಲು ಅರಣ್ಯ ಪ್ರದೇಶಕ್ಕೆ ಬೇಟೆಗಾರರು ಯಾವುದೇ ಅನುಮತಿ ಇಲ್ಲದೆ ಶಸ್ತ್ರಾಸ್ತ್ರಗಳೊಂದಿಗೆ ಪ್ರವೇಶಿಸಿದ್ದರು. ವನ್ಯಪ್ರಾಣಿ ಬೇಟೆಯಾಡಿರುವುದು ಪ್ರಾಥಮಿಕ ತನಿಖೆಯಲ್ಲಿ ಕಂಡುಬಂದಿದೆ. ಸಿಬ್ಬಂದಿ ಆತ್ಮರಕ್ಷಣೆ ಹಾಗೂ ಅರಣ್ಯ ಮತ್ತು ವನ್ಯಜೀವಿ ಸಂರಕ್ಷಣೆ ಉದ್ದೇಶದಿಂದ ಪ್ರತಿದಾಳಿ ನಡೆಸಿದ್ದಾರೆ ಎಂದು ಸಚಿವ ರಾಮಲಿಂಗಾರೆಡ್ಡಿ ಸ್ಪಷ್ಟನೆ ನೀಡಿದರು.



ಹನೂರಿನ ಶಾಗ್ಯ ಅರಣ್ಯ ಪ್ರದೇಶದಲ್ಲಿ ಎನ್‌ಕೌಂಟರ್ ಪ್ರಕರಣಕ್ಕೆ ಸಂಬಂಧ ಪಟ್ಟಂತೆ ಅಧಿವೇಶನದಲ್ಲಿ ಸೋಮವಾರ ಸಚಿವ ರಾಮಲಿಂಗಾರೆಡ್ಡಿ ಸುದೀರ್ಘ ಉತ್ತರ ನೀಡಿದರು. ಬೇಟೆಗಾರರು ಎತ್ತರದ ಪ್ರದೇಶದಲ್ಲಿ ಅಡಗಿದ್ದರು. ಶರಣಾಗುವಂತೆ ಅಧಿಕಾರಿಗಳು ಮನವಿ ಮಾಡಿದರೂ ಕೇಳದೇ ಅಧಿಕಾರಗಳ ಮೇಲೆ ಗುಂಡು ಹಾರಿಸಿದರು. ಹೀಗಾಗಿ ಅಧಿಕಾರಿಗಳು ಶೂಟೌಟ್ ನಡೆಸಿದರು ಎಂದು ತಿಳಿಸಿದರು.

ಈ ಕಾರ್ಯಾಚರಣೆಯಲ್ಲಿ ಒಟ್ಟು 10 ಸಿಬ್ಬಂದಿ ಭಾಗವಹಿಸಿದ್ದರು. ಸಿಬ್ಬಂದಿಗೂ ಸಣ್ಣಪುಟ್ಟ ಗಾಯಗಳಾಗಿವೆ. ಅರಣ್ಯ ಕಾಯ್ದೆ ಉಲ್ಲಂಘನೆ ಅಡಿ ಪ್ರಕರಣ ದಾಖಲಿಸಲಾಗಿದೆ. ಅಲ್ಲದೆ, ಬೇಟೆಗಾರರಿಂದ ಎರಡು ಬಂದೂಕು, ಕಾಡತೂಸುಗಳು, ಎರಡು ಬ್ಯಾಗ್, ಅದರೊಳಗಿದ್ದ ತಟ್ಟೆ, ಸ್ಪೂನ್, ದಿನಸಿ, ಬಿಸ್ಲತ್ತು, ಮೊಬೈಲ್ ಗಳು, ಚಾಕುಗಳು, ಪಟಾಕಿ, ಮದ್ದಿನ ಬಾಕ್ಸ್, ನಾಡಬಂದೂಕು ಗುಂಡುಗಳು, ಚಾರ್ಜರ್ ಬ್ಯಾಟರಿ, ಮೊಬೈಲ್ ಚಾರ್ಜರ್ ವಶಪಡಿಸಿಕೊಳ್ಳಲಾಗಿದೆ. ಬೇಟೆಗಾರರ ಬ್ಯಾಗ್‌ನಲ್ಲಿ ಪ್ರಾಣಿ ಮಾಂಸ ಬ್ಯಾಗ್‌ನಲ್ಲಿ ಪತ್ತೆ ಆಗಿದೆ. 20-35 ಕೆಜಿಯಷ್ಟು ಜಿಂಕೆ ಮಾಂಸವನ್ನ ವಶಕ್ಕೆ ಪಡೆಯಲಾಗಿದೆ ಎಂದು ವಿವರಿಸಿದರು.

# ನ್ಯಾಯಬೆಲೆ ಅಂಗಡಿಗಳಲ್ಲಿ 'ಅನ್ನಭಾಗ್ಯ'ಮಾಹಿತಿ ಬ್ಯಾನರ್ ಹಾಕಲು ಸೂಚನೆ

**ಮಂಡ್ಯ:** ನ್ಯಾಯಬೆಲೆ ಅಂಗಡಿಗಳಲ್ಲಿ ಅನ್ನಭಾಗ್ಯ ಯೋಜನೆಗೆ ಸಂಬಂಧಿಸಿದ ಸಂಪೂರ್ಣ ಮಾಹಿತಿಯನ್ನು ಒಳಗೊಂಡ ಬ್ಯಾನರ್‌ಗಳನ್ನು ಕಡ್ಡಾಯವಾಗಿ ಅಳವಡಿಸಿ, ಫಲಾನುಭವಿಗಳಿಗೆ ಯೋಜನೆಯ ಕುರಿತು ಸ್ಪಷ್ಟ ಮಾಹಿತಿ ದೊರೆಯುವಂತೆ ಕ್ರಮ ವಹಿಸಬೇಕು ಎಂದು ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ಚಿಕ್ಕಲಿಂಗಯ್ಯ ಸೂಚಿಸಿದರು.

ನಗರದ ಜಿಲ್ಲಾ ಪಂಚಾಯತ್ ಮಿನಿ ಸಭಾಂಗಣದಲ್ಲಿ ನಡೆದ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಅನ್ನಭಾಗ್ಯ ಯೋಜನೆಯಡಿ ಜಿಲ್ಲೆಯಲ್ಲಿ ಒಟ್ಟು 73,50,911 ಫಲಾನುಭವಿಗಳಿದ್ದು, ಆಗಸ್ಟ್ 2026ರ ಮಾಹೆಯಲ್ಲಿ ಆಗಸ್ಟ್ ಮತ್ತು ಸೆಪ್ಟೆಂಬರ್ 2026ರ ಎನ್‌ಎಫ್‌ಎಸ್‌ಎ ಪಡಿತರವನ್ನು ಒಂದೇ ಬಾರಿಗೆ ವಿತರಿಸಲು ಸರ್ಕಾರ ಆದೇಶಿಸಿದೆ. ಹೀಗಾಗಿ ಆಗಸ್ಟ್ 2026ರಲ್ಲಿ ಪ್ರತ್ಯೇಕವಾಗಿ ಅನ್ನಭಾಗ್ಯ ಅಕ್ಕಿ ಹಂಚಿಕೆ ಇರುವುದಿಲ್ಲ ಎಂಬ ಮಾಹಿತಿಯನ್ನು ಸಭೆಯಲ್ಲಿ ತಿಳಿಸಲಾಯಿತು.

ನ್ಯಾಯಬೆಲೆ ಅಂಗಡಿಗಳಿಗೆ ಪಡಿತರ ಬಂದ ದಿನದಿಂದ ತಿಂಗಳ ಅಂತಿಮ ದಿನದವರೆಗೆ, ಸರ್ಕಾರ ನಿಗದಿಪಡಿಸಿರುವ ಬೆಳಿಗ್ಗೆ 6ರಿಂದ 10 ಗಂಟೆ ಹಾಗೂ ಸಂಜೆ 4ರಿಂದ ರಾತ್ರಿ 8 ಗಂಟೆಯವರೆಗೆ ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗದಂತೆ ಪಡಿತರ ವಿತರಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಅಧಿಕಾರಿಗಳು



ಸಭೆಗೆ ಮಾಹಿತಿ ನೀಡಿದರು.

**ಗೃಹಲಕ್ಷ್ಮಿ ಯೋಜನೆ:** ಕರ್ನಾಟಕ ಸರ್ಕಾರದ ಐದು ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಗೃಹಲಕ್ಷ್ಮಿ ಯೋಜನೆಯು ಜಿಲ್ಲೆಯಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳುತ್ತಿದೆ. ಮೇ 2026ರ ಅಂತ್ಯದ ವೇಳೆಗೆ ಜಿಲ್ಲೆಯಲ್ಲಿ 4,66,273 ಫಲಾನುಭವಿಗಳು ನೋಂದಣಿಯಾಗಿದ್ದು, ಈ ಪೈಕಿ 4,36,268 ಅರ್ಹ ಮಹಿಳೆಯರ ಬ್ಯಾಂಕ್ ಖಾತೆಗಳಿಗೆ 32 ಕಂತುಗಳ ಮೂಲಕ ಒಟ್ಟು ?87,25,36,000 ಅನುದಾನವನ್ನು ನೇರವಾಗಿ ಜಮೆ ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದರು.

ಜಂಟಿ ಬ್ಯಾಂಕ್ ಖಾತೆಗಳಿಂದಾಗಿ ಫಲಾನುಭವಿಗಳಿಗೆ ಯೋಜನೆಯ ಹಣ ಪಾವತಿ ಕುರಿತು ಗೊಂದಲ ಉಂಟಾಗುತ್ತಿರುವ ಹಿನ್ನೆಲೆಯಲ್ಲಿ, ಜಂಟಿ ಖಾತೆಗಳನ್ನು ಪ್ರತ್ಯೇಕ ಖಾತೆಗಳಾಗಿ ಪರಿವರ್ತಿಸಿ ಫಲಾನುಭವಿಗಳಿಗೆ ಯಾವುದೇ ತೊಂದರೆಯಾಗದಂತೆ ಕ್ರಮ ಕೈಗೊಳ್ಳಬೇಕು ಎಂದು ಚಿಕ್ಕಲಿಂಗಯ್ಯ ಸೂಚಿಸಿದರು.

ಗೃಹಲಕ್ಷ್ಮಿ ಯೋಜನೆಯ ಫಲಾನುಭವಿಗಳ ಪೈಕಿ 12,943 ಮಂದಿ ಮೃತಪಟ್ಟಿರುವುದಾಗಿ ಸಭೆಯಲ್ಲಿ ತಿಳಿಸಲಾಯಿತು. ಮುಂದಿನ ದಿನಗಳಲ್ಲಿ ಫಲಾನುಭವಿಗಳ ಮರಣದ ಮಾಹಿತಿಯನ್ನು ಆಶಾ ಹಾಗೂ ಅಂಗನವಾಡಿ ಕಾರ್ಯಕರ್ತೆಯರು ಶೀಘ್ರವಾಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ನೀಡುವಂತೆ ಸೂಚಿಸಲಾಯಿತು.

**ಶಕ್ತಿ ಯೋಜನೆ:** 2023ರಿಂದ ಜಾರಿಯಲ್ಲಿರುವ ಶಕ್ತಿ ಯೋಜನೆಯಡಿ ಜುಲೈ 2026ರ ಅಂತ್ಯದವರೆಗೆ ಮಂಡ್ಯ ಜಿಲ್ಲೆಯಲ್ಲಿ 22,93,21,991 ಮಹಿಳಾ ಪ್ರಯಾಣಿಕರು ಉಚಿತ ಪ್ರಯಾಣದ ಸೌಲಭ್ಯ ಪಡೆದಿದ್ದು, ಸಾರಿಗೆ ನಿಗಮಕ್ಕೆ ?642,55,06,039 ಆದಾಯ ದಾಖಲಾಗಿದೆ ಎಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಅಧಿಕಾರಿಗಳು ಮಾಹಿತಿ ನೀಡಿದರು.

**ಯುವನಿಧಿ ಯೋಜನೆ:** ಯುವನಿಧಿ ಯೋಜನೆಯಡಿ ಜೂನ್ 2026ರ ಅಂತ್ಯದ ವೇಳೆಗೆ ಜಿಲ್ಲೆಯಲ್ಲಿ ಒಟ್ಟು 10,526 ಅಭ್ಯರ್ಥಿಗಳು ನೋಂದಣಿಯಾಗಿದ್ದು, 9,645 ಫಲಾನುಭವಿಗಳಿಗೆ 94,921 ಕಂತುಗಳ ಮೂಲಕ ಒಟ್ಟು ?28,23,46,500 ಅನುದಾನವನ್ನು ವರ್ಗಾವಣೆ ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದರು.

ಯುವಜನರಲ್ಲಿ ಯೋಜನೆಯ ಕುರಿತು ಇನ್ನಷ್ಟು ಅರಿವು ಮೂಡಿಸುವ ಉದ್ದೇಶದಿಂದ ಶಾಲಾ?ಕಾಲೇಜುಗಳಲ್ಲಿ ವ್ಯಾಪಕ ಪ್ರಚಾರ ಹಾಗೂ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಎಂದು ಚಿಕ್ಕಲಿಂಗಯ್ಯ ಹೇಳಿದರು.

**ಗೃಹಜ್ಯೋತಿ ಯೋಜನೆ:** ಗೃಹಜ್ಯೋತಿ ಯೋಜನೆಯಡಿ ಜೂನ್ 2026ರ ಅಂತ್ಯದ ವೇಳೆಗೆ ಜಿಲ್ಲೆಯಲ್ಲಿ 5,05,893 ಗ್ರಾಹಕರು ನೋಂದಣಿಯಾಗಿದ್ದು, ಈ ಪೈಕಿ 5,03,153 ಫಲಾನುಭವಿಗಳು ಯೋಜನೆಯ ಸೌಲಭ್ಯ ಪಡೆಯುತ್ತಿದ್ದಾರೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಯೋಜನೆಯ ಕುರಿತು ಮನೆ?ಮನೆಗೆ ಭೇಟಿ ನೀಡಿ ದತ್ತಾಂಶ ಸಂಗ್ರಹಿಸುವ ಕಾರ್ಯ ನಡೆಯುತ್ತಿದ್ದು, ಜಿಲ್ಲೆಯಲ್ಲಿ ಈವರೆಗೆ ಶೇ.75ರಷ್ಟು ಕಾರ್ಯ ಪೂರ್ಣಗೊಂಡಿದೆ ಎಂದು ಸಭೆಗೆ ತಿಳಿಸಲಾಯಿತು.

ಸಭೆಯಲ್ಲಿ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರಾದ ಕೆ. ಹನುಮಂತಯ್ಯ, ರಾಜೇಂದ್ರ ಪ್ರಸಾದ್, ಶಿವಣ್ಣ, ಜಿಲ್ಲಾ ಪಂಚಾಯತ್ ಯೋಜನಾಧಿಕಾರಿ ಧನುಷ್ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

## ಪಿರಿಯಾಪಟ್ಟಣದಲ್ಲಿ 80ನೇ ಸ್ವಾತಂತ್ರ್ಯ ದಿನಾಚರಣೆ

# ಸ್ವಾತಂತ್ರ್ಯ ಆಚರಣೆಯಷ್ಟೇ ಅಲ್ಲ, ಹೆಮ್ಮೆ ಹಾಗೂ ಜವಾಬ್ದಾರಿಯ ಸಂಕೇತ: ಶಾಸಕ ಕೆ.ವೆಂಕಟೇಶ್



**ಪಿರಿಯಾಪಟ್ಟಣ:** ಸ್ವಾತಂತ್ರ್ಯವು ಕೇವಲ ಆಚರಣೆಯಲ್ಲ ಇದು ನಮ್ಮ ಹೆಮ್ಮೆಯ ಪ್ರತೀಕ ಹಾಗೂ ಜವಾಬ್ದಾರಿಯ ಸಂಕೇತ ಎಂದು ಶಾಸಕ ಕೆ. ವೆಂಕಟೇಶ್ ಹೇಳಿದರು.

ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜು ಮೈದಾನದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ಆಯೋಜಿಸಿದ್ದ 80ನೇ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು.

ಸ್ವಾತಂತ್ರ್ಯ ಹೋರಾಟಗಾರರು ದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮ ವೈಯಕ್ತಿಕ ಬದುಕನ್ನು ತ್ಯಜಿಸಿ ತ್ಯಾಗ ಮತ್ತು ಬಲಿದಾನಗಳ ಮೂಲಕ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟಿದ್ದಾರೆ.ಈ ದೇಶವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುವ ಹೊಣೆಗಾರಿಕೆ ಪ್ರತಿಯೊಬ್ಬ ನಾಗರಿಕನ ಮೇಲಿದೆ.ದೇಶದ ಏಕತೆ, ಅಖಂಡತೆ ಹಾಗೂ ಸಾರ್ವಭೌಮತ್ವವನ್ನು ಕಾಪಾಡುವ ಜವಾಬ್ದಾರಿ ಪ್ರತಿಯೊಬ್ಬ ಭಾರತೀಯ ಪ್ರಜೆ ಹಾಗೂ ಯುವಕರ ಜವಾಬ್ದಾರಿಯಾಗಿದೆ ಎಂದರು.

ತಾಲೂಕಿನ ಪಟ್ಟಣ ಹಾಗೂ ಗ್ರಾಮೀಣ ಭಾಗಗಳ ಸಮಗ್ರ ಅಭಿವೃದ್ಧಿಗೆ ಆದ್ಯತೆ ನೀಡಿ ಸುಮಾರು 1,000 ಕೋಟಿ ರೂ.ಗಳಿಗೂ ಅಧಿಕ ಅನುದಾನದಲ್ಲಿ ರಸ್ತೆ, ಚರಂಡಿ, ಕುಡಿಯುವ ನೀರು, ಶಿಕ್ಷಣ, ಕೃಷಿ, ಹೈನುಗಾರಿಕೆ, ಆರೋಗ್ಯ, ನೀರಾವರಿ, ದೇವಾಲಯಗಳ ಅಭಿವೃದ್ಧಿ ಹಾಗೂ ಸಮುದಾಯ ಭವನಗಳ ನಿರ್ಮಾಣ ಸೇರಿದಂತೆ ವಿವಿಧ ಮೂಲಸೌಕರ್ಯ ಕಾಮಗಾರಿಗಳನ್ನು ಕೈಗೊಂಡು ಭೂಮಿಪೂಜೆ ನೆರವೇರಿಸಲಾಗಿದೆ. ಹಲವು ಯೋಜನೆಗಳು ಪ್ರಗತಿಯಲ್ಲಿದ್ದು, ಮಹತ್ವಾಕಾಂಕ್ಷಿ 150 ಕೆರೆ ನೀರು ತುಂಬಿಸುವ ಯೋಜನೆ ಹಾಗೂ ಕುಸುಮ್-ಸಿ ಯೋಜನೆಗೆ ಹೆಚ್ಚಿನ ಒತ್ತು ನೀಡಿ ರೈತರಿಗೆ 24 ಗಂಟೆಗಳ ವಿದ್ಯುತ್ ಸೌಲಭ್ಯ ಕಲ್ಪಿಸಲು ಕ್ರಮ ವಹಿಸಲಾಗಿದೆ ಎಂದು ತಿಳಿಸಿದರು.

ಸರ್ಕಾರಿ ಪದವಿ ಪೂರ್ವ ಕಾಲೇಜಿನ ಕನ್ನಡ ಉಪನ್ಯಾಸಕ ಕುಮಾರ್ ಎಸ್.ಎ.ಪ್ರಧಾನ ಭಾಷಣಕಾರರಾಗಿ ಮಾತನಾಡಿ, 1600ರಲ್ಲಿ ವ್ಯಾಪಾರದ ಉದ್ದೇಶದಿಂದ ಭಾರತಕ್ಕೆ ಬಂದ ಬ್ರಿಟಿಷರು ದೇಶದ ಆಂತರಿಕ ದುರ್ಬಲತೆಗಳನ್ನು ಬಳಸಿಕೊಂಡು ಸುಮಾರು 3 ಶತಮಾನಗಳ ಕಾಲ ಆಡಳಿತ ನಡೆಸಿದರು. ಸ್ವಾತಂತ್ರ್ಯ ನಮ್ಮ ದೇಶಕ್ಕೆ ಪುಕ್ಕಟೆಯಾಗಿ ಸಿಕ್ಕಿಲ್ಲ,ಅನೇಕ ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ, ಬಲಿದಾನ ಮತ್ತು ನಿರಂತರ ಹೋರಾಟದ ಫಲವಾಗಿ ಭಾರತಕ್ಕೆ ಸ್ವಾತಂತ್ರ್ಯ ದೊರೆತಿದೆ. ಭಾರತೀಯ ಸಂಸ್ಕೃತಿ, ಭಾಷೆ, ಪರಂಪರೆ ಹಾಗೂ ಸ್ವಾಭಿಮಾನದ ರಕ್ಷಣೆಗೆ ಸ್ವಾತಂತ್ರ್ಯ ಹೋರಾಟಗಾರರು ಅಪಾರ ಕೊಡುಗೆ ನೀಡಿದ್ದಾರೆ ಎಂದರಲ್ಲದೆ ಈಗಿನ ಯುವಪೀಳಿಗೆ ದೇಶಭಕ್ತಿ, ಸಾಮಾಜಿಕ ಜವಾಬ್ದಾರಿ ಹಾಗೂ ರಾಷ್ಟ್ರೀಯ ಏಕತೆಯ ಮನೋಭಾವವನ್ನು ಬೆಳೆಸಿಕೊಳ್ಳುವುದರ ಜತೆಗೆ ಸಂವಿಧಾನದಲ್ಲಿ ಅಡಕವಾಗಿರುವ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಸ್ವಾತಂತ್ರ್ಯದ ನಿಜವಾದ ಅರ್ಥ ಸಾರ್ಥಕವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ತಹಸೀಲ್ದಾರ್ ನಿಸರ್ಗ ಪ್ರಿಯಾ ಧ್ವಜ ಸಂದೇಶ ನೀಡಿ, ಸ್ವಾತಂತ್ರ್ಯ ದಿನಾಚರಣೆಯು ಕೇವಲ ಹಬ್ಬವಲ್ಲ, ಪ್ರಜಾಪ್ರಭುತ್ವ, ಸಂವಿಧಾನ ಹಾಗೂ ರಾಷ್ಟ್ರೀಯ ಮೌಲ್ಯಗಳ ಬಗೆಗಿನ ನಮ್ಮ ಬದ್ಧತೆಯನ್ನು ಪುನರುಚ್ಚರಿಸುವ ದಿನವಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಪಟ್ಟಣದ ವಿವಿಧ ಶಾಲೆಗಳ ವಿದ್ಯಾರ್ಥಿಗಳು ಆಕರ್ಷಕ ಪಥಸಂಚಲನ ಹಾಗೂ ದೇಶ ಭಕ್ತಿ ಸಂದೇಶ ಸಾರುವ ನೃತ್ಯ ಪ್ರದರ್ಶಿಸಿ ಗಮನ ಸೆಳೆದರೆ.ಕಳೆದ ಸಾಲಿನ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಗಳಲ್ಲಿ ಅತ್ಯಧಿಕ ಅಂಕ ಗಳಿಸಿದ ತಾಲೂಕಿನ ವಿವಿಧ ಶಾಲೆಯ ವಿದ್ಯಾರ್ಥಿಗಳನ್ನು ಹಾಗೂ ದೇಶದ ಗಡಿಭಾಗಗಳಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ಮಾಜಿ ಸೈನಿಕರನ್ನು ನೆನಪಿನ ಕಾಣಿಕೆ ನೀಡಿ ಗೌರವ ಸನ್ಮಾನಿಸಲಾಯಿತು.

ಕ.ರಾ.ಸ.ನೌ. ಸಂಘದ ತಾಲೂಕು ಅಧ್ಯಕ್ಷ ಹೊಸಳ್ಳಿ ಕೃಷ್ಣೇಗೌಡ, ತಾ.ಪಂ. ಇಒ ಸುನೀಲ್ ಕುಮಾರ್, ಕ್ಷೇತ್ರ ಶಿಕ್ಷಣಾಧಿಕಾರಿ ರವಿ ಪ್ರಸನ್ನ, ಪುರಸಭೆ ಮುಖ್ಯಾಧಿಕಾರಿ ಮಧು ಎಚ್.ಪಿ.,ವೃತ್ತ ನಿರೀಕ್ಷಕ ದೀಪಕ್, ಎಂಡಿಸಿಸಿ ನಿರ್ದೇಶಕ ಈ.ಪಿ. ಲೋಕೇಶ್, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ರಾಜಣ್ಣ, ಸಬ್ ಇನ್ಸ್‌ಪೆಕ್ಟರ್ ಪ್ರಸನ್ನ, ಕಂದಾಯ ನಿರೀಕ್ಷಕ ಮುನಿಯಪ್ಪ, ವಲಯ ಅರಣ್ಯಾಧಿಕಾರಿಗಳಾದ ಪದ್ಮಶ್ರೀ ಹಾಗೂ ಮಧುಸೂದನ್, ಪುರಸಭೆ ಸದಸ್ಯರಾದ ರವಿ ಮತ್ತು ನಾಗರಾಜು, ಸಹಾಯಕ ಅಭಿಯಂತರ ಮಲ್ಲಿಕಾರ್ಜುನ್, ಸಿಡಿಪಿಒ ವೀಣಾ, ಆಹಾರ ಇಲಾಖೆ ಶಿರಸ್ತೇದಾರ್ ಗಣೇಶ್, ಸಮಾಜ ಕಲ್ಯಾಣ ಸಹಾಯಕ ನಿರ್ದೇಶಕ ಚಂದ್ರಶೇಖರ್, ಕೃಷಿ ಸಹಾಯಕ ನಿರ್ದೇಶಕಿ ಕುಸುಮಾ, ರೇಷ್ಮೆ ಸಹಾಯಕ ನಿರ್ದೇಶಕ ಚಂದ್ರಶೇಖರ, ತೋಟಗಾರಿಕೆ ಸಹಾಯಕ ನಿರ್ದೇಶಕ ಗುರುಸ್ವಾಮಿ, ಪಶು ಸಂಗೋಪನೆ ಸಹಾಯಕ ನಿರ್ದೇಶಕ ಸೋಮಯ್ಯ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಶಿಕ್ಷಕರು, ಪೋಷಕರು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

## ತ್ಯಾಗ, ಬಲಿದಾನ ಮಾಡಿದ ಮಹನೀಯರನ್ನು ಸ್ಮರಿಸಿ ಸಮೃದ್ಧ ಭಾರತದ ನಿರ್ಮಾಣಕ್ಕೆ ಸಂಕಲ್ಪ ಅಗತ್ಯ: ಶಾಸಕ ಡಿ.ರವಿಶಂಕರ್

**ಕೆ.ಆರ್. ನಗರ :** ದೇಶದ ಸ್ವಾತಂತ್ರ್ಯಕ್ಕಾಗಿ ತ್ಯಾಗ, ಬಲಿದಾನ ಮಾಡಿದ ಮಹನೀಯರನ್ನು ಸ್ಮರಿಸುತ್ತಾ, ಅವರ ಆಶಯದಂತೆ ಸಮೃದ್ಧ, ಸಮಾನತೆಯ ಮತ್ತು ಸೌಹಾರ್ದತೆಯ ಭಾರತ ನಿರ್ಮಾಣಕ್ಕೆ ನಾವೆಲ್ಲರೂ ಸಂಕಲ್ಪ ಮಾಡೋಣ ಎಂದು ಶಾಸಕ ಡಿ ರವಿಶಂಕರ್ ಹೇಳಿದರು

ಅವರು ಡಾ. ರಾಜ್ ಕುಮಾರ್ ಬಾನಂಗಳದಲ್ಲಿ ತಾಲ್ಲೂಕು ಆಡಳಿತ ಹಾಗೂ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ಆಯೋಜಿಸಿದ್ದ 80ನೇ ವರ್ಷದ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು, ಧ್ವಜಾರೋಹಣ ನೆರವೇರಿಸಿ, ನಾಡಿನ ಜನತೆಗೆ ಸ್ವಾತಂತ್ರ್ಯ ದಿನಾಚರಣೆಯ ಶುಭಾಶಯಗಳನ್ನು ಕೋರಿದರು

ಇದೇ ಸಂದರ್ಭದಲ್ಲಿ ಸ್ಕಾಟ್ಲೆಂಡ್‌ನ ಗ್ಲಾಸ್ಗೋದಲ್ಲಿ ನಡೆದ ಕಾಮನ್‌ವೆಲ್ತ್ ಗೇಮ್ಸ್‌ನ ಶಾಟ್‌ಪುಟ್‌ನಲ್ಲಿ ಕಂಚಿನ ಪದಕ ಗೆದ್ದು ದೇಶದ ಹಿರಿಮೆಯನ್ನು ಎತ್ತಿ ಹಿಡಿದ ಕೆ.ಆರ್ ನಗರ ತಾಲ್ಲೂಕಿನ ಕಂಚಗಾರಕೊಪ್ಪಲು ಗ್ರಾಮದ ಪ್ಯಾರಾ ಅಥ್ಲೀಟ್ ಶಿಲ್ಪಾ ಕೆ.ಎಸ್ ಅವರನ್ನು ಸನ್ಮಾನಿಸಲಾಯಿತು.

ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮೈದಾನದಿಂದ ರೇಡಿಯೋ ಮೈದಾನದವರೆಗೆ ವಿವಿಧ ಶಾಲೆಯ ಮಕ್ಕಳಿಂದ ಮೆರವಣಿಗೆ ನಡೆಸಲಾಯಿತು ಹಾಗೂ ವಿವಿಧ ಶಾಲೆಯ ಮಕ್ಕಳಿಂದ ನೃತ್ಯ ಪ್ರದರ್ಶನ ಏರ್ಪಡಿಸಲಾಯಿತು

ತಾಲ್ಲೂಕಿನಲ್ಲಿ ಅತಿ ಹೆಚ್ಚು ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗಳು ಹಾಗೂ ವಿವಿಧ ಕ್ಷೇತ್ರಗಳಲ್ಲಿ ಗಮನಾರ್ಹ ಸಾಧನೆ ಮಾಡಿದ ಸಾಧಕರನ್ನು ಗೌರವಿಸಿ, ಸನ್ಮಾನಿಸಲಾಯಿತು.

ವಿವಿಧ ಸಂಘಟನೆಗಳಿಂದ ಕಾರ್ಯಕ್ರಮಕ್ಕೆ ಬಂದಂತ ಎಲ್ಲಾ ವಿದ್ಯಾರ್ಥಿಗಳಿಗೂ ಬೆಳಗಿನ ಉಪಹಾರವನ್ನು ಏರ್ಪಡಿಸಲಾಗಿತ್ತು

ಈ ಸಂದರ್ಭದಲ್ಲಿ ತಾಲೂಕು ದಂಡಾಧಿಕಾರಿ ಜಿ ಸುರೇಂದ್ರ ಮೂರ್ತಿ, ಕ್ಷೇತ್ರ ಶಿಕ್ಷಣಾಧಿಕಾರಿ ಕೃಷ್ಣಪ್ಪ, ತಾಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಉಮೇಶ್, ತಾಲೂಕು ಪಂಚಾಯಿತಿ ಕಾರ್ಯನಿರ್ವಾಣಾಧಿಕಾರಿ ವಿ.ಪಿ . ಕುಲ್ ದೀಪ್, ಪುರಸಭೆ ಪ್ರಭಾರ ಮುಖ್ಯ ಅಧಿಕಾರಿ ರಮೇಶ್. ಮಾಜಿ ಪುರಸಭೆ ಅಧ್ಯಕ್ಷ ಕೋಳಿ ಪ್ರಕಾಶ್, ಶಂಕರ್ ಸೇರಿದಂತೆ ಇನ್ನು ಮುಂತಾದ ತಾಲೂಕು ಮಟ್ಟದ ಅಧಿಕಾರಿಗಳು ಹಾಗೂ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಪಾಲ್ಗೊಂಡಿದ್ದರು.



## ಕಾವೇರಿ ಅರಣ್ಯದಲ್ಲಿ ಶೂಟೌಟ್ ಖಂಡನೀಯ : ಪವನ್ ಕುಮಾರ್ ಶಿರ್ವ ಆಕ್ರೋಶ

**ಚಾಮರಾಜನಗರ :** ಜಿಲ್ಲೆಯ ಹನೂರು ತಾಲ್ಲೂಕಿನ ಕಾವೇರಿ ವನ್ಯಜೀವಿ ಧಾಮದ ಮರಿಯಾ ಮಂಗಲ ಅರಣ್ಯ ಪ್ರದೇಶದಲ್ಲಿ ಅರಣ್ಯ ಇಲಾಖೆ ಸಿಬ್ಬಂದಿ ನಡೆಸಿದ ಗುಂಡಿನ ದಾಳಿಯಲ್ಲಿ ಮೂವರು ವ್ಯಕ್ತಿಗಳು ಮೃತರಾಗಿದ್ದಾರೆ.. ಮೂರು ಜನ ಕೂಡ ಹೊರ ರಾಜ್ಯವಾದ ತಮಿಳುನಾದಿನವರು ಆಗಿರುತ್ತಾರೆ.. ಆದರೆ ಈ ವರೆಗೆ ಅವರ ಮನೆ ಅವರು ದೂರು ನೀಡಿದರು ಕೂಡ ಸರ್ಕಾರ ಈ ವರೆಗೆ ಯಾವುದೇ ಕಠಿಣ ಕ್ರಮ ಕೈಗೊಳ್ಳಲಿಲ್ಲ.. ಕರ್ನಾಟಕ ರಾಜ್ಯ ಸರ್ಕಾರ ಹೊರ ರಾಜ್ಯದವರು ಇಂದು ನಿರ್ಲಕ್ಷ ಮಾಡಿದ್ದಲ್ಲಿ ಉಗ್ರ ಹೋರಾಟ ಮಾಡಲಾಗುವುದು.. ಪರಿಹಾರ ನೀಡಿದ ಕೂಡಲೇ ಹೋದ ಜೀವ ಮತ್ತೆ ಬರುವುದಿಲ್ಲ.. ಈ ಘಟನೆಯ ಸತ್ಯಾಸತ್ಯತೆ ಅರಿತು ತಪ್ಪಿತಸ್ತರ ವಿರುದ್ಧ ಕಠಿಣ ಕ್ರಮ ಕೈಗೊಳ್ಳ ಬೇಕೆಂದು ಮುಖಂಡ ಪವನ್ ಕುಮಾರ್ ಅಗ್ರಹಿಸಿದ್ದಾರೆ

# ಸ್ವಾತಂತ್ರ್ಯದ ದುರುಪಯೋಗ ಸಲ್ಲ: ಮಲ್ಲೇಶ್ ಗೌಡ

**ಹಾಸನ:** ಹಿರಿಯರು ಹೋರಾಡಿ ಗಳಿಸಿಕೊಟ್ಟ ಸ್ವಾತಂತ್ರ್ಯವನ್ನು ಸದುಪಯೋಗಪಡಿಸಿಕೊಳ್ಳುವ ಬದಲು, ಕೆಲವೊಮ್ಮೆ ಅದರ ದುರುಪಯೋಗವಾಗುತ್ತಿದೆಯೇ ಎಂಬ ಆತಂಕ ಕಾಡುತ್ತಿದೆ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ.ಎಚ್.ಎಲ್ ಮಲ್ಲೇಶಗೌಡ ಅಭಿಪ್ರಾಯಪಟ್ಟರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಆವರಣದಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು, ಒಂದು ಕಡೆ ಸ್ವಾತಂತ್ರ್ಯದ ಹೆಸರಿನಲ್ಲಿ ಸ್ವೇಚ್ಛಾಚಾರ ಹೆಚ್ಚಾಗುತ್ತಿದ್ದರೆ, ಮತ್ತೊಂದು ಕಡೆ ದೇಶದ ಅನೇಕ ಜನರಿಗೆ ಸ್ವಾತಂತ್ರ್ಯದ ಸಣ್ಣ ಅನುಭವವೂ ದೊರೆಯದೆ ಸಂಕಷ್ಟದ ಬದುಕು ನಡೆಸುವ ಪರಿಸ್ಥಿತಿ ಇದೆ. ಈ ಎರಡೂ ಸಂಗತಿಗಳು ನೋವುಂಟುಮಾಡುತ್ತವೆ ಎಂದರು.

ಪ್ರತಿಯೊಬ್ಬರೂ ಪರಸ್ಪರರ ಧರ್ಮ, ಜಾತಿ, ಭಾವನೆ, ಮೌಲ್ಯ ಮತ್ತು ನಂಬಿಕೆಗಳನ್ನು ಗೌರವಿಸುವ ಮನೋಭಾವ ಬೆಳೆಸಿಕೊಳ್ಳಬೇಕು. ದೇವರಿದ್ದಾನೆ ಎಂಬ ನಂಬಿಕೆ ಇರುವವರು ಹಾಗೂ ದೇವರಿಲ್ಲ ಎಂಬ ನಂಬಿಕೆ ಹೊಂದಿರುವವರು ಪರಸ್ಪರರ ನಂಬಿಕೆಯನ್ನು ಗೌರವಿಸಬೇಕು. ಹಾಗೆಯೇ, ತಮ್ಮ ಧರ್ಮವನ್ನು ಪ್ರೀತಿಸುವುದಕ್ಕೆ ಮತ್ತೊಂದು ಧರ್ಮವನ್ನು ದ್ವೇಷಿಸುವ ಅಗತ್ಯವಿಲ್ಲ. ತನ್ನ ಧರ್ಮವನ್ನು ಪ್ರೀತಿಸುವುದರ ಜೊತೆಗೆ ಇನ್ನೊಬ್ಬರ ಧರ್ಮವನ್ನೂ ಗೌರವಿಸುವ ಮನಸ್ಸು ಬೆಳೆಸಿಕೊಳ್ಳಬೇಕು ಎಂದು ಕರೆ ನೀಡಿದರು.

ಹೆತ್ತ ತಾಯಿಯನ್ನು ಪ್ರೀತಿಸಲು ಸಾಧ್ಯವಾಗದವನು ಮತ್ತೊಬ್ಬರನ್ನು ಪ್ರೀತಿಸುತ್ತೇನೆ ಎನ್ನುವುದರಲ್ಲಿ ಅರ್ಥವಿಲ್ಲ. ತನ್ನ ಮನೆ, ಮಣ್ಣು ಮತ್ತು ಜನರನ್ನು ಪ್ರೀತಿಸಲು ಸಾಧ್ಯವಾಗದವನು ರಾಷ್ಟ್ರವನ್ನು ಪ್ರೀತಿಸುತ್ತೇನೆ ಎನ್ನುವುದೂ ಅರ್ಥಹೀನ. ದೇಶಭಕ್ತಿ ಎಂದರೆ ರಾಷ್ಟ್ರಕ್ಕಾಗಿ ಇತರರನ್ನು ಕೊಲ್ಲುವುದಲ್ಲ; ದೇಶಕ್ಕಾಗಿ ಬದುಕುವುದು ಎಂದರು.

ಸಾಹಿತಿ ಹುಲ್ಲೇನಹಳ್ಳಿ ರಾಜೇಶ್ವರಿ ಮಾತನಾಡಿ,ವ್ಯಕ್ತಿ ಪರಸ್ಪರರನ್ನು ಗೌರವಿಸುವುದು, ಕಾನೂನು ಪಾಲಿಸುವುದು, ಕರ್ತವ್ಯವನ್ನು ಪ್ರಾಮಾಣಿಕವಾಗಿ ನಿರ್ವಹಿಸುವುದು ಹಾಗೂ ಸಮಾಜದಲ್ಲಿ ಸೌಹಾರ್ದ ಬೆಳೆಸುವುದು ಕೂಡ ದೇಶಭಕ್ತಿಯೇ. ಸ್ವಾತಂತ್ರ್ಯ ಎಂದರೆ ಕೇವಲ ಹಕ್ಕುಗಳನ್ನು ಅನುಭವಿಸುವುದಲ್ಲ; ಅದರೊಂದಿಗೆ ಜವಾಬ್ದಾರಿಯನ್ನೂ ಅರಿತು ನಡೆಯಬೇಕು ಎಂದು ಹೇಳಿದರು.

ಯುವಕರು ಪ್ರತಿಯೊಂದು ಹೆಜ್ಜೆಯನ್ನೂ ಪ್ರಜ್ಞೆ, ಜಾಗೃತಿ ಮತ್ತು ಅತ್ಯಂತ ಎಚ್ಚರಿಕೆಯಿಂದ ಇಡಬೇಕು. ಅವರು ಇಡುವ ಹೆಜ್ಜೆಗಳು ಮುಂದಿನ ಪೀಳಿಗೆ ಅನುಸರಿಸಲು ಯೋಗ್ಯವಾಗಿರಬೇಕು. ಅಂತಹ ಹೆಜ್ಜೆಗಳ ಮೂಲಕ ದೇಶವನ್ನು ಗಟ್ಟಿಗೊಳಿಸಬೇಕು ಎಂದು ಕರೆ ನೀಡಿದರು.

ಜ್ಞಾನಧಾರೆ ಪ್ಯಾರಾ ಮೆಡಿಕಲ್ ಕಾಲೇಜಿನ ಮುಖ್ಯಸ್ಥ ಮಧುಸೂದನ್ ಮಾತನಾಡಿ,ದೇಶ ಕಟ್ಟುವುದು ಎಂದರೆ ಕೇವಲ ದೊಡ್ಡ ಕಟ್ಟಡಗಳು ಅಥವಾ ಯೋಜನೆಗಳನ್ನು ನಿರ್ಮಿಸುವುದಲ್ಲ. ನಮ್ಮನ್ನು ನಾವು ಗಟ್ಟಿಯಾಗಿ ಕಟ್ಟಿಕೊಳ್ಳುವುದೇ ದೇಶ ಕಟ್ಟುವ ಮೊದಲ ಹೆಜ್ಜೆ. ನಮ್ಮಲ್ಲಿ ಪ್ರಾಮಾಣಿಕತೆ, ಮಾನವೀಯತೆ, ಪರಸ್ಪರ ಗೌರವ ಮತ್ತು ಜವಾಬ್ದಾರಿ ಬೆಳೆದಾಗ ದೇಶ ಮತ್ತಷ್ಟು ಬಲಿಷ್ಠವಾಗುತ್ತದೆ ಎಂದು ಅಭಿಪ್ರಾಯಪಟ್ಟರು.ಕಾರ್ಯಕ್ರಮದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಗೌರವ ಕಾರ್ಯದರ್ಶಿ ಬಿ.ಆರ್ ಬೊಮ್ಮೇಗೌಡ,ಸಂಘಟನಾ ಕಾರ್ಯದರ್ಶಿ ಆರ್.ಬಿ ಶಂಕರ್,ಮಾಜಿ ಕೋಶಾಧ್ಯಕ್ಷ ಜಯರಾಂ,ಪದಾಧಿಕಾರಿಗಳಾದ ವನಜಾ ಸುರೇಶ್,ಬನುಮಾ ಗುರುದತ್ತ,ಸತೀಶ್ ಪಿಳ್ಳೇನಹಳ್ಳಿ,ರೋಟರಿ ಕ್ಲಬ್ ಆಫ್ ಸೆಂಟ್ರಲ್ ಅಧ್ಯಕ್ಷ ರೊ.ಪರಮೇಶ್ವರ,ಉಪನ್ಯಾಸಕ ಅಶೋಕ್,ರೋಟರಿ ಸದಸ್ಯರಾದ ವಿಜಯ ಕುಮಾರ್, ಪ್ರದೀಪ್,ಯೋಗೇಶ್ ಗೌಡ ಇತರರು ಉಪಸ್ಥಿತರಿದ್ದರು.



# ಬಡವರ ಆರೋಗ್ಯ ರಕ್ಷಣೆಗೆ ಉಚಿತ ಆರೋಗ್ಯ ಶಿಬಿರ: ಮಂಡ್ಯ ಶಾಸಕ ರವಿ ಗಣಿಗ

**ಮಂಡ್ಯ :** ನಗರದ ಜನರ ಆರೋಗ್ಯ ರಕ್ಷಣೆಗೆ ಆದ್ಯತೆ ನೀಡಿ ಆಯೋಜಿಸಿರುವ ಉಚಿತ ವಿಶೇಷ ಆರೋಗ್ಯ ತಪಾಸಣಾ ಶಿಬಿರದಲ್ಲಿ ಸುಮಾರು 5 ಸಾವಿರ ಜನರಿಗೆ ಉಚಿತವಾಗಿ ಆರೋಗ್ಯ ತಪಾಸಣೆ ನಡೆಸಲಾಗುತ್ತಿದ್ದು, ಅಗತ್ಯವಿರುವವರಿಗೆ ಉಚಿತ ಚಿಕಿತ್ಸೆ, ಔಷಧೋಪಚಾರ ಹಾಗೂ ಮುಂದಿನ ಚಿಕಿತ್ಸೆಗೆ ವ್ಯವಸ್ಥೆ ಕಲ್ಪಿಸಲಾಗುವುದು ಎಂದು ಶಾಸಕ ಪಿ. ರವಿಕುಮಾರ್ ತಿಳಿಸಿದರು.



ನಗರದ ಶಂಕರಪುರ ಸಂತೇಮಳ ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಆದಿಚುಂಚನಗಿರಿ ಆಸ್ಪತ್ರೆ ಮತ್ತು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬಿ.ಜಿ.ನಗರ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೆಂಗಳೂರಿನ ಕಿದ್ವಾಯಿ ಸಂಸ್ಥೆ ಹಾಗೂ ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ಸಹಯೋಗದಲ್ಲಿ ಆಯೋಜಿಸಿದ್ದ ಉಚಿತ ವಿಶೇಷ ಆರೋಗ್ಯ ತಪಾಸಣಾ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಆರೋಗ್ಯ ಶಿಬಿರವು ಕೇವಲ ತಪಾಸಣೆಗೆ ಸೀಮಿತವಾಗದೆ, ರೋಗ ಪತ್ತೆಯಾದವರಿಗೆ ಅಗತ್ಯ ಔಷಧೋಪಚಾರ, ಕಣ್ಣಿನ ತಪಾಸಣೆ, ಉಚಿತ ಕನ್ನಡಕ ವಿತರಣೆ, ಅಗತ್ಯವಿದ್ದಲ್ಲಿ ಶಸ್ತ್ರಚಿಕಿತ್ಸೆ ಹಾಗೂ ಹೆಚ್ಚಿನ ಚಿಕಿತ್ಸೆಗೆ ವ್ಯವಸ್ಥೆ ಕಲ್ಪಿಸುವ ಸಮಗ್ರ ಉದ್ದೇಶ ಹೊಂದಿದೆ. ಆರ್ಥಿಕವಾಗಿ ಸಂಕಷ್ಟದಲ್ಲಿರುವ ಬಡವರು ಚಿಕಿತ್ಸಾ ವೆಚ್ಚದ ಬಗ್ಗೆ ಆತಂಕಪಡುವ ಅಗತ್ಯವಿಲ್ಲ ಎಂದು ಹೇಳಿದರು.

ಕಣ್ಣಿನ ಸಮಸ್ಯೆ ಹೊಂದಿರುವವರಿಗೆ ಅಗತ್ಯವಿದ್ದಲ್ಲಿ ಉಚಿತ ಶಸ್ತ್ರಚಿಕಿತ್ಸೆ ನಡೆಸಿ ಕನ್ನಡಕಗಳನ್ನು ವಿತರಿಸಲಾಗುವುದು. ಗಂಭೀರ ಕಾಯಿಲೆ ಪತ್ತೆಯಾದರೂ ಬಡ ಹಾಗೂ ಆರ್ಥಿಕವಾಗಿ ಹಿಂದುಳಿದವರಿಗೆ ಅಗತ್ಯ ಚಿಕಿತ್ಸೆಯನ್ನು ಒದಗಿಸಲು ಕ್ರಮ ವಹಿಸಲಾಗುವುದು ಎಂದು ಭರವಸೆ ನೀಡಿದರು.

ಆರಂಭಿಕ ಹಂತದಲ್ಲೇ ಕ್ಯಾನ್ಸರ್ ಪತ್ತೆ ಅಗತ್ಯ

ಮಹಿಳೆಯರು ಹಾಗೂ ಪುರುಷರಲ್ಲಿ ಹೆಚ್ಚುತ್ತಿರುವ ಕ್ಯಾನ್ಸರ್ ಸೇರಿದಂತೆ ವಿವಿಧ ಗಂಭೀರ ಕಾಯಿಲೆಗಳನ್ನು ಆರಂಭಿಕ ಹಂತದಲ್ಲಿಯೇ ಪತ್ತೆಹಚ್ಚಿ ಚಿಕಿತ್ಸೆ ನೀಡುವುದು ಅತ್ಯಂತ ಅಗತ್ಯವಾಗಿದೆ. ಈ ಹಿನ್ನೆಲೆಯಲ್ಲಿ ಬೆಂಗಳೂರಿನ ಕಿದ್ವಾಯಿ ಸಂಸ್ಥೆಯ ಸಹಯೋಗದಲ್ಲಿ ಶಿಬಿರದಲ್ಲಿ ಕ್ಯಾನ್ಸರ್ ತಪಾಸಣೆ, ವೈದ್ಯಕೀಯ ಸಲಹೆ ಹಾಗೂ ಮಾರ್ಗದರ್ಶನ ನೀಡಲಾಗುತ್ತಿದೆ ಎಂದರು.

ಇತ್ತೀಚೆಗೆ ಕೆರೆಗೋಡು ಗ್ರಾಮದಲ್ಲಿ ಆಯೋಜಿಸಿದ್ದ ಆರೋಗ್ಯ ಶಿಬಿರದಲ್ಲಿ ಸುಮಾರು 4 ಸಾವಿರ ಜನರಿಗೆ ಉಚಿತ ಚಿಕಿತ್ಸೆ ನೀಡಲಾಗಿದ್ದು, 1,200ಕ್ಕೂ ಹೆಚ್ಚು ಮಂದಿಗೆ ಉಚಿತ ಕನ್ನಡಕಗಳನ್ನು ವಿತರಿಸಲಾಗಿದೆ. ಹೆಚ್ಚಿನ ಚಿಕಿತ್ಸೆ ಹಾಗೂ ಶಸ್ತ್ರಚಿಕಿತ್ಸೆಯ ಅಗತ್ಯವಿದ್ದ ಸುಮಾರು 100 ಮಂದಿಯನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗಿದೆ. ಲಕ್ಷಾಂತರ ರೂಪಾಯಿ ವೆಚ್ಚವಾಗುವ ಚಿಕಿತ್ಸೆಯನ್ನು ಉಚಿತವಾಗಿ ಒದಗಿಸಲಾಗುತ್ತಿದೆ ಎಂದು ತಿಳಿಸಿದರು.

**ಆರೋಗ್ಯ ಕ್ಷೇತ್ರಕ್ಕೆ ಸರ್ಕಾರದ ಆದ್ಯತೆ:** ಸರ್ಕಾರ ವಿವಿಧ ಅಭಿವೃದ್ಧಿ ಕಾರ್ಯಗಳ ಜೊತೆಗೆ ಆರೋಗ್ಯ ಕ್ಷೇತ್ರಕ್ಕೂ ಹೆಚ್ಚಿನ ಆದ್ಯತೆ ನೀಡುತ್ತಿದೆ. ಕೋವಿಡ್ ನಂತರ ಜನರಲ್ಲಿ ವಿವಿಧ ಆರೋಗ್ಯ ಸಮಸ್ಯೆಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಪ್ರತಿಯೊಬ್ಬರೂ ತಮ್ಮ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕು. ಕುಟುಂಬದ ಆಧಾರಸ್ತಂಭವಾಗಿರುವ ಪ್ರತಿಯೊಬ್ಬರೂ ಆರೋಗ್ಯವಂತರಾಗಿರುವುದು ಅತ್ಯಂತ ಮುಖ್ಯ ಎಂದು ಹೇಳಿದರು.

ನಗರದಲ್ಲಿ ಮಹಿಳಾ ಆಸ್ಪತ್ರೆ, ಮಕ್ಕಳ ಆಸ್ಪತ್ರೆ ಸೇರಿದಂತೆ ವಿವಿಧ ಆರೋಗ್ಯ ಮೂಲಸೌಕರ್ಯಗಳ ಅಭಿವೃದ್ಧಿ ಕಾರ್ಯಗಳು ಪ್ರಗತಿಯಲ್ಲಿವೆ. ಮುಂದಿನ ದಿನಗಳಲ್ಲಿ ಹೊಸ ಆಸ್ಪತ್ರೆಗಳನ್ನು ಸಾರ್ವಜನಿಕ ಸೇವೆಗೆ ಸಮರ್ಪಿಸುವ ಉದ್ದೇಶವಿದೆ. ಜಿಲ್ಲಾ ಆಸ್ಪತ್ರೆಯ ಅಭಿವೃದ್ಧಿಗೂ ಕಳೆದ ಮೂರು ವರ್ಷಗಳಲ್ಲಿ ಸುಮಾರು ?60ರಿಂದ ?70 ಕೋಟಿ ಅನುದಾನ ಬಳಕೆ ಮಾಡಲಾಗಿದ್ದು, ಆಸ್ಪತ್ರೆಯ ಸೌಲಭ್ಯಗಳನ್ನು ಮತ್ತಷ್ಟು ವಿಸ್ತರಿಸಲಾಗುತ್ತಿದೆ ಎಂದರು.

ಮಂಡ್ಯ ನಗರದಲ್ಲಿಯೇ ಕ್ಯಾನ್ಸರ್ ಚಿಕಿತ್ಸಾ ಸೌಲಭ್ಯ ಕಲ್ಪಿಸುವ ಉದ್ದೇಶದಿಂದ ಕ್ಯಾನ್ಸರ್ ಆಸ್ಪತ್ರೆ ಆರಂಭಿಸುವ ಕುರಿತು ಕ್ರಮ ಕೈಗೊಳ್ಳಲಾಗುತ್ತಿದೆ. ಹೃದಯಾಘಾತದಂತಹ ತುರ್ತು ಸಂದರ್ಭಗಳಲ್ಲಿ ಮೈಸೂರು ಅಥವಾ ಬೆಂಗಳೂರಿಗೆ ಕರೆದೊಯ್ಯುವ ವೇಳೆ ರೋಗಿಗಳು ಪ್ರಾಣ ಕಳೆದುಕೊಳ್ಳುವ ಸಾಧ್ಯತೆ ಇರುವುದರಿಂದ ಮಂಡ್ಯದಲ್ಲಿಯೇ ಜಯದೇವ ಹೃದಯ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ಶಾಖೆ ಆರಂಭಿಸಿ ಪ್ರಾಥಮಿಕ ಹೃದಯ ಚಿಕಿತ್ಸಾ ಸೌಲಭ್ಯ ಕಲ್ಪಿಸುವ ಕುರಿತು ಚರ್ಚೆ ನಡೆಸಲಾಗುತ್ತಿದೆ ಎಂದು ತಿಳಿಸಿದರು.

ಆದಿಚುಂಚನಗಿರಿ ಮಠದ ಶ್ರೀ ಸತ್ ಕೀರ್ತಿನಾಥ ಸ್ವಾಮೀಜಿಗಳು ಮಾತನಾಡಿ, ಗ್ರಾಮೀಣ ಭಾಗದ ಜನರಿಗೆ ಗುಣಮಟ್ಟದ ಆರೋಗ್ಯ ಸೇವೆ ಒದಗಿಸುವ ಉದ್ದೇಶದಿಂದ ಸ್ಥಾಪನೆಯಾದ ಆದಿಚುಂಚನಗಿರಿ ಆಸ್ಪತ್ರೆ ಇಂದು ಬೃಹತ್ ಆರೋಗ್ಯ ಮತ್ತು ಸಂಶೋಧನಾ ಕೇಂದ್ರವಾಗಿ ಬೆಳೆದಿದೆ ಎಂದರು.

# ಕಾಯಕನಿಷ್ಠ ದಂಪತಿಗಳು... ಆಯ್ದಕ್ಕಿ ಲಕ್ಕಮ್ಮ ಮತ್ತು ಮಾರಯ್ಯ



| ವೀಣಾ ಹೇಮಂತ್‌ಗೌಡ ಪಾಟೀಲ್

ಈ ದಂಪತಿಗಳು ಪರಮ ಕಾಯಕನಿಷ್ಠ ದಾಸೋಹ ಜೀವಿಗಳು. ಕಾಯಕದಲ್ಲಿಯೇ ತಮ್ಮ ತನು ಮನಗಳನ್ನು ತೊಡಗಿಸಿಕೊಂಡವರು. ಇವರ ಕಾಯಕ ನಿಷ್ಠೆಯನ್ನು ಜಗಕ್ಕೆ ತೋರಿಸಲು ಒಮ್ಮೆ ಸಾಕ್ಷಾತ ಶಿವನು ಪತ್ನಿ ಸಮೇತನಾಗಿ ಭೂಲೋಕಕ್ಕೆ ಬಂದನು. ಅದು ಅತ್ಯಂತ ಚಳಿಗಾಲದ ದಿನಗಳು. ವಯಸ್ಸಾದ ಭಿಕ್ಷುಗಳ ವೇಷದಲ್ಲಿ ಬಂದ ಶಿವ ಪಾರ್ವತಿಯರು ಈ ದಂಪತಿಗಳ ಮನೆ ಮುಂದೆ ಬಂದು ನಿಂತರು. ಕಡುಚಳಿಗೆ ನಡುಗುತ್ತಿದ್ದ ವೃದ್ಧ ದಂಪತಿಗಳನ್ನು ನೋಡಿದ ಈ ದಂಪತಿಗಳು ಅವರಿಗೆ ಆರೋಗಣೆಗೆ ತಯಾರು ಮಾಡಿ ಉಣಬಡಿಸಿದರು. ಉಂಡು ಸಂತುಷ್ಟರಾದ ವೃದ್ಧ ದಂಪತಿಗಳು ಇನ್ನೇನು ತೆರಳಬೇಕೆನ್ನುವಾಗ ಹಾಕಿಕೊಳ್ಳಲು ಅವರುಟ್ಟ ಬಟ್ಟೆಯನ್ನೇ ದಾನವಾಗಿ ಕೇಳಿದರು. ಅವರ ಬಳಿ ಇದ್ದದ್ದು ಒಂದು ಜೊತೆ ಬಟ್ಟೆಗಳು ಮಾತ್ರ. ಆದರೂ ಅಳುಕದೆ ಒಂದು ತುಂಡು ವಸ್ತ್ರವನ್ನು ತಮ್ಮಮೈಗೆ ಸುತ್ತಿಕೊಂಡು ತಾವುಟ್ಟ ಬಟ್ಟೆಗಳನ್ನು ಕಳಚಿ ವೃದ್ಧ ದಂಪತಿಗಳಿಗೆ ಕೊಟ್ಟು ಕಳುಹಿಸಿದರು ಈ ಶರಣ ದಂಪತಿಗಳು.... ಅವರೇ ಕಾಯಕನಿಷ್ಠ ದಂಪತಿಗಳಾದ ಆಯ್ದಕ್ಕಿ ಲಕ್ಕಮ್ಮ ಮತ್ತು ಆಯ್ದಕ್ಕಿ ಮಾರಯ್ಯ.

ಮೂಲತಃ ರಾಯಚೂರು ಜಿಲ್ಲೆಯ ಅಮರೇಶ್ವರದಲ್ಲಿ ವಾಸವಾಗಿದ್ದ ಆಯ್ದಕ್ಕಿ ಲಕ್ಕಮ್ಮ ಮತ್ತು ಮಾರಯ್ಯ ದಂಪತಿಗಳು ದಲಿತ ವರ್ಗಕ್ಕೆ ಸೇರಿದವರು. ಬಸವಣ್ಣನವರ ಪ್ರಭಾವಕ್ಕೆ ಒಳಗಾಗಿ ಕಲ್ಯಾಣಕ್ಕೆ ವಲಸೆ ಹೋದ ಈ ದಂಪತಿಗಳು ಅಲ್ಲಿ ಮಹಾ ಮನೆಯ ಉಗ್ರಾಣದ ಹೊರ ಭಾಗದಲ್ಲಿ ಹಸನು ಮಾಡುವಾಗ, ಚಪ್ಪರಿಸಿ ಸ್ವಚ್ಛ ಮಾಡುವಾಗ ಚೆಲ್ಲಿದ ಧಾನ್ಯಗಳನ್ನು ಆಯುವುದು ಈತನ ಕಾಯಕವಾಗಿತ್ತು. ಇದರ ಜೊತೆ ಜೊತೆಗೆ ಊರಿನ ಪ್ರತಿ ಮನೆಯ ಮುಂದೆ ಚೆಲ್ಲಲ್ಪಟ್ಟ ಅಕ್ಕಿಯನ್ನು ಪ್ರತಿದಿನವೂ ಅಂದಂದಿನ ಅವಶ್ಯಕತೆಗೆ ಬೇಕಾದಷ್ಟೇ ಆಯ್ದುಕೊಂಡು ಹೋಗುತ್ತಿದ್ದ ಮಾರಯ್ಯನವರು ಅಪರಿಗ್ರಹಕ್ಕೆ ಇನ್ನೊಂದು ನಿದರ್ಶನವಾಗಿದ್ದರು.

ಮಾರಯ್ಯನವರು ಮತ್ತು ಅವರ ಪತ್ನಿ ಲಕ್ಕಮ್ಮ ಬಸವಣ್ಣನವರ ಅನುಯಾಯಿಗಳಾಗಿದ್ದು ಮಹಾಮನೆಯ ಶರಣಗಣದ ಅನುಭಾವಿಗಳಲ್ಲಿ ಒಬ್ಬರಾಗಿದ್ದರು. ಅವರಿಬ್ಬರು ವಚನಗಳನ್ನು ರಚಿಸಿದ್ದು ಮಾರಯ್ಯನವರ ವಚನಗಳ ಅಂಕಿತ ಅಮರೇಶ್ವರ ಲಿಂಗ ಎಂದಾದರೆ ಲಕ್ಕಮ್ಮನ ವಚನಗಳ ಅಂಕಿತ ಮಾರಯ್ಯಪ್ರಿಯ ಅಮರೇಶ್ವರ ಲಿಂಗ ಎಂದಾಗಿತ್ತು.

ಪ್ರತಿದಿನ ಮಾರಯ್ಯನವರ ಕಾಯಕವನ್ನು ನೋಡುತ್ತಿದ್ದ ಬಸವಣ್ಣನವರು,ತಮ್ಮ ಮನೆಯ ಮುಂದೆ ಮಾರಯ್ಯನವರು ಆಯ್ದುಕೊಳ್ಳಲು ಬರುವ ದಿನ ಮಾರಯ್ಯನವರಿಗೆ ಅನುಕೂಲವಾಗಲೆಂದು ಮನೆಯ ಅಂಗಳದಲ್ಲಿ ತುಸು ಹೆಚ್ಚೇ ಅಕ್ಕಿಯನ್ನು ಚಲ್ಲಿಸಿದರು. ಅಕ್ಕಿಯನ್ನು ಆಯಲು ಬಂದ ಮಾರಯ್ಯ ಚೆಲ್ಲಿದ್ದ ಹೆಚ್ಚು ಅಕ್ಕಿಯನ್ನು ಆಯ್ದುಕೊಂಡರು. ಮನೆಗೆ ತಂದು ಲಕ್ಕಮ್ಮನವರ ಕೈಯಲ್ಲಿ ಇಟ್ಟಾಗ ಲಕ್ಕಮ್ಮನವರು ಎಂದಿಗಿಂತ ತುಸು ಹೆಚ್ಚಾಗಿದ್ದ ಅಕ್ಕಿಯನ್ನು ನೋಡಿ ಇದೇನು ಇಷ್ಟೊಂದು ಅಕ್ಕಿ? ಎಂದು ಪ್ರಶ್ನಿಸಿದಳಲ್ಲದೇ ಉಳಿದ ಅಕ್ಕಿಯನ್ನು ಮಹಾಮನೆಗೆ ಮರಳಿಸಲು ಕೇಳಿಕೊಂಡಳು. ಅದಕ್ಕೆ ಉತ್ತರವಾಗಿ ಮಾರಯ್ಯ ಹಾಗೆ ಮರಳಿಸಲು ಹೋದರೆ ಬಸವಣ್ಣನವರು ತಪ್ಪು ತಿಳಿದುಕೊಳ್ಳುವುದಿಲ್ಲವೇ? ಇರಲಿ ಬಿಡು ಈಸಕ್ಕಿ ಏನು ಪಾಲು ಬೇಡೀತು ಎಂದನು.

ಅದಕ್ಕೆ ಉತ್ತರವಾಗಿ ಲಕ್ಕಮ್ಮನು

ಆಸೆ ಎಂಬುದು ಅರಸಂಗಲ್ಲದೆ ಶಿವ ಭಕ್ತರಿಗುಂಟೆ ಅಯ್ಯಾ? ರೋಷವೆಂಬುದು ಯಮದೂತರಿಗಲ್ಲದೆ ಅಜಾತರಿಗುಂಟೆ ಅಯ್ಯಾ? ಈಸಕ್ಕಿಯಾಸೆ ನಿಮಗೇಕೆ? ಈಶ್ವರನೊಪ್ಪ ಮಾರಯ್ಯಪ್ರಿಯ ಅಮರೇಶ್ವರ ಲಿಂಗಕ್ಕೆ ದೂರ ಮಾರಯ್ಯ

ಉಪೇಕ್ಷಿತ ವಚನಕಾರರು

ಎಂದು ಹೇಳಿದಳು. ಜೊತೆಗೆ ಈ ರೀತಿ ಆಸೆ ಪಡುವುದರಿಂದ ಅರಿಷಡ್ವರ್ಗಗಳಿಗೆ ನೀವು ದಾಸರಾಗುವಿರಿ ಎಂದು ಎಚ್ಚರಿಸಿದಳು. ಹಾಗಾದರೆ ನಾನು ಆಸೆ ಪಡುತ್ತಿದ್ದೇನೆಯೇ ... ಅದು ಹೇಗೆಂದು ವಿವರಿಸು ಎಂದು ಮಾರಯ್ಯನವರು ಕೇಳಿದಾಗ ಲಕ್ಕಮ್ಮ ತಾಯಿ ಹೀಗೆ ಹೇಳುತ್ತಾಳೆ... ತುಸು ಹೆಚ್ಚು ಇರಲಿ ಎಂದು ನೀವು ಆಶಿಸುವುದು ಕಾಮ ವಾದರೆ, ಅದು ಸಿಗದೇ ಹೋದಾಗ ನಿಮಗೆ ಬರುವ ಸಿಟ್ಟು ಕ್ರೋಧ ಅನಿಸುತ್ತದೆ ಇನ್ನೂ ಹೆಚ್ಚು ಬೇಕೆಂಬ ಆಸೆ ಲೋಭ ಎನಿಸಿದರೆ ಹೀಗೆಯೇ ಹೆಚ್ಚು ಉಳಿಯಲಿ ಎಂಬುದು ಮೋಹ ಎನಿಸುತ್ತದೆ. ಹಾಗೆ ನಮ್ಮಲ್ಲಿ ಹೆಚ್ಚಿನ ವಸ್ತುಗಳ ಸಂಗ್ರಹವಾದಾಗ ನಮ್ಮಲ್ಲಿ ಸಹಜವಾಗಿಯೇ ಅಹಂ ಎಂಬ ಮದ ಬರುತ್ತದೆ. ನಮಗಿಂತ ತುಸು ಹೆಚ್ಚು ಬೇರೆಯವರ ಬಳಿ ಇದ್ದಾಗ ಸಹಜವಾಗಿಯೇ ಮಾತ್ಸರ್ಯ ಉಂಟಾಗುತ್ತದೆ. ಹೀಗೆ ಆಸೆ ಎಂಬ ರಕ್ತಬೀಜಾಸುರ ಸಂತತಿಯು ಅರಿಷಡ್ವರ್ಗಗಳ ಉದಯಕ್ಕೆ ಕಾರಣವಾಗುತ್ತದೆ ಎಂದು ಸಾಧ್ವಿ ಲಕ್ಕಮ್ಮ ಹೇಳಿದಾಗ ಆಕೆ ತನ್ನ ಪತ್ನಿಯಂತೆ ತೋರದೆ ಅಜ್ಞಾನವನ್ನು ತೊಡೆದು ಹಾಕುವ ಗುರುವಾಗಿ ಕಂಡಳು ಮಾರಯ್ಯನವರಿಗೆ. ಆಕೆಯ ಜ್ಞಾನ ಮತ್ತು ವಿವೇಕದ ನುಡಿಗಳನ್ನು ಕಂಡು ಪರಮಾನಂದವಾಗಿ ಅಂತೆಯೇ ಮುಂದೇನು ಮಾಡಬೇಕು ಎಂದು ಪ್ರಶ್ನಿಸಿದ ಮಾರಯ್ಯನವರಿಗೆ ಲಕ್ಕಮ್ಮ ಅಕ್ಕಿಯನ್ನು ಮರಳಿಸಿ ಎಂದು ಹೇಳಿದಳಲ್ಲದೆ, ಆಸೆಪಟ್ಟುದಕ್ಕೆ ಪ್ರಾಯಶ್ಚಿತ್ತವಾಗಿ ಬಸವಾದಿ ಪ್ರಮಥರೆಲ್ಲರನ್ನು ದಾಸೋಹಕ್ಕೆ ಕರೆಯಬೇಕೆಂದು ಆಗ್ರಹಿಸಿದಳು. ನಾವು ಬಡವರು ಅವರೆಲ್ಲ ನಾವು ಕರೆದರೆ ಬರುವರೆ ಎಂಬ ಮಾರಯ್ಯನ ಮಾತಿಗೆ... ಶರಣರೆಲ್ಲರೂ ನಮಗೆ ಬಂಧುಗಳು

"ಅಂಜದಿರು ಎನ್ನಾಳ್ದ ,ಮನಶುದ್ಧವಿಲ್ಲದವಂಗೆ ದ್ರವ್ಯದ ಬಡತನವಲ್ಲದೆ ಚಿತ್ತಶುದ್ಧದಲ್ಲಿ ಕಾಯಕವ ಮಾಡುವ ಸದ್ಭಕ್ತ0ಗೆ ಎತ್ತ ನೋಡಿದತ್ತ ಲಕ್ಷ್ಮಿ ತಾನಾಗಿಪ್ಪಳು ಮಾರಯ್ಯಪ್ರಿಯ ಅಮರೇಶ್ವರ ಲಿಂಗದ ಸೇವೆಯುಳ್ಳನ್ನಕ್ಕ

ಎಂದು ಧೈರ್ಯ ಹೇಳಿದಳು. ಆಕೆಯ ಆಶಯದಂತೆ ಮಾರಯ್ಯನು ಎಲ್ಲಾ ಶರಣವನ್ನು ದಾಸೋಹಕ್ಕೆ ಆಮಂತ್ರಿಸಿದನು. ಅಂದು ಆಕೆ ಮಾಡಿದ ಅಡುಗೆಯನ್ನು ಸಮಸ್ತ ಶರಣರು ಹೊಟ್ಟೆ ತುಂಬ ಉಂಡರು. ಒಂದು ಲೆಕ್ಕದ ಪ್ರಕಾರ ಆಕೆ ಆ ದಿನ ಬೊಗಸೆ ಅಕ್ಕಿಯಲ್ಲಿ ಒಂದು ಲಕ್ಷ ತೊಂಬತ್ತಾರು ಸಾವಿರ ಗಣಗಳಿಗೆ ಉಣಬಡಿಸಿದಳು ಎಂದು ಹೇಳಲಾಗುತ್ತದೆ. ಭಕ್ತರ ಭಕ್ತಿಗೆ ಅವರ ಅಡುಗೆಯ ಮನೆ ಅಕ್ಷಯವಾಗದೇ ಇದ್ದೀತೆ??

ಅವರ ಮನೆಯ ಅಡುಗೆಯ ರುಚಿಯನ್ನು ಕಂಡು ಬಸವಣ್ಣನವರು

**"ಮನೆ ನೋಡಾ ಬಡವರು ಮನ ನೋಡಾ ಸಂಪನ್ನರು**
**ಧನ ನೋಡಾ ಬಡವರು ಘನಮನ ಸಂಪನ್ನರು**
**ಕೂಡಲಸಂಗನ ಶರಣರು ಕರುಳಿಲ್ಲದ ಕಲಿಗಳು**
**ಆರಿಗೆ ಉಪಮಿಸಬಹುದು"**
**ಎಂದು ಕೊಂಡಾಡಿದರು.**

ಮತ್ತೊಮ್ಮೆ ಶರಣರೆಲ್ಲ ಅನುಭವ ಮಂಟಪದಲ್ಲಿ ಸೇರಿದಾಗ ಮಾರಯ್ಯನವರು ಕಾಯಕದ ಬಗ್ಗೆ ಶಾಸನವಾಗಬಲ್ಲಂತಹ ವಚನವೊಂದನ್ನು ಪ್ರಭುದೇವರ ಮುಂದಿರಿಸಿದರು

"ಕಾಯಕದಲ್ಲಿ ನಿರತನಾದಡೆ ಗುರುದರ್ಶನವಾದರೂ ಮರೆಯಬೇಕು, ಲಿಂಗ ಪೂಜೆಯಾದರೂ ಮರೆಯಬೇಕು, ಜಂಗಮ ಮುಂದಿದ್ದರೂ ಹಂಗು ಹರಿಯಬೇಕು, ಕಾಯಕವೇ ಕೈಲಾಸವಾದ ಕಾರಣ ಅಮರೇಶ್ವರ ಲಿಂಗವಾಯಿತ್ತಾದರೂ ಕಾಯಕದೊಳಗು".





ಕಾಯಕಕ್ಕೆ ಮಾರಯ್ಯನವರು ಪಟ್ಟ ಕಟ್ಟಿದ ರೀತಿಯನ್ನು ಕಂಡು ಅವರನ್ನು ಮತ್ತೆ ಮತ್ತೆ ಪ್ರಶ್ನಿಸಿ ಉತ್ತರವನ್ನು ಪಡೆದರು ಅಲ್ಲಮ ಪ್ರಭುದೇವರು.

ಕಾಯಕ ಕೇವಲ ಕಾಯಕವಾಗಿ ಉಳಿಯಬಾರದು ಮಾಟ ಮಾಟಕ್ಕೆ ನಿಲ್ಲಬಾರದು ಮಾಟದಿಂದಲೇ ಬೇರೊಂದ ನರಿಯಬೇಕು ಅಂತೆಯೇ ಕಾಯಕ ಅರಿವಿನತ್ತ ಕರೆದೊಯ್ಯಬೇಕು. ಆ ಅರಿವು ನೆಮ್ಮದಿಯನ್ನು ಒಡಗೂಡಿ ಬಯಲ ಭ್ರಮೆಯನ್ನು ಕಳೆಯಬೇಕು ಎಂದು ತಿಳಿ ಹೇಳಿದರು.

ಮಾಟ, ಅರಿವು, ನೆಮ್ಮಗೆ ಎಂಬ ಮೂರು ಮಾತುಗಳನ್ನು ಪದೇ ಪದೇ ಹೇಳಿಕೊಳ್ಳುತ್ತಾ ಅದರ ಅರ್ಥವನ್ನು ಅರಿತು ಅದರಂತೆ ನಡೆಯಬೇಕು ಎಂದು ಮನದ ತಿಮಿರವನ್ನು ಕಳೆದುಕೊಳ್ಳುತ್ತಿದ್ದ ಮಾರಯ್ಯನವರನ್ನು ಪತ್ನಿ

ಕಾಯಕ ನಿಂದಿತ್ತು ಏಳಯ್ಯ ಎನ್ನಾಳ್ದನೆ, ಭಾವ ಶುದ್ಧವಾಗಿ ಮಹಾಶರಣರ ತಿಪ್ಪೆಯ ತಪ್ಪಲ ಅಕ್ಕಿಯ ತಂದು ನಿಶ್ಚಯಿಸಿ ಮಾಡಬೇಕು ಮಾರಯ್ಯಪ್ರಿಯ ಅಮರೇಶ್ವರ ಲಿಂಗಕ್ಕೆ ಬೇಗ ಹೋಗಿ ಮಾರಯ್ಯಾ ಎಂದು ಎಚ್ಚರಿಸಿದಳು.

ಹೀಗೆ ಸತಿಪತಿಗಳೊಂದಾದ ಭಕ್ತಿಯನ್ನು ಹೊಂದಿದ ಮಾರಯ್ಯ ಮತ್ತು ಲಕ್ಕಮ್ಮ ದಂಪತಿಗಳು ಒಬ್ಬರಿಗೊಬ್ಬರು ಪೂರಕವಾಗಿ ಬದುಕಿದರು. ಇಂತಹ ಶರಣ ದಂಪತಿಗಳು ತೋರಿದ ಬೆಳಕಿನಲ್ಲಿ ನಾವು ನಡೆಯೋಣ ಎಂಬ ಸಂಕಲ್ಪವನ್ನು ಮಾಡುತ್ತಾ.

---

# ದಾಂಪತ್ಯದ ಅತಿ ದೊಡ್ಡ ಶಕ್ತಿ: ಜೀವನ ಸಂಗಾತಿಯಲ್ಲಿ ಬೆಸ್ಟ್ ಫ್ರೆಂಡ್ ಹುಡುಕುವುದು

| ಬೃಂದಭಾಸ್ಕರ್.

ಮದುವೆ ಎಂದರೆ ಕೇವಲ ಇಬ್ಬರು ವ್ಯಕ್ತಿಗಳು ಒಂದೇ ಸೂರಿನಡಿ ಬದುಕುವುದಲ್ಲ. ಎರಡು ಮನಸ್ಸುಗಳು, ಎರಡು ವಿಭಿನ್ನ ಸ್ವಭಾವಗಳು, ಎರಡು ಕನಸುಗಳು ಮತ್ತು ಎರಡು ಬದುಕಿನ ಪಯಣಗಳು ಒಂದಾಗುವ ಸುಂದರ ಬಂಧ. ಈ ಪಯಣ ಕೇವಲ ಜವಾಬ್ದಾರಿ, ಕರ್ತವ್ಯ, ಕುಟುಂಬದ ಆಚಾರ-ವಿಚಾರಗಳಿಗೆ ಸೀಮಿತವಾದರೆ, ಕಾಲ ಕಳೆದಂತೆ ಜೊತೆಯ ಬದುಕೂ ಯಾಂತ್ರಿಕವಾಗಿಬಿಡಬಹುದು.



ದಾಂಪತ್ಯ ಜೀವನ ನೂರು ಕಾಲ ಹಸನಾಗಿರಬೇಕಾದರೆ ಗಂಡ-ಹೆಂಡತಿಯ ನಡುವಿನ ಪ್ರೀತಿ ಮತ್ತು ನಂಬಿಕೆಯ ಜೊತೆಗೆ ಸ್ನೇಹವೂ ಇರಬೇಕು. ಜೀವನ ಸಂಗಾತಿಯನ್ನೇ ಒಬ್ಬ ಆತ್ಮೀಯ ಗೆಳೆಯ ಅಥವಾ ಗೆಳತಿಯಾಗಿ ಕಾಣಲು ಸಾಧ್ಯವಾದಾಗ, ಜೊತೆಯ ಬದುಕಿನ ಸೌಂದರ್ಯ ಮತ್ತಷ್ಟು ಗಾಢವಾಗುತ್ತದೆ.



ಒಬ್ಬ ಆಪ್ತ ಸ್ನೇಹಿತನ ಮುಂದೆ ನಾವು ಯಾವುದೇ ಮುಖವಾಡವಿಲ್ಲದೆ ಮನಸ್ಸಿನ ಮಾತುಗಳನ್ನು ಹೇಳಿಕೊಳ್ಳುತ್ತೇವೆ. ಅದೇ ಮುಕ್ತತೆ ಗಂಡ-ಹೆಂಡತಿಯ ನಡುವೆಯೂ ಇರಬೇಕು. ಕಚೇರಿಯ ಒತ್ತಡವಾಗಲಿ, ಸಣ್ಣ ಆತಂಕವಾಗಲಿ, ಮನಸ್ಸಿನ ನೋವಾಗಲಿ, ಯಾವುದಾದರೂ ಆಸೆಯಾಗಲಿ?ಎಲ್ಲವನ್ನೂ ಹಿಂಜರಿಕೆಯಿಲ್ಲದೆ ಸಂಗಾತಿಯೊಂದಿಗೆ ಹಂಚಿಕೊಳ್ಳಲು ಸಾಧ್ಯವಾಗಬೇಕು. ?ನಾನು ಹೇಳಿದ ಮಾತನ್ನು ನನ್ನ ಸಂಗಾತಿ ತಪ್ಪಾಗಿ ಅರ್ಥಮಾಡಿಕೊಳ್ಳುವುದಿಲ್ಲ? ಎಂಬ ನಂಬಿಕೆಯೇ ಆತ್ಮೀಯತೆಯ ಮೊದಲ ಹೆಜ್ಜೆ.

ಬದುಕಿನಲ್ಲಿ ನಗುವಿಗೂ ಬಹಳ ದೊಡ್ಡ ಸ್ಥಾನವಿದೆ. ಒಟ್ಟಿಗೆ ಕುಳಿತು ಹರಟೆ ಹೊಡೆಯುವುದು, ಹಳೆಯ ನೆನಪುಗಳನ್ನು ಮೆಲುಕು ಹಾಕಿ ನಗುವುದು, ಒಬ್ಬರನ್ನೊಬ್ಬರು ಸಣ್ಣದಾಗಿ ಕಾಲೆಳೆಯುವುದು?ಇಂತಹ ಕ್ಷಣಗಳಿಗೆ ಯಾವುದೇ ದೊಡ್ಡ ಕಾರಣ ಬೇಕಾಗಿಲ್ಲ. ಆದರೆ ಅವು ಮನಸ್ಸಿನಲ್ಲಿ ಉಳಿಸುವ ಸಂತೋಷ ಮಾತ್ರ ಅಮೂಲ್ಯ. ಜೀವನದ ಕಷ್ಟಗಳ ನಡುವೆಯೂ ಒಟ್ಟಿಗೆ ನಗಬಲ್ಲ ದಂಪತಿಗಳು ಕಷ್ಟಗಳನ್ನು ಎದುರಿಸುವ ಶಕ್ತಿಯನ್ನೂ ಪಡೆದುಕೊಳ್ಳುತ್ತಾರೆ.

ಸಂಗಾತಿಯ ತಪ್ಪುಗಳನ್ನು ಎತ್ತಿ ತೋರಿಸುವುದಕ್ಕಿಂತ ಮೊದಲು ಆ ತಪ್ಪಿನ ಹಿಂದಿರುವ ಮನಸ್ಥಿತಿಯನ್ನು ಅರ್ಥಮಾಡಿಕೊಳ್ಳುವ ಗುಣವೂ ಬಹಳ ಮುಖ್ಯ. ?ನೀನು ಹೀಗೆ ಮಾಡಬಾರದಿತ್ತು? ಎನ್ನುವುದಕ್ಕಿಂತ ?ಏನಾಯಿತು, ಹೇಳು? ನಾನು ಕೇಳುತ್ತೇನೆ? ಎನ್ನುವ ಮಾತು ಹೆಚ್ಚು ಆತ್ಮೀಯತೆಯನ್ನು ನೀಡುತ್ತದೆ. ಸಂಗಾತಿಯ ಕನಸುಗಳು, ಆಸಕ್ತಿಗಳು ಮತ್ತು ವೈಯಕ್ತಿಕ ಬೆಳವಣಿಗೆಗೆ ಗೌರವ ನೀಡುವುದೂ ನಿಜವಾದ ಸ್ನೇಹದ ಒಂದು ಸುಂದರ ರೂಪ.

ಸ್ನೇಹ ಎಂದರೆ ಎಲ್ಲ ವಿಷಯಗಳಲ್ಲೂ ಒಬ್ಬರ ಮಾತಿಗೆ ಮತ್ತೊಬ್ಬರು ಒಪ್ಪಿಕೊಳ್ಳುವುದಲ್ಲ. ಭಿನ್ನಾಭಿಪ್ರಾಯಗಳಿದ್ದರೂ ಪರಸ್ಪರ ಗೌರವವನ್ನು ಕಳೆದುಕೊಳ್ಳದಿರುವುದು. ಒಂದೇ ವಿಷಯವನ್ನು ಇಬ್ಬರೂ ಬೇರೆ ರೀತಿಯಲ್ಲಿ ನೋಡಿದರೂ, ?ನನ್ನ ಮಾತೇ ಸರಿ? ಎಂಬ ಹಠಕ್ಕಿಂತ ?ನಿನ್ನ ಮಾತನ್ನೂ ನಾನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತೇನೆ? ಎನ್ನುವ ಮನೋಭಾವವೇ ಜೊತೆಯ ಬದುಕನ್ನು ಗಟ್ಟಿಗೊಳಿಸುತ್ತದೆ.

ಯಾವ ದಾಂಪತ್ಯದಲ್ಲೂ ಸಣ್ಣಪುಟ್ಟ ಮುನಿಸು, ಕೋಪ, ಭಿನ್ನಾಭಿಪ್ರಾಯಗಳು ಬಾರದಿರಬೇಕು ಎನ್ನುವುದು ಸಾಧ್ಯವಿಲ್ಲ. ಆದರೆ ಆತ್ಮೀಯ ಒಡನಾಟವಿರುವ ಕಡೆ ಜಗಳಕ್ಕಿಂತ ಸಂಬಂಧವೇ ಮುಖ್ಯವಾಗುತ್ತದೆ. ?ಯಾರು ಗೆದ್ದರು?? ಎನ್ನುವುದಕ್ಕಿಂತ ?ನಾವು ಮತ್ತೆ ಯಾವಾಗ ನಗುತ್ತಾ ಮಾತನಾಡಬೇಕು?? ಎಂಬ ಪ್ರಶ್ನೆ ಮುಖ್ಯವಾಗುತ್ತದೆ. ಅಹಂಕಾರವನ್ನು ಬದಿಗಿಟ್ಟು ಮೊದಲು ಮಾತನಾಡುವ ಧೈರ್ಯವೂ ಇದೇ ಸ್ನೇಹದಿಂದ ಬರುತ್ತದೆ.

ಜೀವನದ ವರ್ಷಗಳು ಕಳೆದಂತೆ ಎಲ್ಲವೂ ಬದಲಾಗುತ್ತಾ ಹೋಗುತ್ತದೆ. ಯೌವನದ ಚೈತನ್ಯ ಬದಲಾಗಬಹುದು. ಜವಾಬ್ದಾರಿಗಳು ಹೆಚ್ಚಾಗಬಹುದು. ಮಕ್ಕಳು ಬೆಳೆದು ತಮ್ಮದೇ ಬದುಕಿನತ್ತ ಸಾಗಬಹುದು. ಆದರೆ ವರ್ಷಗಳ ಪಯಣದಲ್ಲಿ ಒಟ್ಟಿಗೆ ನಕ್ಕ, ಕಷ್ಟಪಟ್ಟ, ಕನಸು ಕಂಡ, ಪರಸ್ಪರ ಆಸರೆಯಾದ ನೆನಪುಗಳು ಮಾತ್ರ ಮನಸ್ಸಿನ ನಂಟನ್ನು ಇನ್ನಷ್ಟು ಗಟ್ಟಿಗೊಳಿಸುತ್ತವೆ.

ಒಳ್ಳೆಯ ದಾಂಪತ್ಯವೆಂದರೆ ಜಗಳವೇ ಇಲ್ಲದ ಬದುಕಲ್ಲ; ಜಗಳವಾದರೂ ಮತ್ತೆ ಮಾತನಾಡುವ ಮನಸ್ಸಿರುವ ಬದುಕು. ಸಮಸ್ಯೆಗಳೇ ಇಲ್ಲದ ಪಯಣವಲ್ಲ; ಸಮಸ್ಯೆಗಳ ನಡುವೆಯೂ ?ನಾವಿಬ್ಬರೂ ಒಟ್ಟಿಗಿದ್ದೇವೆ? ಎಂಬ ಭರವಸೆಯಿರುವ ಪಯಣ.

ರೂಪ ಬದಲಾಗಬಹುದು, ವಯಸ್ಸು ಬದಲಾಗಬಹುದು, ಜವಾಬ್ದಾರಿಗಳು ಬದಲಾಗಬಹುದು. ಆದರೆ ಮನಸ್ಸಿಗೆ ಹತ್ತಿರವಾದ ಸ್ನೇಹವಿದ್ದರೆ, ವರ್ಷಗಳ ಜೊತೆಯ ಬದುಕೂ ತನ್ನ ಹೊಸತನವನ್ನು ಕಳೆದುಕೊಳ್ಳುವುದಿಲ್ಲ.

ಮದುವೆಯ ಬಂಧಕ್ಕೆ ಪ್ರೀತಿಯ ಬಣ್ಣವಿದ್ದರೆ ಅದು ಸುಂದರ; ಅದಕ್ಕೆ ಸ್ನೇಹದ ಬಣ್ಣವೂ ಸೇರಿದಾಗ ಅದು ಜೀವಮಾನದ ಒಡನಾಟವಾಗುತ್ತದೆ.

ಜೀವನ ಸಂಗಾತಿಯನ್ನು ಪ್ರೀತಿಸುವುದು ದಾಂಪತ್ಯದ ಆರಂಭ; ಅವರನ್ನೇ ಒಬ್ಬ ಆತ್ಮೀಯ ಸ್ನೇಹಿತನಾಗಿ ಕಾಣುವುದು ದಾಂಪತ್ಯದ ನಿಜವಾದ ಸೌಂದರ್ಯ.

---

# ಆತ್ಮವಿಶ್ವಾಸವೇ ಶಿಖರ



| ಡಾ.ಸುಧಾಕರ.ಜಿ.ಲಕ್ಕವಳ್ಳಿ

"ಎಲ್ಲವೂ ಇದ್ದರೂ ಸಫಲರಾಗುವರೇ ಎಂಬ ಆತಂಕ ಕಾಡುತ್ತದೆ" ಎಂದು ನೊಂದ ಮನಸ್ಸುಗಳಿಗೆ ನೀಡಬೇಕಾದ ಸಂದೇಶ ಒಂದೇ: ತಮ್ಮ ಮೇಲೆ ತಾವೇ ನಂಬಿಕೆ ಇಡದೆ, ಮತ್ತಾರು ಇಡಬಲ್ಲರು? ವಿಜಯವು ಹೊರಗಿನಿಂದ ಬರುವ ಭಿಕ್ಷೆಯಲ್ಲ. ಅದು ಆಂತರಿಕ ಧೃತಿಯಿಂದ ಮೂಡುವ ಬೆಳಕು.

ಗುರಿಯತ್ತ ದೃಢ ನಿಶ್ಚಯದೊಂದಿಗೆ ಶ್ರಮಿಸಿದಾಗ ಸೋಲಿನ ನೆರಳು ಮಾಯವಾಗುತ್ತದೆ. ಆತ್ಮವಿಶ್ವಾಸವೇ ಜೀವನದ ಅಮೂಲ್ಯ ಬಂಡವಾಳ. ಈ ಸತ್ಯಕ್ಕೆ ಜೀವಂತ ನಿದರ್ಶನ ಅರುಣಿಮಾ ಸಿನ್ಹಾ. ರಾಷ್ಟ್ರೀಯ ವಾಲಿಬಾಲ್ ಆಟಗಾರ್ತಿಯಾಗಿದ್ದ ಅರುಣಿಮಾ ಅವರ ಬದುಕು 2011ರ ಏಪ್ರಿಲ್ 11ರ ರಾತ್ರಿ ದುರಂತಕ್ಕೆ ತುತ್ತಾಯಿತು. ಲಕ್ನೋ-ದೆಹಲಿ ರೈಲಿನಲ್ಲಿ ಕಳ್ಳರನ್ನು ಪ್ರತಿರೋಧಿಸಿದ ಕಾರಣಕ್ಕೆ ಹಳಿಗಳಿಗೆ ಎಸೆಯಲ್ಪಟ್ಟರು. ಎಡಗಾಲು ನಷ್ಟವಾಯಿತು, ಬೆನ್ನೆಲುಬಿಗೆ ಪೆಟ್ಟಾಯಿತು. ಏಳು ಗಂಟೆಗಳ ರಕ್ತಸ್ರಾವ ಮತ್ತು ಅರೆವಳಿಕೆಯಿಲ್ಲದ ಶಸ್ತ್ರಚಿಕಿತ್ಸೆಯ ಯಾತನೆಯನ್ನು ಸಹಿಸಿಕೊಂಡರು. ಸಮಾಜವು ಕ್ರೀಡಾ ಜೀವನ ಮುಗಿದಿದೆ ಎಂದು ತೀರ್ಮಾನಿಸಿತು. ಆದರೆ ಅರುಣಿಮಾ ಛಲ ಬಿಡಲಿಲ್ಲ.

ಸ್ಫೂರ್ತಿ ಸುಧೆ - 97



"ನೋವನ್ನೇ ಅವಕಾಶವನ್ನಾಗಿ ಪರಿವರ್ತಿಸಿದೆ" ಎಂಬ ಮಾತೇ ಅವರ ಅಗಾಧ ಮನೋಸ್ಥೈರ್ಯಕ್ಕೆ ಸಾಕ್ಷಿ. ಕೃತಕ ಕಾಲಿನೊಂದಿಗೆ ಎರಡು ವರ್ಷಗಳ ಕಾಲ ನಡೆಯಲು ಅಭ್ಯಾಸ ಮಾಡಿದರು. ಸರ್ಟಿಫಿಕೇಟ್ ನಷ್ಟದ ಅವಮಾನಗಳನ್ನು ದಾಟಿದರು. ಬಚೇಂದ್ರಿ ಪಾಲ್ ಅವರ ಮಾರ್ಗದರ್ಶನದಲ್ಲಿ ತಾಲೀಮು ನಡೆಸಿ 2013ರ ಮೇ 21ರಂದು ಎವರೆಸ್ಟ್ ಶಿಖರ ಏರಿದರು. ವಿಶ್ವದ ಮೊದಲ ವಿಶೇಷ ಚೇತನ ಮಹಿಳಾ ಎವರೆಸ್ಟ್ ವಿಜೇತೆಯಾಗಿ ಇತಿಹಾಸ ನಿರ್ಮಿಸಿದರು.

ಕಷ್ಟಗಳು ಎದುರಾದಾಗ ಕುಗ್ಗುವ ಬದಲು ಅವುಗಳನ್ನು ಮೆಟ್ಟಿಲುಗಳನ್ನಾಗಿ ಮಾಡಬೇಕು. ಅರುಣಿಮಾ ಅವರ ಛಲವು ಪ್ರತಿಯೊಬ್ಬರಿಗೂ ಪ್ರೇರಣೆಯಾಗಲಿ. ಆತ್ಮವಿಶ್ವಾಸ ಎಂಬ ಗಣಿಯನ್ನು ಅಗೆದರೆ, ವಿಜಯದ ಶಿಖರವನ್ನು ತಲುಪುವುದು ನಿಶ್ಚಿತ.

---

# ಭಾರತ ದರ್ಶನ-ನೂತನ ಉಪಕ್ರಮಕ್ಕೆ ಚಾಲನೆ

## ಶ್ರೀ ಸತ್ಯಸಾಯಿ ಶಾರದಾನಿಕೇತನ ಗುರುಕುಲದಲ್ಲಿ ೮೦ನೇ ಸ್ವಾತಂತ್ರ್ಯ ದಿನಾಚರಣೆ ಸಂಭ್ರಮ

**ಮಂಡ್ಯ:** ಜಿಲ್ಲೆಯ ಮಾರದೇವನಹಳ್ಳಿಯಲ್ಲಿರುವ ಶ್ರೀ ಸತ್ಯ ಸಾಯಿ ಶಾರದಾನಿಕೇತನ ಗುರುಕುಲದಲ್ಲಿ 80ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಅತ್ಯಂತ ಭಕ್ತಿ, ದೇಶಭಕ್ತಿ ಮತ್ತು ಸಾಂಸ್ಕೃತಿಕ ಸಡಗರದಿಂದ ಆಚರಿಸಲಾಯಿತು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಮಂಡ್ಯದ ಖ್ಯಾತ ದಂತ ವೈದ್ಯರಾದ ಡಾ. ಜಿ.ಸಿ. ಜಯಕುಮಾರ್, ಕುಮಾರ್ ದಂತ ಚಿಕಿತ್ಸಾಲಯ ಅವರು ಆಗಮಿಸಿದ್ದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, "ಸ್ವಾತಂತ್ರ್ಯವು ನಮಗೆ ಆನಂದವನ್ನು ನೀಡಬೇಕು. 'ನಾನು-ನನ್ನದು' ಎಂಬ ಸ್ವಾರ್ಥದ ಭೇದಭಾವವನ್ನು ತೊರೆದು 'ನಾವು-ನಮ್ಮದು' ಎಂಬ ನಿಸ್ವಾರ್ಥ ಮನೋಭಾವದಿಂದ ಮಾಡುವ ಸೇವೆಯೇ ನಿಜವಾದ ಆನಂದವನ್ನು ನೀಡುತ್ತದೆ. ಇಂದು ಶ್ರೀ ಸತ್ಯ ಸಾಯಿ ಗುರುಕುಲವು ಅಂತಹ ಸೇವೆಯಲ್ಲಿ ತೊಡಗುವ ಮೂಲಕ ವಿದ್ಯಾರ್ಥಿಗಳಲ್ಲಿ ರಾಷ್ಟ್ರಭಕ್ತಿ ಮತ್ತು ಮಾನವೀಯ ಮೌಲ್ಯಗಳನ್ನು ಬೆಳೆಸುತ್ತಿದೆ" ಎಂದು ಶ್ಲಾಘಿಸಿದರು.

**'ಭಾರತ ದರ್ಶನ' ನೂತನ ಉಪಕ್ರಮಕ್ಕೆ ಚಾಲನೆ:** ಕಾರ್ಯಕ್ರಮದ ಪ್ರಮುಖ ಆಕರ್ಷಣೆಯಾಗಿ ಗುರುಕುಲದ ನೂತನ ಉಪಕ್ರಮ ?ಭಾರತ ದರ್ಶನ? ಗೆ ಡಾ. ಜಯಕುಮಾರ್ ಅವರು ಚಾಲನೆ ನೀಡಿದರು.



ಪ್ರಸ್ತುತ ಪೀಳಿಗೆಗೆ ಭಾರತೀಯ ಸಂಸ್ಕೃತಿ, ಸಂಪ್ರದಾಯಗಳು ಮತ್ತು ಮಾನವೀಯ ಮೌಲ್ಯಗಳ ಕುರಿತು ಅರಿವು ಮೂಡಿಸುವುದೇ ಈ ಉಪಕ್ರಮದ ಉದ್ದೇಶವಾಗಿದೆ. ಇದರ ಅಡಿಯಲ್ಲಿ ಪ್ರತಿದಿನದ ಪ್ರಾರ್ಥನಾ ಸಮಯದಲ್ಲಿ ಭಾರತೀಯ ಋಷಿಮುನಿಗಳ ಪರಂಪರೆ, ಪಾರಂಪರಿಕ ಗಣಿತ, ವಿಜ್ಞಾನ ಮತ್ತು ಆಧ್ಯಾತ್ಮಿಕತೆಯ ಕುರಿತಾದ ವಿಷಯಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಲಾಗುವುದು. ಈ ವಿನೂತನ ಚಿಂತನೆಗೆ ಸಭೆಯಲ್ಲಿ ಹಾಜರಿದ್ದ ಎಲ್ಲಾ ಗಣ್ಯರು ಮತ್ತು ಪೋಷಕರು ಮೆಚ್ಚುಗೆ ವ್ಯಕ್ತಪಡಿಸಿದರು.

**ಸೇವಾ ಸನ್ಮಾನ ಮತ್ತು ಗಣ್ಯರ ಉಪಸ್ಥಿತಿ**

ಈ ಸಂದರ್ಭದಲ್ಲಿ ಗುರುಕುಲದ ಉಪ ನಿರ್ದೇಶಕರಾದ ಶ್ರೀ ಪ್ರವೀಣ್ ಕುಮಾರ್ ಟಿ.ಸಿ ಅವರು ಸ್ವಾಗತ ಭಾಷಣ ಮಾಡಿ ಸಂಸ್ಥೆಯ ಪರಿಚಯ ಮಾಡಿಕೊಟ್ಟರು.

ನಂತರ ಸಂಸ್ಥೆಯಲ್ಲಿ ಹಲವು ವರ್ಷಗಳಿಂದ ನಿಸ್ವಾರ್ಥ ಸೇವೆ ಸಲ್ಲಿಸುತ್ತಿರುವ ಇಬ್ಬರು ಸಿಬ್ಬಂದಿಗಳಿಗೆ ಗೌರವ ಸಮರ್ಪಣೆ ಮಾಡಲಾಯಿತು:

1. ಆಡಳಿತ ವರ್ಗದಲ್ಲಿ ಸೇವೆ ಸಲ್ಲಿಸುತ್ತಿರುವ ಶ್ರೀ ಶೃಂಗೇಶ್ವರ
2. ಸಂಸ್ಥೆಯ ಗೋಶಾಲೆಯಲ್ಲಿ ಸೇವೆ ಸಲ್ಲಿಸುತ್ತಿರುವ ಶ್ರೀ ನಿರಂಜನ್ ಮುಷಹರಿ

ಸಂಸ್ಥೆಯ ಅಧ್ಯಕ್ಷರಾದ ಡಾ. ಗೌರವ್ ಎಂ ಅವರು ವಂದನಾರ್ಪಣೆ ನೀಡುತ್ತಾ, "ಭಾರತದ ಯುವ ಪೀಳಿಗೆಯಾದ ನಾವು ದೇಶದ ಆತ್ಮವಾಗಿರುವ ಆಧ್ಯಾತ್ಮವನ್ನು ಜಾಗೃತಗೊಳಿಸಿ, ಜ್ಞಾನದ ಜ್ಯೋತಿಯನ್ನು ಅವಿರತವಾಗಿ ಬೆಳಗಿಸಬೇಕು. ಈ ಮೂಲಕ ಭಾರತದ ಆತ್ಮವನ್ನು ಕಾಪಾಡುತ್ತ, ಮುಂದಿನ ಪೀಳಿಗೆಗೆ ಮೌಲ್ಯಾಧಾರಿತ ಶಿಕ್ಷಣವನ್ನು ನೀಡಬೇಕಾಗಿದೆ" ಎಂದು ಆಶಿಸಿದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಡಾ. ಗೌರವ್ ಎಂ, ನಿವೃತ್ತ ಪ್ರಾಂಶುಪಾಲರಾದ ಪೂಜ್ಯ ಬಿ. ಸತ್ಯನಾರಾಯಣ, ಕಾರ್ಯದರ್ಶಿಗಳಾದ ಶ್ರೀ ಜಯರಾಮ ರೆಡ್ಡಿ, ಶೈಕ್ಷಣಿಕ ಸಂಯೋಜಕರಾದ ಶ್ರೀ ರಾಜು, ಶ್ರೀ ಚೇತನ್ ಕುಮಾರ್, ಶ್ರೀ ಹರ್ಷವರ್ಧನ್, ಹಾಸ್ಟೆಲ್ ಮುಖ್ಯಸ್ಥರಾದ ಶ್ರೀ ಕಾರ್ತಿಕ್ ಗೌಡ, ಶ್ರೀ ಮನು, ಶ್ರೀ ಬಾಬು, ಪ್ರಶಿಕ್ಷಣಾರ್ಥಿಗಳು, ನಿವೃತ್ತ ಸಿ.ಆರ್.ಪಿ.ಎಫ್ ಸಿಬ್ಬಂದಿ ಶ್ರೀ ರವೀಂದ್ರ, ಸಂಸ್ಥೆಯ ಹಿತೈಷಿಗಳಾದ ಶ್ರೀ ಶ್ರೀನಿವಾಸ ಶೆಟ್ಟಿ ಸೇರಿದಂತೆ ಹಲವಾರು ಗಣ್ಯರು ಉಪಸ್ಥಿತರಿದ್ದರು.











Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,